ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ

ವೀರಸೇನನ ಚಾರಿತ್ರ್ಯ

ಸಂಪಾದಕರು
ಪ್ರೊ. ಎಸ್. ಉಮಾಪತಿ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ-೫೮೫೧೦೬

BVP-1143- 2/2/17
G-1122 11/30

ವೀರಸೇನನ ಚಾರಿತ್ರ್ಯ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ
ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ
ಯೋಜನೆ – ೧

ವೀರಸೇನನ ಚಾರಿತ್ರ್ಯ

ಪ್ರಧಾನ ಸಂಪಾದಕರು
ಡಾ. ನಾಗಾಬಾಯಿ ಬಿ. ಬುಳ್ಳಾ
ಸಂಪಾದಕರು
ಪ್ರೊ. ಎಸ್. ಉಮಾಪತಿ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

VEERSENANA CHARITRYA

Chief Editor Dr. Nagabai B. Bulla Professor and Chairman
Institute of Kannada studies Gulbarga University, Gulbarga
Edited by: Prof. Umapathi S.
Funded by: Government of Karnataka
Published by : Institute of Kannada Studies
Gulbarga University, Gulbarga
ISBN : 978-81-920449-5-8

First Impression : 2012
Total Pages : xxviii + 158
Paper Used : 80 G. S.M.Maplitho
Price : Rs. 150.00
Cover Design by : Mahesh Shrigani

ವೀರಸೇನನ ಚಾರಿತ್ರ್ಯ

ಪ್ರಧಾನ ಸಂಪಾದಕರು ಡಾ. ನಾಗಾಬಾಯಿ ಬಿ. ಬುಳ್ಳಾ, ಪ್ರಾಧ್ಯಾಪಕರು
ಹಾಗೂ ಮುಖ್ಯಸ್ಥರು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ
ವಿಶ್ವವಿದ್ಯಾಲಯ, ಗುಲಬರ್ಗಾ
ಸಂಪಾದಕರು ಪ್ರೊ. ಎಸ್. ಉಮಾಪತಿ

ಪ್ರಕಾಶಕರು : ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ಪ್ರಥಮ ಮುದ್ರಣ : ೨೦೧೨
ಪುಟಗಳು: xxviii + ೧೫೮
ಬಳಸಿದ ಕಾಗದ : ೮೦ ಜಿ.ಎಸ್. ಎಮ್. ಮ್ಯಾಪಲಿಥೊ
ಬೆಲೆ : ರೂ. ೧೫೦.೦೦
ಕೃತಿ ದೊರೆಯುವ ಸ್ಥಳ : ಕನ್ನಡ ಅಧ್ಯಯನ ಸಂಸ್ಥೆ

ಮುದ್ರಕರು :

ಪ್ರಿಂಟ್ ಪಾರ್ಕ್

ಕ್ವಾಲಿಟಿ ಆಫ್ ಸೆಟ್ ಪ್ರಿಂಟರ್ಸ್
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ
ಶ್ರೀರಾಂಪುರಂ ಅಂಚೆ,
ಬೆಂಗಳೂರು - ೫೬೦ ೦೨೧.
ದೂ : ೦೮೦-೨೩೪೨೨೮೩೮

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನಾ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಸಂಚಾಲಕರು

ಪ್ರೊ. ನಾಗಾಬಾಯಿ ಬಿ. ಬುಳ್ಳಾ

ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ

ಡಾ. ವ್ಹಿ.ಜಿ.ಪೂಜಾರ

ಡಾ. ವೀರಣ್ಣ ದಂಡೆ

ಡಾ. ಎಚ್.ಟಿ.ಪೋತೆ

ಡಾ. ಜಯಶ್ರೀ ದಂಡೆ

ಡಾ. ಡಿ.ಬಿ.ನಾಯಕ

ಡಾ. ಬಸವರಾಜ ಸಬರದ

ಡಾ. ಬಿ.ಎಸ್. ಪೋಲಿಸ ಪಾಟೀಲ

ಡಾ. ಎಸ್.ಎಂ. ಹಿರೇಮಠ

ಡಾ. ರಾಜಪ್ಪ ದಳವಾಯಿ

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ವಿಧಾನಸೌಧ
ಬೆಂಗಳೂರು-560 001
ದಿ: 02.11.2011

ಕರ್ನಾಟಕ ಸರ್ಕಾರ

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ ತತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತಕರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ

ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಲ್ಲಿ ಹಲವಾರು ಹಸ್ತ ಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ
ಮುಖ್ಯಮಂತ್ರಿಗಳು

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿ: 16.11.2011

ಕರ್ನಾಟಕ ಸರ್ಕಾರ

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ 450 ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ ಹಲವು ಯೋಜನೆಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ

ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಅಮೂಲ್ಯವಾದ ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ ಪ್ರಧಾನ ಸಂಪಾದಕರಿಗೂ, ಸಂಪಾದಕರಿಗೂ ಅಭಿನಂದಿಸುವೆನು.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ

ಸಚಿವರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

2, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– 560 001
(22205781ಮ 2203400
ಫ್ಯಾಕ್ಸ್: 22353105
ಇ–ಮೇಲ್: secy-kc@karnataka. Gov.in

ದಿ: 24.10.2011

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.450ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ 5ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ

ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. 2009ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಹಸ್ತ ಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಯಲ್ಲಿ ಹಲವಾರು ಹಸ್ತ ಪ್ರತಿಗಳನ್ನು ಪ್ರಕಟಿಸಿದೆ.** ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತುಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು ಈ ಸಂಪುಟದ ಪ್ರಧಾನ ಸಂಪಾದಕರೂ ಮತ್ತು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– 560 001
ದಿ: 15.10.2011

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ವಚನಕಾರರು ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು

ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ 2009ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಅದರಡಿಯಲ್ಲಿ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯಲ್ಲಿ ಹಲವಾರು ಹಸ್ತಪ್ರತಿಗಳನ್ನು ಪ್ರಕಟಿಸಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ.ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ ಎಸ್.ಎಲ್. ಹಿರೇಮಠ ಅವರಿಗೆ, ಕನ್ನಡ ಅಧ್ಯಯನ ಸಂಸ್ಥೆಯ ಅದ್ಯಕ್ಷರೂ ಹಾಗೂ ಈ ಪ್ರಕಟಣಾ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ನಾಗಾಬಾಯಿ ಬಿ. ಬುಳ್ಳಾಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: 25.10.2011

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. 1970–71ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ

ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ಹಸ್ತ ಪ್ರತಿಗಳ ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆಯೂ ಒಂದಾಗಿದೆ. ಈ ಯೋಜನೆಯಲ್ಲಿ ಹಲವಾರು ಹಸ್ತ ಪ್ರತಿಗಳನ್ನು ಪ್ರಕಟಿಸಿದ್ದಾರೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿ ಕೊಟ್ಟಿರುವ ಸಂಪಾದಕರಿಗೂ ಈ ಸಂಪುಟದ ಪ್ರಧಾನ ಸಂಪಾದಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಹಸ್ತ ಪ್ರತಿಗಳು ನಮ್ಮ ನಾಡಿನ ಅಮೂಲ್ಯ ಆಸ್ತಿಗಳಾಗಿವೆ. ಪ್ರಾಚೀನ ಕಾಲದಲ್ಲಿ ತಾಳೆಗರಿಗಳ ಮೇಲೆ, ಬೂಜ್ವ ಪತ್ರಗಳ ಮೇಲೆ ಬರೆಯುತ್ತಿದ್ದರು. ನಂತರದ ಅವಧಿಯಲ್ಲಿ ಕೋರಿ ಕಾಗದಗಳಲ್ಲಿ ಬರೆಯತೊಡಗಿದರು. ಹತ್ತನೆಯ ಶತಮಾನದ ಹಳಗನ್ನಡ ಕಾವ್ಯಗಳಿಂದ ಹಿಡಿದು ನಡುಗನ್ನಡದ ವಚನ ಸಾಹಿತ್ಯ, ದಾಸರಕೀರ್ತನೆಗಳು, ತತ್ವಪದಗಳು, ವ್ಯಾಕರಣ ಗ್ರಂಥಗಳು, ಜೋತಿಷ್ಯ, ವೈದ್ಯಶಾಸ್ತ್ರ ಹಾಗೂ ಅನೇಕ ಧಾರ್ಮಿಕ ಗ್ರಂಥಗಳು ಹಸ್ತಪ್ರತಿಗಳಲ್ಲಿ ಇವತ್ತಿಗೂ ದೊರಕುತ್ತಿವೆ. ಆದರೆ ನಮ್ಮ ಅಲಕ್ಷ, ಅಜ್ಞಾನ ಹಾಗೂ ಮೂಢನಂಬಿಕೆಗಳಿಂದಾಗಿ ಹಲವಾರು ಮಠಗಳಲ್ಲಿ, ಮನೆಗಳಲ್ಲಿ ಪೂಜೆಗೊಳ್ಳುತ್ತ ದಯನೀಯ ಸ್ಥಿತಿಯಲ್ಲಿವೆ. ಕೆಲವೆಡೆ ನೈಸರ್ಗಿಕ ವಿಪತ್ತುಗಳಿಂದಲೂ ಹಸ್ತಪ್ರತಿಗಳು ನಶಿಸಿ ಹೋಗುತ್ತಿವೆ. ಇವುಗಳ ಸಂಗ್ರಹ ಸಂರಕ್ಷಣೆ ಹಾಗೂ ಅಪ್ರಕಟಿತ ಗ್ರಂಥಗಳ ಪ್ರಕಟಣೆ ಮಾಡುವ ಅವಶ್ಯಕತೆಯಿದೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಇದುವರೆಗೆ ದೊರೆತಿರುವ ೬೦೦೦ ಹಸ್ತಪ್ರತಿಗಳನ್ನು ಗುಲಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂರಕ್ಷಿಸಿ ಇಡಲಾಗಿದೆ. ಈ ಪ್ರದೇಶದ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಬಿಂಬಿಸುತ್ತಿರುವ ಈ ಹಸ್ತಪ್ರತಿಗಳ ಅಧ್ಯಯನ ಮಾಡಿ ಪ್ರಕಟಿಸುವ ಕಾರ್ಯ ಅತ್ಯಂತ ತ್ವರಿತಗತಿಯಲ್ಲಿ ನಡೆಯಬೇಕಾಗಿದೆ.

ಈ ಹಿನ್ನಲೆಯಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಲಭಿಸಿದ ಶುಭ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಕನ್ನಡ ಭಾಷಾ ಅಭಿವೃದ್ಧಿ ಅನುದಾನದ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಮ್ಮಿಕೊಂಡ ಹಲವು ಸಂಶೋಧನ ಯೋಜನೆಗಳಲ್ಲಿ "ಹಸ್ತಪ್ರತಿ ಸಂಗ್ರಹ ಸಂಪಾದನೆ ಹಾಗೂ ಪ್ರಕಟಣಾ ಯೋಜನೆ ಭಾಗ-೧" ಕೂಡ ಒಂದು. ಈ ಯೋಜನೆಯಲ್ಲಿ ಗಾಜೇಶಲಿಂಗನಲೀಲೆ, ಭೋಗೇಶ್ವರ ಪುರಾಣ, ಮಹಾಂತೇಶ್ವರ ಪುರಾಣ, ವೀರಸೇನನ ಚಾರಿತ್ರ್ಯ, ಕುಸನೂರ ಸಿದ್ಧೇಶ್ವರ ಪುರಾಣ, ಸಾಂಗತ್ಯ ಸಂಪುಟ -೧, ಶತಕ ಸಂಪುಟ, ಹಾಗೂ ಹಸ್ತಪ್ರತಿಗಳಲ್ಲಿ ಚಿತ್ರಕಲೆ'ಗಳ ಮುದ್ರಣ ಕಾರ್ಯವನ್ನು

ಪ್ರಥಮ ಹಂತದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ೧೯೯೪ರಲ್ಲಿ ಹಸ್ತಪ್ರತಿ ಸಂಗ್ರಹ ಕಾರ್ಯವು ಪತ್ರಾಗಾರ ಇಲಾಖೆಯಿಂದ ನಡೆದಿತ್ತು, ಆ ಹಸ್ತಪ್ರತಿ ಸಂಗ್ರಹದೊಳಗಿನ ಒಂದೆರಡು ಹಸ್ತಪ್ರತಿಗಳನ್ನು ಹಾಗೂ ಬೇರೆ ಬೇರೆ ಕಡೆಗಳಿಂದ ಕೆಲವು ಹಸ್ತ ಪ್ರತಿಗಳನ್ನು ಸಂಗ್ರಹಿಸಿ ಸಂಪಾದನಾ ಕಾರ್ಯವನ್ನು ವಹಿಸಿಕೊಟ್ಟು ಅಪ್ರಕಟಿತ ಪುಸ್ತಕಗಳನ್ನು ಪ್ರಕಟಿಸಲು ಸಿದ್ಧತೆ ಮಾಡಿಕೊಳ್ಳಲಾಯಿತು.

ಪ್ರಸ್ತುತ ಕೃತಿ ವೀರಸೇನನ ಚಾರಿತ್ರ್ಯವನ್ನು ಪ್ರೊ ಎಸ್. ಉಮಾಪತಿ (ನಿವೃತ್ತ ಪ್ರಾಧ್ಯಾಪಕರು) ದಾವಣಗೆರೆ. ಇವರು ಸಂಪಾದಿಸಿಕೊಟ್ಟಿರುವರು. ಈ ಕೃತಿಗೆ ಪ್ರಸ್ತಾವನೆ ಹಾಗೂ ಅನುಬಂಧಗಳನ್ನು ಸುಧೀರ್ಘವಾಗಿ ಬರೆದಿರುವರು. ಹಸ್ತ ಪ್ರತಿ ಯೋಜನೆಯವತಿಯಿಂದ ಸಂಪಾದಕರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವೆನು. ಈ ಹಸ್ತಪ್ರತಿಯನ್ನು ಪರಿಶೀಲಿಸಿದ ಪ್ರೊ ವೀರಣ್ಣ ರಾಜೂರ. ಅವರಿಗೂ, ಈ ಯೋಜನೆಯು ರೂಪುಗೊಳ್ಳುವಲ್ಲಿ ಸೂಕ್ತ ಮಾರ್ಗದರ್ಶನ ಮಾಡಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ಈ.ಟಿ. ಪುಟ್ಟಯ್ಯನವರಿಗೂ ಕುಲಸಚಿವರಾದ ಪ್ರೊ. ಎಸ್. ಎಲ್. ಹಿರೇಮಠಅವರಿಗೂ ಹಾಗೂ ಅಧಿಕಾರಿಗಳಿಗೂ ಕೃತಜ್ಞಳಾಗಿರುವೆನು.

ಈ ಕೃತಿಯ ಅಕ್ಷರ ಸಂಯೋಜನೆ ಹಾಗೂ ಮುದ್ರಣವನ್ನು ಸುಂದರವಾಗಿ ಮಾಡಿರುವ ಬೆಂಗಳೂರಿನ ಮೆ॥ ಪ್ರಿಂಟ್ ಪಾರ್ಕ್ ಮಾಲೀಕರಾದ ಶ್ರೀ ಜಿ.ಬಿ. ಪಾಟೀಲ್ ಇವರಿಗೆ ಕೃತಜ್ಞತೆಗಳು.

ಡಾ. ನಾಗಾಬಾಯಿ ಬಿ. ಬುಳ್ಳಾ

ಪ್ರಧಾನ ಸಂಪಾದಕರು

ಪ್ರಸ್ತಾವನೆ

ಇದೊಂದು ಪುರಾಣ ಕಾವ್ಯ. ಕವಿಯೇ ಹೇಳಿಕೊಂಡಿರುವಂತೆ ಈ ಕಾವ್ಯ ಸ್ಕಂದ ಪುರಾಣದ ಆಧಾರದ ಮೇಲೆ ರಚಿತವಾಗಿದೆ. ಇದು ಭಕ್ತಿ ಪ್ರಧಾನವಾದುದು.

ಸ್ಕಂದಪುರಾಣದೊಳಿರ್ದ ಕಥೆಯನಾ
ನೊಂದ ಕೇಳೆನ್ನ ಮನಸಿಗೆ
ಬಂದೊಲು ಪೇಳಿದ ಕಬ್ಬಮ ಬಲ್ಲರು
ಅಂದವಿಟ್ಟದನೊಳಿತೆನಸಿ ೧-೭

ಎಂದು ಕವಿಯ ಹೇಳಿಕೆ. ಆದರೆ ಸ್ಕಂದಪುರಾಣದ ಈಗ ಪ್ರಕಟವಾಗಿರುವ ಯಾವ ಭಾಗದಲ್ಲಿಯೂ ಈ ಕವಿ ಬಳಸಿಕೊಂಡಿರುವ ಕಥೆ ಕಂಡುಬರುವುದಿಲ್ಲ. ಕಾರಣ ಕವಿಯ ಸ್ವಂತಿಕೆ ಎಷ್ಟು ಎಂಬುದನ್ನು ತಿಳಿಯಲು ಸಾಧ್ಯವಾಗಿಲ್ಲ ಮತ್ತು ಸ್ಕಂದಪುರಾಣದ ಕತೆಗೆ ಈ ಕವಿ ಎಷ್ಟರಮಟ್ಟಿಗೆ ಋಣಿಯಾಗಿದ್ದಾನೆಂಬುದನ್ನು ವಿಮರ್ಶಿಸಲು ಸಹ ಸಾಧ್ಯವಾಗಿಲ್ಲ. ಈ ಕೃತಿ ಸಾಂಗತ್ಯದಲ್ಲಿದೆ. ಸಾಂಗತ್ಯ ಜನಪದ ಶೈಲಿ, ಹಾಡು ಗಬ್ಬ. 'ಸಂಗತಿ' – 'ಪದ' ಎಂಬ ಮಾತುಗಳನ್ನು ಕವಿಗಳು ಬಳಸಿರುವುದು ಕಂಡುಬರುತ್ತದೆ. 'ಸಂಗತಿ' ಎಂದರೆ ಹಾಡು ಎಂಬ ಅರ್ಥ ಕೂಡ ಇದೆ. ಇದರಿಂದ ಕನ್ನಡದಲ್ಲಿ ಷಟ್ಪದಿಯ ನಂತರ ಈ ಛಂದಸ್ಸು ಜನತೆಯ ಮನಸ್ಸನ್ನು ಹೃದಯವನ್ನು ತಟ್ಟಲು, ಮುಟ್ಟಲು ಸಾಧ್ಯವಾಗಿದೆ ಎನ್ನಬಹುದು. ಬಹುಶಃ ಚೆನ್ನಬಸವ ಪುರಾಣ ಮತ್ತು ಜೈಮಿನಿ ಭಾರತದಂತಹ ಷಟ್ಪದಿ ಕಾವ್ಯಗಳು ಬಂದ ನಂತರ, ಮುಂದೆ ಸಾಂಗತ್ಯ ಕೃತಿಗಳು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡಿರುವುದು ಕಂಡುಬರುತ್ತದೆ. ಸುಮಾರು ಕ್ರಿ.ಶ. ೧೫೨೫ರ ಹೊತ್ತಿಗಾಗಲೆ ಸಾಂಗತ್ಯ ಕನ್ನಡ ಸಾಹಿತ್ಯದಲ್ಲಿ ಭದ್ರವಾಗಿ ನೆಲೆಯೂರಿರುವುದು ನಂಜುಂಡ ಕವಿಯ 'ರಾಮನಾಥ ಚರಿತ್ರೆ' ಎಂಬ ಐತಿಹಾಸಿಕ ಕಾವ್ಯದಿಂದ ತಿಳಿದುಬರುತ್ತದೆ. ಕಾವ್ಯ ಸತ್ವದ ದೃಷ್ಟಿಯಿಂದ ಈ ಕೃತಿ ಉತ್ತಮ ಎನ್ನಲಾಗಿದೆ. ರತ್ನಾಕರ ವರ್ಣಿಯ 'ಭರತೇಶ ವೈಭವ' ಕ್ರಿ.ಶ. ೧೫೫೭ ರಲ್ಲಿ ರಚಿತವಾದ ಒಂದು ಮಹಾಕಾವ್ಯ. ಗಾತ್ರದ ದೃಷ್ಟಿಯಿಂದಲೂ ಇದು ಮಹಾಕಾವ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಾಂಗತ್ಯ ಶೈಲಿ ಈ ಕೃತಿಯಲ್ಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿದೆ ಎಂದೇ

ಹೇಳಬೇಕು. ಆದಿಕವಿ ಪಂಪನ 'ಆದಿಪುರಾಣ'ದ ನಂತರ ರತ್ನಾಕರವರ್ಣಿಯು ಭರತೇಶ ವೈಭವವನ್ನು ರಚಿಸಿ ಸಹೃದಯರ ಪ್ರೀತಿ, ಗೌರವ, ಆದರಗಳಿಗೆ ಪಾತ್ರನಾದುದು ಪ್ರತಿಭೆಯ ಪವಾಡವೇ ಸರಿ. ಕನ್ನಡದಲ್ಲಿ ಮುಂದೆ ಅಂತಹ ಕೃತಿ ರಚನೆಯಾಗಲಿಲ್ಲವೆಂದೇ ಹೇಳಬೇಕು. ಜೈನ, ವೀರಶೈವ ಕವಿಗಳು ಮತ ತತ್ವ, ಭಕ್ತರ ಚರಿತ್ರೆ, ಶಿವಲೀಲೆ ಮುಂತಾದವುಗಳನ್ನು ವಿವರಿಸಲು ಸಾಂಗತ್ಯವನ್ನು ಉಪಯೋಗಿಸಿಕೊಂಡಿದ್ದಾರೆ ಹಾಗೂ ಆ ಛಂದಸ್ಸನ್ನು ಬಳಸಿಕೊಂಡು ಉತ್ತಮ ಸಾಧನೆಯನ್ನು ಮಾಡಿದ್ದಾರೆ.

ಕ್ರಿ.ಶ. ೧೫೫೦ರ ಸುಮಾರಿನಲ್ಲಿ ರಚಿತವಾದ ಕನಕದಾಸರ 'ಮೋಹನ ತರಂಗಿಣಿ' ಪ್ರಾಯಶಃ ಮೊದಲ ವೈಷ್ಣವ ಪರ ಸಾಂಗತ್ಯ ಕೃತಿ, ಕೃಷ್ಣ ಚರಿತೆಯೇ 'ಈ ಕಾವ್ಯದ ವಸ್ತು. ೧೬೮೦ರಲ್ಲಿ ರಚಿತವಾದ ಸಂಚಿ ಹೊನ್ನಮ್ಮನ ಹದಿಬದೆಯ ಧರ್ಮ' ಸಹ ಇಲ್ಲಿ ಹೆಸರಿಸಬಹುದಾದ ಕೃತಿ.

ಕೆಲವು ಕಾವ್ಯಗಳನ್ನು ಹೊರತುಪಡಿಸಿ ಹೇಳುವುದಾದರೆ ಸಾಂಗತ್ಯ ಕೃತಿಗಳಲ್ಲಿ ಛಂದಸ್ಸು, ಅನೇಕ ಕಡೆಗಳಲ್ಲಿ ಶಿಥಿಲವಾಗಿರುವುದು ಕಂಡುಬರುತ್ತದೆ. ಭಾಷೆ ತೀರ ಗ್ರಾಮ್ಯಕ್ಕೆ ತಿರುಗಿದೆ. ನಯನಾಜೂಕು ಇಲ್ಲದೆ ಕಾವ್ಯಗಳು ಬರಗಾಲದ ಬರಡು ದನಗಳಂತೆ ಬಡಕಲಾಗಿ ಕಳಾಹೀನತೆಯಿಂದ ಸೊರಗಿವೆ ಎಂದು ಹೇಳಬಹುದು.

ಪ್ರಕೃತ ವೀರಸೇನನ ಚಾರಿತ್ರ್ಯ ವಿಭೂತಿ ರುದ್ರಾಕ್ಷಿ ಮತ್ತು ಶಿವರಾತ್ರಿ ಮಹಿಮೆಯನ್ನು ಹೇಳುವ ಕೃತಿ. ಕತೆಯೇ ಇಲ್ಲದ ಕತೆಯನ್ನು ವರ್ಣನೆಗಳಿಂದ ಕವಿ ಏಳು ಸಂಧಿಗಳು – ಎಂಟುನೂರ ಮೂವತ್ತೇಳು ಪದ್ಯಗಳವರೆಗೆ ವಿಸ್ತರಿಸಿದ್ದಾನೆ. ವಿಭೂತಿ ಮಹಿಮೆ ಮತ್ತು ಶಿವರಾತ್ರಿ ಮಹಿಮೆಯನ್ನು ಭಕ್ತರ ಉಪಕತೆಗಳ ಮೂಲಕ ಕೇಳುವವರ ಹೃದಯಕ್ಕೆ ತಟ್ಟುವಂತೆ ಹೇಳಿದ್ದಾನೆ. ಕಾವ್ಯದ ಆರನೆಯ ಸಂಧಿಯಲ್ಲಿ ಬರುವ ಸಾಳುವ ಪಕ್ಷಿಗಳ ಯುದ್ಧ ವರ್ಣನೆ ತುಂಬಾ ಸ್ವಾರಸ್ಯವಾಗಿ ಮೂಡಿಬಂದಿದೆ. ನಾಲ್ವತ್ತೂರನೆಯ ಪದ್ಯದಿಂದ ಒಂದುನೂರಾ ಎರಡನೆಯ ಪದ್ಯದವರೆಗೆ ವಿಸ್ತಾರವಾಗಿ ಮಾಡಿದ ಈ ಯುದ್ಧ ವರ್ಣನೆ ಎರಡು ಪಕ್ಷಿಗಳ ನಡುವೆ ನಡೆಯುವುದಾದರೂ ಅದು ಇಬ್ಬರು ಮಹಾ ಯೋಧರ ಮಧ್ಯೆ ನಡೆದಂತೆ ಭಾಸವಾಗುತ್ತದೆ. ಇಬ್ಬರು ವೀರರು ಹೋರಾಡುವ ಚಿತ್ರ ನಮ್ಮ ಕಣ್ಣು ಮುಂದೆ ನಿಲ್ಲುವಂತೆ ಕವಿ ತುಂಬಾ ಜಾಣ್ಮೆಯಿಂದ ವಿವರಿಸಿದ್ದಾನೆ. ಪಕ್ಷಿಗಳಾಗಲಿ, ಮಾನವರಾಗಲಿ ತಮ್ಮ ತಮ್ಮ ಆತ್ಮಗೌರವ, ಕುಲಗೌರವಕ್ಕೆ ಚ್ಯುತಿ ಬಾರದಂತೆ ಎಷ್ಟರಮಟ್ಟಿಗೆ ಹೋರಾಡಬಹುದೋ ಅಷ್ಟರಮಟ್ಟಿಗೆ ಈ ಪಕ್ಷಿಗಳು ಹೋರಾಡುತ್ತವೆ. ಈ ಹೋರಾಟದ ಮಧ್ಯೆ ಮಧ್ಯೆ ಯುದ್ಧ ಭೂಮಿಯಲ್ಲಿ ವೀರರು ಒಬ್ಬರನ್ನೊಬ್ಬರು ಕೆಣಕಿ ಕಟಕಿಯಿಂದ ಕುಟುಕಿ

ಮಾತಾಡುವಂತೆ ಪಕ್ಷಿಗಳೂ ಮಾತಾಡುತ್ತವೆ. ಒಂದನ್ನೊಂದು ಹೀಯಾಳಿಸಿ ಮಾತಾಡುತ್ತಲೇ ಹೋರಾಟ ಮುಂದುವರಿಸಿರುವುದೊಂದು ಈ ದೃಶ್ಯದ ವಿಶೇಷ. ಕನ್ನಡ ಸಾಹಿತ್ಯದಲ್ಲಿ ಅನೇಕ ಯುದ್ದರಂಗದ ದೃಶ್ಯಗಳು ಕಂಡುಬರುತ್ತವೆ. ಮಹಾಭಾರತ ರಾಮಾಯಣ, ಜೈಮಿನಿ ಭಾರತ – ಇವುಗಳಲ್ಲಿ ಇಂತಹವು ಇವೆ. ಅಲ್ಲಿ ಬರಿ ಕಾಳಗದ ಕತೆಗಳು ಬರುತ್ತವೆ ಎಂಬ ಅಪವಾದಕ್ಕೆ ಗುರಿಯಾಗುವಷ್ಟು ಇವೆ. ಆದರೆ ಬೇರೆಲ್ಲಿಯೂ ಇಂತಹ ಪಕ್ಷಿಗಳ ಯುದ್ಧ ಕಂಡುಬರುವುದಿಲ್ಲ. ಪಂಚತಂತ್ರದ ಮೂರನೆಯ ಪ್ರಕರಣವಾದ ವಿಶ್ವಾಸ ಪ್ರಕರಣದ 'ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟಕಥೆ'ಯಲ್ಲಿ ಯುದ್ಧ ವರ್ಣನೆ ಬರುತ್ತದೆ. ಅಲ್ಲಿ ಮೇಘ ವರ್ಣ ಎಂಬ ಕಾಗೆಗಳ ರಾಜನು ತನ್ನ ಮಂತ್ರಿಗಳೊಡನೆ ನಡೆಸಿದ ಮಂತ್ರಾಲೋಚನೆ ತುಂಬಿದೆ. ಆದರೆ ಅಲ್ಲಿ ಯಾವ ನೇರವಾದ ಯುದ್ಧ ನಡೆದುದು ಕಂಡುಬರುವುದಿಲ್ಲ. ಗೂಗೆಗಳು ಮೋಸದಿಂದ ರಾತ್ರಿ ಕಾಗೆಗಳನ್ನು ನಾಶಪಡಿಸಿದರೆ, ಕಾಗೆಗಳು ಹಗಲು ಗೂಗೆಗಳ ಗುಹೆಗೆ ಕೊಳ್ಳಿ ಇಟ್ಟು ಸುಟ್ಟ ಕತೆ ಇದೆ. ಕಾರಣ ಈ ಸಾಂಗತ್ಯದಲ್ಲಿ ಬರುವ ಪಕ್ಷಿಗಳ ಹೋರಾಟದ ದೃಶ್ಯ ಈ ಕವಿಯ ವಿಶೇಷ ಕೊಡುಗೆ ಎಂದೇ ಹೇಳಬಹುದು.

ಕವಿ ತನ್ನ ಸ್ವಂತ ವಿಚಾರವನ್ನು ಕಾವ್ಯದಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಆತನ ಹೆಸರು, ಕಾಲ, ದೇಶ ತಿಳಿದಿಲ್ಲ. ೭–೧೪೩ನೆಯ ಪದ್ಯದಲ್ಲಿ ಬೆಳವಡಿರಾಯ ಈಶ ಪ್ರಭುವನ್ನು ಸ್ಮರಿಸಿರುವುದರಿಂದ ಈ ಕವಿಯು ಕ್ರಿ.ಶ. ೧೬೮೦–೧೭೦೦ರಲ್ಲಿ ಇದ್ದಿರಬಹುದೆಂದು ಊಹಿಸಬಹುದಾಗಿದೆ.

ತಾನು ಗುರು ಶಾಂತೇಶನ ಶಿಷ್ಯನೆಂದು ಪದ್ಯ ೧–೫ ರಲ್ಲಿ, ಆರಾಧ್ಯ ಸಲಹು ಶಾಂತೇಶ ಎಂದು ಪದ್ಯ ೧–೧೯ರಲ್ಲಿ, ಶಿವನನ್ನು, ೧–೧೭ ರಿಂದ ೧–೧೮ ರವರೆಗಿನ ಪದ್ಯಗಳಲ್ಲಿ ಸ್ತುತಿಸಿ ವೀರಭದ್ರ, ಷಣ್ಮುಖ, ಶ್ರೀ ವೃಷಭೇಂದ್ರ, ಗುರು ಬಸವೇಶ ಚನ್ನಬಸವ, ಆದಯ್ಯ, ಗುರುಭಕ್ತ, ಅಮುಗಿದೇವಯ್ಯ, ಶಾಂತೇಶ, ಮೇದಾರ ಕೇತಯ್ಯ, ಸೇದಿರಾಜಯ್ಯ, ಮಡಿವಾಳ ಮಾಚಿದೇವ ಮುಂತಾದ ಶಿವಶರಣರನ್ನು ಮುಂದಿನ ಪದ್ಯಗಳಲ್ಲಿ ಸ್ಮರಿಸಿ ಅವರಿಗೆ ಗೌರವವನ್ನು ಸೂಚಿಸಿದ್ದಾನೆ. ಕವಿ ಕಾಳಿದಾಸ, ರಾಘವ, ಚಾಮರಸ, ಪದ್ಮರಸ, ಹರಿಹರ ಮುಂತಾದವರನ್ನು ಸ್ತುತಿಸಿದ್ದಾನೆ.

"ತಿಂಗಳ ಶಿವರಾತ್ರಿಲಿ ಲಿಂಗವನರ್ಚಿಸಿ
ಗಂಗಾಧರನ ಕೃಪೆ ಪಡೆದ।
ಮಂಗಳಮಯ ವೀರಸೇನ ಭೂಪಾಲನ
ಸಂಗತ್ಯ ಕೇಳಿ ಸಜ್ಜನರು" ೧–೨೮

ಎಂದು ತನ್ನ ಕಾವ್ಯವನ್ನು ಕೇಳಿ ಜೀವನ್ಮುಕ್ತಿಯನ್ನು ಪಡೆಯಬೇಕೇ ವಿನಃ

"ಸಾವವರ ಕಥೆಗೇಳಿ ಜನನದ ಬೇಗಿಂದ
ಬೇವವರ ಮಾತಿನಂತಲ್ಲ।
ಪಾವನಪ್ಪುದು ಕೇಳ್ದರ ಜನ್ಮವು
ಈ ವೀರ ಭಕ್ತ ಚರಿತವ॥" ೧–೧೧

ಎಂದು ತನ್ನ ಕಾವ್ಯದ ಶ್ರೇಷ್ಠತೆಯನ್ನು ಮೆರೆದಿದ್ದಾನೆ. ಕಥೆಯ ನಿರೂಪಣೆಯಲ್ಲಾಗಲಿ, ಪಾತ್ರಚಿತ್ರಣದಲ್ಲಾಗಲಿ ಕವಿಗೆ ಸ್ವಾತಂತ್ರ್ಯವಿಲ್ಲ. ಪುರಾಣದ ಕತೆ ಪಾತ್ರಗಳನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಬೇಕಾದ ಅನಿವಾರ್ಯತೆ. ಆದರೆ ವರ್ಣನಾ ವಿಭಾಗದಲ್ಲಿ ಆ ನಿರ್ಬಂಧವಿಲ್ಲ, ಕಾರಣ ಕವಿಯ ಲೇಖನಿ ಇಲ್ಲಿ ಚುರುಕಾಗಿರುವುದು ಕಂಡುಬರುತ್ತದೆ. ಅಂತು ಒಮ್ಮೆ ಓದಿ ಸಂತೋಷ ಪಡಬಹುದಾದ ಕಾವ್ಯವನ್ನು ಈ ಕವಿ ಕನ್ನಡಿಗರಿಗೆ ಕೊಟ್ಟಿದ್ದಾನೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಭಕ್ತಿಯನ್ನು ವಿವರಿಸುವುದರ ಜೊತೆಗೆ ಜೀವನದಲ್ಲಿ ಕಾಮ ಕ್ರೋಧ ಮುಂತಾದವುಗಳ ಸೆಳೆತಕ್ಕೆ ಸಿಕ್ಕು ಮಾನವ ಹೇಗೆ ಕಷ್ಟ ಪರಂಪರೆಗೆ ಗುರಿಯಾಗುತ್ತಾನೆ ಎಂಬುದನ್ನು ತನ್ನ ವಿಶಾಲವಾದ ಲೋಕಾನುಭವದಿಂದ ಎತ್ತಿಕೊಂಡ ಅನೇಕ ಉಪದೇಶದ ನೀತಿ ವಾಕ್ಯಗಳಿಂದ, ಹಿತನುಡಿಗಳಿಂದ, ಲೋಕೋಕ್ತಿಗಳಿಂದ, ಉಪಮಾನ ಸಾದೃಶ್ಯಗಳಿಂದ ವಿವರಿಸುವುದರಲ್ಲಿ ಯಶಸ್ಸನ್ನು ಸಾಧಿಸಿದ್ದಾನೆ.

"ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು ಹಾವನಾಡಿಸುವಂತೆ, ಆವ ಮಾತನಾಡಿದರೂ ತನ್ನ ಕಾಯ್ದು ಆಡಬೇಕು, ಅದೆಂತೆಂದಡೆ;

ತನ್ನ ವಚನವೆ ತನಗೆ ಹಗೆಯಹುದಾಗಿ, ಅನ್ನಿಗರಿಂದ ಬಂದಿತ್ತೆನ್ನಬೇಡ; ಅಳಿವುದು ಉಳಿವುದು ತನ್ನ ವಚನದಲ್ಲಿಯೇ ಅದೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ, ಹಗೆಯು ಕೆಳೆಯು ತನ್ನ ವಚನವೆ ಬೇರಿಲ್ಲ."

ಎಂದು ಸ್ವತಂತ್ರ ಸಿದ್ಧಲಿಂಗೇಶ್ವರರು ಮಾತಿನ ಜಾಣ್ಮೆಯ ಬಗೆಗೆ, ಅದರ ಆಗುಹೋಗುಗಳ ಬಗೆಗೆ ಹೇಳಿರುವಂತೆ, ಪ್ರಕೃತ ಸಾಂಗತ್ಯದ ಕವಿಯೂ ಸಹ.

"ನಾಲಿಗಿಂದಲಿ ಮಿತ್ರ ಬಾಂಧವರಪ್ಪರು,
ನಾಲಿಗಿಂದಪ್ಪುದು ಸಿರಿಯು।
ನಾಲಿಗಿಂದಲಿ ಸಾವು ಬಂಧನ ಪ್ರಾಪ್ತಿಯು
ನಾಲಿಗಿಂದಧಿಕಮಿಲ್ಲೆಂದ॥" ೬–೭೯

ಎಂಬ ಪದ್ಯದಲ್ಲಿ "ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು" – ಎಂಬ ಜನಜನಿತವಾದ ನಾಣ್ನುಡಿಯ ಇಂಗಿತವನ್ನು ತುಂಬಾ ಸೊಗಸಾಗಿ ಹಾಡಿದ್ದಾನೆ. ಮಾತು ಹಗೆಯು ಕೆಳೆಯು, ಸಾವು ಬಂಧನ, ಅಳಿವು, ಉಳಿವು, ಎಲ್ಲವೂ ಆಗಬಲ್ಲದು ಎಂಬುದನ್ನು ಇಬ್ಬರು ದಾರ್ಶನಿಕರು ಜನಸಾಮಾನ್ಯರಿಗೆ ಹಿತವಚನವನ್ನು ಸಾರಿ, ಬದುಕುವ ದಾರಿ ತೋರಿಸಿಕೊಟ್ಟಿದ್ದಾರೆ.

ವರ್ಣನೆಗಳು :

ಮುನ್ನೆತಿವರ ಸೂತನೆಂಬ ಗುರೋತ್ತಮ
ತನ್ನ ಶಿಷ್ಯನಿಗೊಲವಿಂದ ।
ಕನ್ನಡಿಸಿ ಪೇಳಿದ ಕಥೆಯಿದು ಭಕ್ತ ಸಂ
ಪನ್ನರೊಲಿದು ಲಾಲಿಪುದು । ೧ – ೩೨

ಎಂದು ಕಥೆಯ ಸ್ವರೂಪವನ್ನು ಒಂದು ಪದ್ಯದಲ್ಲಿ ಸಂಗ್ರಹಿಸಿದ್ದಾನೆ :

ಪೊಂಬಾಳೆ ರಸದಾಳೆ ನಾಗವಲ್ಲಿಯದೋಟ
ಕಾಬಳತೆಯೊಳಾವಕಡೆಯು ।
ಶ್ರೀ ಬನ ಕೆರೆ ಕಾಲ್ವೆ ಗಂಧಸಾಳಿಗಳಿಂದ
ಶೋಭನ ರಾಜ್ಯ ಕಣ್ಗೆಸೆಯೆ । ೧ – ೬೬

ರಾಜ್ಯದ ಸಂಪತ್ತಿನ ವರ್ಣನೆ :

ಪೇಳಲರಿಯನು ದುರ್ನೀತಿ ದುರ್ಗುಣವನು ।
ಕೇಳಲರಿಯ ಕೊಂಡೆತನವ
ಆಳಲರಿಯನಪಕೀರ್ತಿಯನಾ ಭೂ
ಪಾಲನೊಪ್ಪಿಹ ನೃಪಾಲ ॥ ೧ – ೭೯

ಅಂಬುವಿನೊಳಗಾಗದಳಿ ತುಡುಕದ ರವಿ
ಬಿಂಬಕಮ್ಮದ ನೈದಿಲೆಯು
ಎಂಬಂತೆ ಸತಿಯ ವದನದೆಡೆಯೊಪ್ಪಿರ್ದ
ವಂಬಕವನೇನ ಬಣ್ಣಿಪೆನು । ೧ – ೮೯

ರಾಣಿಯ ಕಣ್ಣುಗಳ ವರ್ಣನೆ :

ಆ ವಸಂತ ಭೂಪನು ಬನದೇವಿಗೆ
ಪೂವಣ್ಣು ಫಲತಳಿರಿಂದ ।
ತೀವಿ ಪೂಜೆಯಾಗಲಟ್ಟಿದಂತಿರ್ದುದಾ ಬನ
ಭಾವಕಿಯರ ಕಣ್ಣಿಗೆಂದ । ೨ – ೪೭

ಕಂಪಿಸುವ ಇರವಂತಿ ಸುರಗಿ ಶಾವಂತಿಯ
ಕಂಪೆಸೆವ ಮೊಲ್ಲೆ ಜಾಜಿಯನು
ಚಂಪಕ ಮೊದಲಾದ ಪೂಗಳ ಸೂಡಿದ
ತಂಪಿನ ಬನದೊಳರ್ಥಿಯಲಿ । ೨ - ೯೪

ಉದ್ಯಾನವನ ವರ್ಣನೆ :

ಕಾವಿಯ ದೋತ್ರದ ಕೆಂಜೆಡೆ ಸುಲಿಪಲ್ಲು ।
ತೀವಿದ ಭಸ್ಮ ಸರ್ವಾಂಗ ।
ತೀವಿದ ರುದ್ರಾಕ್ಷೆ ಕೊರಳೊಳಗೊಪ್ಪುವ
ಪಾವನ ಮುನಿ ಕಂಗೆಸದ । ೨ - ೧೦೨

ಋಷಿ ಮುನಿ ವರ್ಣನೆ :

ಇಂಗಡಲ ಕಡೆವಲ್ಲಿ ಸಿಡಿವನಿ ನೆಗೆದಿಂದು ।
ತಂಗದಿರನ ಪತ್ತಿದಂತೆ
ಹೆಂಗಳ ನೊಸಲ ಭೂತಿಯ ಬೊಟ್ಟು ರಾಯನ ।
ಕಂಗೆಸೆದುದು ಕಂದ ಕೇಳು ೩ - ೧೮

ಇಂತಹ ನೊಸಲ ಬೊಟ್ಟನ್ನು ಕಂಡ ಅರಸನಿಗೆ

ಗುಂಡಿಗೆಯೊಳು ಕೋಪ ಮಸಗಿ ಅರಸನ ಕಣ್ಣು
ಕೆಂಡದೊಲಾಗೆ ಕೇಳ್ಮಗನೆ । ೩–೨೮

ಕೆಂಡ ಪದದ ಪ್ರಯೋಗ ಸಮಯೋಚಿತ ಹಾಗೂ ಔಚಿತ್ಯ ಪೂರ್ಣವಾಗಿದೆ.

ಆ ತಾಪಸೋತ್ತಮ ಪರಸಿಟ್ಟ ಭೂತಿಯ ।
ನಾ ತೊಡೆವದು ಪಾಪವೆಂದು
ಮಾತನಾಡದೆ ರಾಯನಿದಿರಲಿ ನಿಂದಳು ।
ಸೀತ ಕಾಲದ ಪಿಕದಂತೆ ೩–೬೧

ರಾಣಿಯ ಆಗಿನ ಮಾನಸಿಕ ತೊಳಲಾಟವನ್ನು ಹೊರಗಿನ ಮಾಗಿಯ ಕೋಗಿಲೆಯ ಮೂಲಕ ಕವಿ ವಿವರಿಸಿದ್ದಾನೆ ಮತ್ತು

ದೇಶಾಧಿಪನ ಮೊಗಕಿರುಬೆವರೇರುತ
ಮೀಸೆಗಳೆಲ್ಲವಲುಗುತಲಿ ।
ಈಶನ ಉರಿಗಣ್ಣಿನಂತುಗ್ರ ದಾಳಿಯು
ಆ ಸತಿಯೊಡನಿಂತೆಂದ । ೩–೨೯

ಚಿತ್ರ ಕಣ್ಣಿಗೆ ಕಟ್ಟಿದಂತೆ ಇದೆ

ಸಾರಮತಿ ಹೀನಂಗೆ ವಿಷ ಶಾಸ್ತ್ರವಂತೆ ।
ಕ್ಷಾರವಾಯಿತು ನುಡಿ ನೃಪಗೆ ೩–೫೪

ರಾಣಿಯ ಹಿತನುಡಿ ರಾಜನಿಗೆ ಕ್ಷಾರವಾಯಿತಂತೆ

ತೊಡೆ ವೇಗದಿ ನೀನಟ್ಟ ನೊಸಲ ಬೂದಿಯನೆಂದು
ಪೊಡವಿಪ ತನ್ನ ಸ್ತ್ರೀಯಳಿಗೆ ।
ನುಡಿಯಲಾವೆಣ್ಣಿಗಾಯಿತು ಕರ್ಪೂರಕೆ
ಕಿಡಿ ಸೋಂಕಿದಂತೆ ಕೇಳ್ಮಗನೆ ೩–೫೯

ಉಪಮಾನ ಸಾರ್ಥಕತೆ ಪಡೆದಿದೆ.

ಬಸಿವುದು ಶೋಣಿತ ರಸಿಕೆ ದೇಹದ ಬಾಡು
ನಸುಗೊಳೆಯದುರ್ಗಂಪಿನಿಂದ
ಮುಸುಗಿ ಮುತ್ತಿ ಆಡುವ ನೊಣಗಳ ಸಂದಣಿಂದ ।
ಪಿಸಿತದೊಲಾ ಭೂಪನೆಸೆದ ೪–೫೧

ಮುಸುಗಿ ಮುತ್ತಿ ಆಡುವ ನೊಣಗಳ ಚಿತ್ರ ಜೀವಂತವಾಗಿ ಕಂಗೊಳಿಸುತ್ತದೆ. ಹೀಗೆ ಸಾಂಗತ್ಯ ಕವಿಯ ಪ್ರತಿಭಾ ಕುಂಚ ಗರಿಗೆದರಿರುವುದು ಕಂಡುಬರುತ್ತದೆ.

ಚಲುವಳಿದ ಕಾಯದ ಕಳೆಗೆಟ್ಟು ಚೈತನ್ಯ ।
ಬಲುಗುಂದಿ ಮೈರೋಮಗಳು
ಕಳಿತುದುರಿ ದಿನದಿನಕೆ ಇಳಿದುದವನ ದೇಹ ।
ಕೊಳೆತ ಬಾಳೆಯ ಪಣ್ಣಿನಂತೆ । ೪–೧೨

ಕೊಟ್ಟಿರುವ ಉಪಮಾನ ಕುಷ್ಠರೋಗಿಯ ಚಿತ್ರವನ್ನು ಸ್ಪಷ್ಟಪಡಿಸುತ್ತದೆ.

ರಾಜ ರಾಣಿ ಮಂತ್ರಿ ಚತುರಂಗಬಲ ಸ್ತ್ರೀ ಪರಿವಾರ ಉದ್ಯಾನವನದ ಹಿನ್ನೆಲೆಯಲ್ಲಿ ಕಾವ್ಯದ ಕಥೆ ಪ್ರಾರಂಭವಾಗಿ ಋಷಿ ಮುನಿಗಳ ಆಶ್ರಮದ ವಾತಾವರಣದಲ್ಲಿ ಹುಟ್ಟಿ ಬೆಳೆದು ಸುಖಾಂತವಾಗಿ ಮುಕ್ತಾಯವಾಗಿರುವುದೊಂದು ಈ ಕಾವ್ಯದ ವಿಶೇಷ.

ಕಾಯವ ಬಳಲಿಸದಾವನಾದಡೆ ತಂದ
ಬಾಯದುತ್ತಿಗೆ ಆಸೆಗೈದು ।
ನೋಯಿಸಿ ಸೆಳೆಗೊಂಬ ಪಾತಕಗಪ್ಪುದೆ
ಆಯುಷ್ಯ ಸಿರಿ ಬಲವೆಂದ । ೬–೮೪

ಹನ್ನೆರಡನೆಯ ಶತಕದ ಶಿವಶರಣರು ಪ್ರತಿಪಾದಿಸಿದ ಕಾಯಕ ತತ್ವವನ್ನು ಹದಿನೆಂಟನೆಯ ಶತಕದ ಸಾಂಗತ್ಯ ಕವಿಯೊಬ್ಬ ತನ್ನ ಕಾವ್ಯದ ಮೂಲಕ ಪ್ರತಿಪಾದಿಸಿರುವುದು ಒಂದು ವಿಶೇಷ.

ಈ ಸಾಂಗತ್ಯ ಕಾವ್ಯವನ್ನು ಶ್ರೀ ಎಸ್. ಶಿವಣ್ಣನವರು ನೀಡಿದ ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿರುವ ಕಾಗದ ಪ್ರತಿ (೧-೧೭ಎಫ್)ಯಿಂದ ಸಂಪಾದಿಸಲಾಗಿದೆ. ಈ ಹಸ್ತಪ್ರತಿಯನ್ನು ನನಗೆ ಕೃಪೆಯಿಟ್ಟು ಕೊಟ್ಟ ಶ್ರೀಯುತರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಕೆಲವು ಕಠಿಣ ಪದ್ಯಗಳಿಗೆ ಅರ್ಥವನ್ನು ಸೂಚಿಸಿ ಸಹಕರಿಸಿದ ಪ್ರೊ. ಜಿ. ವೆಂಕಟಸುಬ್ಬಯ್ಯ, ಬೆಂಗಳೂರು ಮತ್ತು ಪ್ರೊ. ಎಂ. ಮಾಧವ ಪೈ, ಶಿವಮೊಗ್ಗ – ಇವರಿಗೆ ನನ್ನ ಅನಂತ ವಂದನೆಗಳು.

ದಿನಾಂಕ : ೧೦-೧೨-೨೦೧೧ **ಎಸ್. ಉಮಾಪತಿ**

ಪರಿವಿಡಿ

ವೀರಸೇನನ ಚಾರಿತ್ರ್ಯ
ಸಂಧಿ : ಒಂದು

ಶ್ರೀ ಗುರುವರನಿಗಾಗಮಭೇದ್ಯಗೆ
ನಾಗ ಕುಂಡಲ ನಂದಿ ಧ್ವಜಗೆ ॥
ಆಗಸ ಕೇಶಂಗೆ ಮೋಗಿ ರೇವಣ್ಣಂಗೆ
ರಾಗದಿಂದಾನೆರಗುವೆನು ॥ ೧

ಕಣ್ಣಯ್ಯನಣುಗಗೊಲಿದು ವರವಿತ್ತನ
ತಣ್ಣಯ್ಯ ಮೌಳಿ ಮಂಡಿತನ ।
ಷಣ್ಮುಗನಿಂದಸುಗಳದನ ಸುತರ್ಗೆದ್ದ[೧]
ಕಣ್ಣು ಮೂರುಳ್ಳವಗೊಂದಿಸುವೆ ೨

ದೇವಕಿ ನಂದನನೊಂದಿತ ದೇವನೆ
ದೇವಗಣಾರ್ಚಿತಭವ ।
ಭಾವೆ ಸುಭಕ್ತಿ ಪರಾಯಣ ಜೀವ
ಕಾವ ದಯಾಪರನೆ ಸಲಹು ॥ ೩

ಉತ್ಪತ್ತಿ ಸ್ಥಿತಿ ಗತಗತ ಶ್ರುತಿ ಪತಿಪಿತ
ಸುತ ಗತ ಯತಿ ಮತಿ ಹಿತನೆ ।
ಮಿತಿರಹಿತನಜನ ತಲೆನುತಪಾದನೆ
ಸತತ ತರಳನ ರಕ್ಷಿಷುದು ॥ ೪

ಸತ್ಪ್ರಮಥ ಗಣವರ ಸಕಲ ಚೈತನ್ಯ ಜ
ಗತ್ಪ್ರಾಣಮಿತ್ರ ಸುನೇತ್ರ ।
ಚಿತ್ಪ್ರಭಾ ಮೂರ್ತಿ ಚಿದಾನಂದ ರಕ್ಷಿಸು
ಮತ್ಪ್ರಭು ಗುರುಶಾಂತೇಶ ॥ ೫

---

೧. ತಾರಕಾಸುರನ ಮಕ್ಕಳನ್ನು ಗೆದ್ದವನು.

ಶುಭಮಯದಿಂದೊಲ್ದು ಗುರುವೆನ್ನ ಹೃದಯಮಂ
ಬಬುಜ ಪೀಠದಿ ಮೂರ್ತಿಗೊಂಡು ।
ಅಭವನ ಕರುಣ ಪಡೆದ ವೀರಸೇನನೆಂಬ
ಪ್ರಭುವಿನ ಕೃತಿಯ ಪೇಳಿಸಿದ ॥ ೬

ಸ್ಕಂದ ಪುರಾಣದೊಳಿರ್ದ ಕಥೆಯನಾ
ನೊಂದ ಕೇಳೆನ್ನ ಮನಸಿಗೆ ।
ಬಂದೊಲು ಪೇಳಿದ ಕಬ್ಬಮ ಬಲ್ಲರು
ಅಂದವಿಟ್ಟಿದನೊಳಿತೆನಿಸಿ ॥ ೭

ಪೊನ್ನ ಮುರಿಯದನ್ನಕ್ಕ ರೊಕ್ಕವಪ್ಪುದೆ
ಮುನ್ನಾದ ಕಥೆಗಳಲೊಂದ ।
ಬನ್ನವಿಟ್ಟು ಕಬ್ಬಮಗೈದರೆ ಬಲ್ಲ ಸಂ
ಪನ್ನರೊಪ್ಪುವರೆ ಲೋಕದಲ್ಲಿ ॥ ೮

ಮಧುರ ಶಾಸ್ತ್ರಂಗಳೊಳಗೆ ಶಿವ ಶಾಸ್ತ್ರವು
ಮಧುರ ಮಂತ್ರಕ್ಕೆ ಶಿವಮಂತ್ರ ।
ಮಧುರ ಸಕಲ ಶೀಲಗಳೊಳು ಶಿವಶೀಲ
ಮಧುರ ಕೃತಿಗೆ ಶಿವಕೃತಿಯು ॥ ೯

ಅಧಿಕವು ತಪಸಿಗೆ ಗುರು ಸೇವೆಯದರಿಂದ
ಅಧಿಕವು ಶಿವಲಿಂಗ ಪೂಜೆ ।
ಅಧಿಕವು ಚರಲಿಂಗ ತೃಪ್ತಿಯುಮದರಿಂದ
ಅಧಿಕಂ ಸದ್ಭಕ್ತರ ಕೃತಿಯು ॥ ೧೦

ಸಾವವರ ಕಥೆಗೇಳಿ ಜನನದ ಬೇಗಿಂದ
ಬೇವವರ ಮಾತಿನಂತಲ್ಲ ।
ಪಾವನವಪ್ಪುದು ಕೇಳ್ದರ ಜನ್ಮವು
ಈ ವೀರ ಭಕ್ತ ಚರಿತವ ॥ ೧೧

ವರ್ಣೊಂದು ವಕ್ತ್ರಗೆ ವರ್ಣೆರಡರ ಬಾಯಿ
ವರ್ಣ ತಾನೊಂದೊಡಲಾದ ।

ವರ್ಣರಡರ ಪಾದದಿಂದೊಪ್ಪುತ್ತಿಹ ಷಡು
ವರ್ಣರೂಪನೆ ಶರಣಾಗು[೧] ॥ ೧

ಸೂರ್ಪಕರ್ಣನ ಮಗನುದರವ ಬಲ್ಪಿಡಿ
ದಿರ್ಪನುಟದ ನಂಟನನು ।
ತೋರ್ಪನೆ ನಡುವಿಟ್ಟು ಮೆರೆವನೆ ಸಲಹೆಮ್ಮ
ಮುಪ್ಪುರಹರ ಶಾಂತೇಶ[೨] ॥ ೧೨

. . . .

. . . .

ಭೀಮ ಶೂಲಾಗ್ರದಿ ಪಿಡಿದೆತ್ತಿ ನಿಂದಿರ್ದ ನಿ
ಸ್ಸೀಮನ ಪಾದಕೊಂದಿಸುವೆ ॥ ೧೪

ಶ್ರೀವರ ಬ್ರಹ್ಮೇಂದ್ರ ಸುರ ಮುನಿಗಣ ನಿತ್ಯ
ಸೇವಿತ ಪಾದ ಪಂಕಜನೆ ।
ಭಾವಜ ಮದಗಿರಿ ಕುಲಿಶ ಸದ್ಗುರುರಾಯ
ನೀವುದು ಮತಿಗೆ ಮಂಗಳವ ॥ ೧೫

ಆರಡಿ ಗಂಪನು ಶಶಿ ಕಿರಣವ ಚ
ಕೋರ ಕಾಮಿಸುವಂತೆ ನಿಮ್ಮ ।
ಹಾರೈಸಿ ನುತಿಸುವ ಮತಿಗೆ ಮಂಗಳವಿತ್ತು
ಆರಾಧ್ಯ ಸಲಹು ಶಾಂತೇಶ ೧೬

ನುಡಿವೆಣ್ಣಿನೊಡೆಯನ ನಡುದಲೆ ಕೆಡಪಿಯು
ಪಿಡಿದೆಡಗೈಯೊಡಲೊಡಕ ।
ವಡಲಡಿಯನ ಪೆಡೆ ಬಿಡದೆ ತೊಡುಗೆಯ ತಾಳ್ದ
ಮೃಡ ಕೊಡು ಮತಿಗೆ ಮಂಗಳವ ॥ ೧೭

---

೧. ಒಂದು ವರ್ಣ ಮುಖವಾಗಿ ಎರಡು ವರ್ಣಗಳು ಬಾಯಿಯಾಗಿ, ಒಂದು ವರ್ಣವು ಒಡಲಾಗಿ, ಎರಡು ವರ್ಣಗಳು ಪಾದಗಳಾಗಿ ಶೋಭಿಸುತ್ತಿರುವ, ಆರು ವರ್ಣಗಳ ಸ್ವರೂಪಿಯಾಗಿರುವ ಶಿವನಿಗೆ ಶರಣು, 'ಓಂ ನಮಃ ಶಿವಾಯ' ಎಂಬ ಆರು ವರ್ಣಗಳ ಸ್ವರೂಪಿಯಾದ ಶಿವನಿಗೆ ಶರಣು.

೨. ಶಿವನ ಮಗನಾದ ಗಣಪತಿಯ ಹೊಟ್ಟೆಯನ್ನು ಬಲವಾಗಿ ಹಿಡಿದಿಟ್ಟಿರುವ ಹಾವಿನ ನಂಟನಾದ ಹಾವನ್ನು ತನ್ನ ದೇಹದ ಕಟಿಯಲ್ಲಿಟ್ಟು ಮೆರೆಯುತ್ತಿರುವ, ಆ ತ್ರಿಪುರ ಸಂಹಾರ ಮಾಡಿದ – ಶಿವ ನಮ್ಮನ್ನು ಸಲಹಲಿ

ಅಷ್ಟ ಭೂತಿಯನೊಲಿದೀವಳೆ ನಿಚ್ಚಯವು
ಷಷ್ಠಿ ಯೋಗಿಣಿಯರರ್ಚಿಸುವ ।
ಶ್ರೇಷ್ಠಡಿದಾವರೆ ಯೋಗ ರಂಜಿತ ಶಿಪಿ
ವಿಷ್ಠರರ್ಧಾಂಗಿಗೊಂದಿಸುವೆ ॥ ೧೮

ಉಕ್ಷಕೇತನ ಭಾಳಾಕ್ಷದೊಳುದಿಸಿದ
ದಕ್ಷನ ಕ್ರತುವನಾಕ್ಷಣದಿ ।
ನಿಕ್ಷೇತ್ರ ಮಾಡಿದನಕ್ಷಯನನುಪಮ
ರಕ್ಷಿಸು ಶ್ರೀ ವೀರಭದ್ರ ೧೯

ಮಾರಾರಿಯರ್ಧಾಂಗಿಗೆ ಶಿಶುವಾದನೆ
ತಾರಕ ದನುಜನ ಜೈಸಿ ।
ಮೂರು ಲೋಕಕ್ಕೆ ದಯವಡೆದ ಷಣ್ಮುಖನಡಿ
ವಾರಿಜಕಾನೆರಗುವೆನು ॥ ೨೦

ತ್ರಯಲಿಂಗ ಭಕ್ತಿಯಾಯತವ ಲೋಕಕ್ಕೆ
ದಯದಿಂದಲರುಹಿ ಪಾವನವ ।
ಸಯವಾಗಿ ಮಾಡಿದ ಶ್ರೀ ವೃಷಭೇಂದ್ರನೆ
ದಯವಾಗು ಮತಿಗೆ ಮಂಗಳವ ॥ ೨೧

ಶರಣರೆಲ್ಲರು ಶಿವರಾತ್ರಿಗೆ ಬರಬೇಕೆಂದು
ಕರೆಯಲೆಲ್ಲರವರ ಮನೆಯಲಿ ।
ಹರುಷದಿಂದೊಪ್ಪಿರ್ದ ಗುರುಬಸವೇಶನ
ಚರಣವ ನಾ ಬಲಗೊಂಬೆ ॥ ೨೨

ಶರಣರ ಹೃದಯಾಕಾಶ ಚಿದ್ಭಾನುವೆ
ಶರಣರಾನಂದ ಸುಧಾಬ್ಧಿ ।
ಶರಣರ ಚಿದ್ಬೆಳಗಿನ ಸಿಂಧು ಚಂದ್ರಮ
ಕರುಣಿ ಸಲಹು ಚನ್ನಬಸವ ॥ ೨೩

ಆದಯ್ಯ ಗುರುಭಕ್ತ ಆಮುಗಿ ದೇವಯ್ಯ
ಸೇದಿರಾಜಯ್ಯ ಶಾಂತೇಶ ।
ಮೇದರ ಕೇತಯ್ಯ ಮಡಿವಾಳನ
ಶ್ರೀಪಾದವ ನಾ ಬಲಗೊಂಬೆ ॥ ೨೪

ಕುಂಬಾರ ಗುಂಡಯ್ಯ ಗುಂಡಬ್ರಹ್ಮಯ್ಯನ
ಕೆಂಬಾವಿ ಭೋಗಿದೇವಯ್ಯ ।
ನಂಬಿ ಚೇರಮ ಮುಖ್ಯ ಶಿವಗಣಂಗಳ ನಿಕು
ರಂಬವ ನಾ ಬಲಗೊಂಬೆ ॥ ೨೫

ಗೋತ್ರದ ತಪಸಿಗಳಿಗೆ ಸೂತಮುನಿ ಶಿವ
ರಾತ್ರಿಯ ಫಲವ ಮುನ್ನೊರೆದ ।
ಶಾಸ್ತ್ರದ ಕಥೆಯಿದು ಮಾತಿನ ಮಾಲೆಲ್ಲ
ಸತ್ಪಾತ್ರರೊಲಿದು ಚಿತ್ತೈಸಿ ॥ ೨೬

ಕವಿ ಕಾಳಿದಾಸ ಮಲುಹಣ ಪುಷ್ಪದಂತನು
ಕವಿ ರಾಘವನು ಹರಿದೇವ ।
ಕವಿ ಚಾಮ ಭೀಮ ಪದ್ಮರಸಾದಿ ಶಿವಕವಿ
ನಿವಹವ ನಾ ಬಲಗೊಂಬೆ ॥ ೨೭

ತಿಂಗಳ ಶಿವರಾತ್ರಿಲಿ ಲಿಂಗವನರ್ಚಿಸಿ
ಗಂಗಾಧರನ ಕೃಪೆ ವಡೆದ ।
ಮಂಗಳಮಯ ವೀರಸೇನ ಭೂಪಾಲನ
ಸಾಂಗತ್ಯ ಕೇಳಿ ಸಜ್ಜನರು ॥ ೨೮

ಹಸು ಮಕ್ಕಳಾಡುವ ತೊದಳ ಮಾತಿಗೆ ಕೋಪ
ಮಸಗದು ಪಡೆದರ ಮನಕೆ ।
ಪಶುಪತಿ ಕವಿಗಳು ಪಳಿಯರು ಕೃತಿಗೆನ್ನ
ಶಿಶುವೆಂಬ ದಯವಿಪ್ಪುದಾಗಿ ॥ ೨೯

ಶಿಲೆಯೊಂದ ಲಿಂಗವೆಂದರ್ಚಿಸಿ ಮೇಣದ
ಶಿಲೆಯೆನೆ ಪಾಪ ಸಂಧಿಸದೆ ।
ತಿಳಿಯದೆ ಈ ಶಿವಭಕ್ತ ಚಾರಿತ್ರವ
ಪಳಿದವಗಾಗದೆ ನರಕ ॥ ೩೦

ಕದನದ ಕಥೆಯಲ್ಲ ಕಾಮುಕರ್ನುಡಿಯಲ್ಲ
ಸದಮಲ ಭಕ್ತಿ ಜ್ಞಾನವನು ।
ಹೃದಯದೊಳಿಂಬಿಟ್ಟು ದೋರುವುದೀ ಕಾವ್ಯ
ಪದನೊಂದನು ಕೇಳಿದಡೆ ॥ ೩೧

ಮುನ್ನೆತಿವರ ಸೂತನೆಂಬ ಗುರೋತ್ತಮ
ತನ್ನ ಶಿಷ್ಯನಿಗೊಲವಿಂದ ।
ಕನ್ನಡಿಸಿ ಪೇಳಿದ ಕಥೆಯಿದು ಭಕ್ತ ಸಂ
ಪನ್ನರೊಲಿದು ಲಾಲಿಪುದು ॥ ೩೨

ಈ ಕಥೆ ಕೇಳ್ವರ ಕರ್ಣಕ್ಕೆ ಸುಖವೀವ
ಈ ಕಥೆಯೊಲಿದೋದುವರ್ಗ ।
ನೇಕ ಸಂತೋಷವ ಮಾಳ್ಪುದೆಂದಾ ಪಿ
ನಾಕಿ ಯೋಗೀಂದ್ರ ಪೇಳಿದನು ॥ ೩೩

ಕಾವ್ಯವು ಕಿವಿಗಿದು ಸೇವ್ಯವು ಪಠಿಪರ್ಗೆ
ನವ್ಯವು ಈ ಕೃತಿಯೆಂದು ।
ಕುವರನಿಗೆ ಸೂತ ಮುನಿವರ ಪೇಳಿದ
ಸುವಚನವ ಕೇಳಿ ಸುಜನರು ॥ ೩೪

ಪೋಣಿಗೆದಪ್ಪಿದ ಮುತ್ತಿನ ಸರವನು
ಜಾಣರು ಕಂಡೊಪ್ಪವಿಟ್ಟು ।
ಪೋಣಿಸುವಂತೆ ತಪ್ಪುಳ್ಳೊಡೆ ಬಲ್ಲರು
ಕಾಣುತೀ ಕೃತಿಯ ತಿದ್ದುವದು ॥ ೩೫

ಸಾಯಗೊಡದು ಮೃಗ ವಿಹಗಗಳ ರಿಪುವಿಂದ
ನೋಯಗೊಡದು ಪಸಿದವರ ।
ಬಾಯಿ ಬೇಡಿದ ಪಣ್ಣುಗಳನೀವುದು ಯತಿಕುಲ
ಕಾಯವು ಬದರಿಕ ವನವು ॥ ೩೬

ಕಂತುಹರನ ಧ್ಯಾನದೊಳಿಹನೋರ್ವ ಮಾ
ಯಂತಕ ಮುನಿಕುಲ ತಿಲಕ ।
ಭ್ರಾಂತಳಿದಿಹ ಸೂತನೆಂಬಭಿದಾನವ
ನಾಂತೊಪ್ಪುತಿರ್ದನಾ ಯತಿಯು ॥ ೩೭

ಅರೆರಡರುಹಿದನಾರೊಂದ ಜಯಿಸಿದ
ಅರ ಜರಿದನಾರ ಬಲಿದ ।
ಮೂರರ ನೆಲೆಯೊಳು ಮೂರಾಗಿ ಸುಳಿವನ
ಮೂರರ ನಡುವಿರುತಿಹನ ॥ ೩೮

ಚಾರಿಯನಂತೆ ಪ್ರಾಜ್ಞದಲಿ ।
ಮೇರುವಿನೊಲು ಸ್ಥಿರಾಸನದಲಿ ಮೈ
ಯ್ಯೂರಿ ಮುನಿಪನೆಸೆದಿಹನು ॥ ೩೯

ಕೆಂಜೆಡೆ ಸುಲಿಪಲ್ಲು ಕರ್ಣ ಕುಂಡಲ ದಂಡ
ರಂಜಿಪ ಕಂಥೆ ಕೈಪದಲಿ ।
ನಂಜುಗಳನ ಧ್ಯಾನದುಂಬಿಹುದು ಹೃದಯ
ಕಂಜವೆಲ್ಲವು ಮುನಿವರಗೆ ॥ ೪೦

ರುದ್ರಾಕ್ಷಿ ಭೂತಿ ಲಿಂಗವನಂಗದೊಳುತಾಳ್ದು
ರುದ್ರ ಮಂತ್ರವನು ಜಪಿಸುತ ।
ಸದೃಢ ಭಕ್ತಿ ಚಿತ್ತದೊಳಿಹ ಮುನಿ ಭೂ
ರುದ್ರನನೇನ ವಣ್ಣಿಪೆನು ॥ ೪೧

ಈ ತೆರ ಬದರಿಕ ಬನದಲಿಯಿರಲೊಂದು
ಪ್ರಾತಃಕಾಲದಿ ಮುನಿಜನವು ।
ಪ್ರೀತಿಯೊಳೈದಿ ವಂದನೆಗೈದು ಶಿವರಾತ್ರಿ
ನೋಂತ ಫಲವ ಕೇಳಲೆಂದು ॥ ೪೨

ಅವರೊಳಗೊರ್ವ ವಿಮಳಾನಂದನೆಂದೆಂಬ
ಕುವರ ನಗುತ ವಂದಿಸಿಯು ।
ಅವರಿಗೋಸುಗ ಶಿವರಾತ್ರಿಯ ಫಲವನು
ವಿವರಿಸೆಂದನು ಸೂತಮುನಿಗೆ ॥ ೪೩

ಗುರುಪರಾತ್ಪರ ಮೂರ್ತಿ ಗುರು ಸದಾಶಿವತತ್ತ್ವ
ಗುರುವಿಂದ ಪರವಿಲ್ಲವೆಂದು ।
ಗುರುರಾಯ ಸೂತಮುನೀಶಂಗೆ ಶಿಷ್ಯನು
ಕರವ ಮುಗಿದು ಬೆಸಗೊಂಡ ॥ ೪೪

ಭೂತದೊಳಗುಳ್ಳರಾಯರು ದೇಹದ
ಪಾತಕವಳಿದೀಶರಾತ್ರಿ ।
ನೋತು ಮುಕ್ತಿಯ ಕಂಡರೆಂದೆಂಬ ಕಥೆಯ
ಸೂತಮುನಿಗೆ ಪೇಳೆಂದ ॥ ೪೫

ಸ್ಕಂದ ಪುರಾಣದೊಳುಯಿದ್ದ ಕಥೆಯನಾ
ನೊಂದ ನಿನಗೆ ಬಲ್ಲಂತೆ ।
ಚಂದದಿ ತಿಳಿಯ ಪೇಳುವೆನೆನುತ ಸೂತ ಮು
ನೀಂದ್ರನಾಡಿದನು ದೀಕ್ಷಿತಗೆ ॥ ೪೬

ಕಾಳು ಮಾತುಗಳಲ್ಲ ವೇಳೆಗಳೆದು ಪೋಪ
ಜಾಳದೊಳಿರಿಸುವುದಲ್ಲ ।
ಬಾಲ ನೋಡೀ ಕಥೆ ಕೇಳಿದವರ ಮುಕ್ತಿ
ಆಲಯವನು ಸಾರಿಸುವುದು ॥ ೪೭

ನಂಬಿ ಕೇಳೆಲೆ ಸುತ ನಿನ್ನ ಮನದೊಳಿಹ
ಪಂಬಲ ನಾ ಸಲಿಸುವೆನು ।
ತುಂಬುವೆ ನಿನ್ನ ಕರ್ಣಕ್ಕೆ ಯಿನಿದಪ್ಪೊಂದ
ಇಂಬಿನ ಕಥೆಯ ಕೇಳೆಂದ ॥ ೪೮

ಶಿಶುವೆ ಕೇಳೀ ಕಥೆ ಸೊಗಸಿನ ಗೊತ್ತಿದು
ಪೊಸ ಮುತ್ತು ಅಂಗೈಯ್ಯಾಮಳಕ ।
ರಸಿಕ ಕೋವಿದ ಭಕ್ತ ಸಂಕುಳಕ್ಕಿನಿ ರಸ
ಮೊಸರುವ ಕಾವ್ಯವಿದೆಂದ ॥ ೪೯

ಭಕುತಿಯನೀವುದು ಕೇಳ್ವರಿಗೆ ಮೇಣು
ಮುಕುತಿಯಪ್ಪುದು ಓದಿದರಿಗೆ ।
ಭಕುತಿಯ ಬೆಳೆ ಸಿರಿ ವಿಸ್ತರಿಸಿದರೆ
ಸುಖವಪ್ಪ ಕಥೆಯ ಕೇಳೆಂದ ॥ ೫೦

ಬೇಸರನೀಯದು ಕೇಳ್ದರ ಮನಸಿಂಗೆ
ತಾ ಸಂತಸವೀ ಕಥೆಯು ।
ಈ ಶಿವಭಕ್ತಿ ವಿಶ್ವಾಸವನರುಪುವ
ಲೇಸಿನ ಕಥೆಯಿದು ನೋಡ ॥ ೫೧

ಎಲೆ ಮಗನೆ ಈ ಕಥೆ ಸುಲಭ ಇನ್ನೇನೆಂಬೆ
ನೆಲೆ ಜಿನಿಪಾಲು ಸಕ್ಕರೆ ।
ಕಲಸಿದ ಸವಿಯನು ಸಲಿಸುವುದೀ ಕೃತಿ
ಒಲಿದು ಕೇಳುವ ಸುಜನರಿಗೆ ॥ ೫೨

ಸಾಗರ ವಸ್ತುಗಳಾಗರವಗ್ನಿಗೆ
ಯೋಗರ ಜಲ ಚರಾದಿಗಳ ।
ಭೋರ್ಗರದುಬ್ಬು ಸುಧಾಕರಗತಿ ನೆಲೆ
ನಾಗರ ತಲ್ಪವಾಗಿಹುದು ॥ ೫೩

ಈ ವಾರ್ಧಿಯೊಳಗಾ ಬಳಸಿ ನಿಂದೊಪ್ಪುವು
ದಾ ವಿಧು ರವಿ ದೀಪ್ತಿಯಿಂದ ।
ದೇವತೆಗಳ ಜನ್ಮ ಭೂಮಿ ಭುವನಕೆಲ್ಲ
ಸ್ಥಾವರವಾದುದಾ ಮೇರು ॥ ೫೪

ಪೊಂಗಿರಿಗೆ ಬಲ ಭಾಗದಲ್ಲಿಪ್ಪ ದೇ
ಶಂಗಳಿಗಿದು ಮಿಗಿಲಪ್ಪ ।
ಕಂಗಳ ಸಿರಿಯೆನಿಸುವ ದಕ್ಷಿಣ ದೇಶ
ಶೃಂಗಾರವೇನ ವರ್ಣಿಪೆನು ॥ ೫೫

ನಾಡದು ಸ್ವರ್ಗಕ್ಕೆ ಜೋಡದು ಧರ್ಮದ
ಬೀಡದು ಸರ್ವ ಜೀವರಿಗೆ ।
ಊಡುವುದು ಮಧುರಸ ಗೂಡುವದು ಸಿರಿಯ
ಗಾಢಿಕೆಯಾ ರಾಜ್ಯವೆಂದೆ ॥ ೫೬

ಕೋಪಿಗಳಿಲ್ಲ ನಿಷ್ಠೂರ ನಿಂದಕರಿಲ್ಲ
ಪಾಪಿ ನರರು ಮುನ್ನಿಲ್ಲ ।
ರೂಪು ಲಾವಣ್ಯ ಸದ್ಗುಣ ಧರ್ಮಸತ್ಯಾ
ಲಾಪಿಗಳಲ್ಲಿಹರೆಲ್ಲ ॥ ೫೭

ಆರು ಕರ್ಮವ ಬಲ್ಲ ನಾರಿಯರೆಲ್ಲರು
ಗಾರು ವೇಣ್ಣುಗಳೊಂದಿಲ್ಲ ।
ಸಾರ ಸಜ್ಜನರುದಾರ ಗಂಭೀರರು
ಶೌರಿ ಮಾನವರಿಹರಲ್ಲಿ ॥ ೫೮

ದೇಶವು ಶಿವ ಸುಖವಾಸವು ದುರ್ಗುಣ
ನಾಶವು ಸಿರಿಯ ಸಂತೋಷ ।
ಕಾಶಿ ಹಿಮವತ್ಕೇತಾರವೆನಿಪುದಾ
ದೇಶವನಾರು ವರ್ಣಿಪರು ॥ ೫೯

ಸಟೆಯ ನುಡಿಗಳಿಲ್ಲ ಕಪಟ ಹೃದಯರಿಲ್ಲ
ಕಟಕಿಯ ನರರು ಮುನ್ನಿಲ್ಲ
ಕುಟಿಲ ದುರ್ಜನರಿಲ್ಲ ಕುಹಕ ದುರ್ಬುದ್ಧಿಲ್ಲ
ಆಟಮಟದವರು ಅಲ್ಲಿಲ್ಲ ॥ ೬೦

ದಾನಿಗಳೆಲ್ಲಭಿಮಾನಿಗಳೆಲ್ಲ ಸಂ
ಧಾನಿಗಳೆಲ್ಲ ಶಾಸ್ತ್ರದಲಿ ।
ಜ್ಞಾನಿಗಳೆಲ್ಲ ನೇಮನಿತ್ಯರು ಯೆಲ್ಲ
ಮೌನಿಗಳಾಗಿರ್ದ ಜನರು ॥ ೬೧

ಫಲಗಳಿಲ್ಲದ ತರು ಬೆಳೆಗಳಿಲ್ಲದ ನೆಲ
ಅಲರಿಲ್ಲದ ಗಿಡುಲತೆಯು ।
ನಳಿನನಿಲ್ಲದ ಕೊಣ ಬನಗಳಿಲ್ಲದ ಊರು
ಚಲುವರಿಲ್ಲದ ನರರಿಲ್ಲ ॥ ೬೨

ಪೊಡೆನುಡಿ ಬೆಳೆಯೊಳು ಕಡಿನುಡಿ ಗಂಧೇಕ್ಷು
ಮಡಿನುಡಿ ರಾಜಗದ್ದೆಯಲಿ ।
ಬಿಡುನುಡಿ ಮುಗುಳಾದ ಕಡೆಯೊಳಲ್ಲಿನ ನಾಡ
ನಡತೆಯನೇನ ವಣ್ಣಿಪೆನು ॥ ೬೩

ಕಳೆಮೊಳೆ ಯೆಂಬುದು ಚಿನ್ನ ಕಾಯಕರಲ್ಲಿ
ಸೆಳೆ ಎಳೆ ತೊರೆ ಭ್ರಮರದಲಿ ।
ಹಿಳ್ಗಿ ತುಳಿ ತಿಲ ಪಂಕದೆಡೆಯಲ್ಲಿ ಮೇಣಾವ
ಕೆಳ ನುಡಿಯಿಲ್ಲ ರಾಜ್ಯದಲಿ ॥ ೬೪

ಹರಿಕೊರೆಯೆಂಬುದು ಪಥವಳಯಗಳಲ್ಲಿ
ತಿರುಹು ಮುರುಹು ನಟರಲ್ಲಿ ।
ಸಿರಿ ನುಡಿ ಸಜ್ಜನ ಪ್ರಜ್ಞರಲಲ್ಲದೆ
ಬಿರುನುಡಿ ಎಂಬುದಲ್ಲಿಲ್ಲ ॥ ೬೫

ಪೊಂಬಾಳೆ ರಸದಾಳೆ ನಾಗವಲ್ಲಿಯ ದೋಟ
ಕಾಬಳತೆಯೊಳಾವ ಕಡೆಯು ।
ಶ್ರೀ ಬನ ಕೆರೆ ಕಾಲ್ವೆ ಗಂಧಸಾಳಿಗಳಿಂದ
ಶೋಭನ ರಾಜ್ಯ ಕಣ್ಗೆಸೆಯೆ ॥ ೬೬

ಭೂನಾರಿ ಕಯ್ಯ ಕನ್ನಡಿಯೆಂಬಂತೆ
ಆ ನಾಡ ಮಧ್ಯದಲ್ಲೊಂದು ।
ತಾನೆಸೆವುದು ಮಂಗಳ ಕಲ್ಯಾಣ ರಾಜ
ಧಾನಿಯನೇನ ಬಣ್ಣಿಪೆನು ॥ ೬೭

ಇಂದ್ರನ ಪೊಳಲೊ ಕುಬೇರನ ನಗರವೋ
ಕಂದರ್ಪನಿಹ ಪಟ್ಟಣವೊ ।
ಯೆಂದೆಂಬ ದೊರೆಸಿರಿ ಚೆಲುವಿಂದಲೆಸೆವುದು
ಕಂದ ಕೇಳ್ ಮಂಗಳ ಪುರವು ॥ ೬೮

ಅಲರಿನೊಳಗೆ ಜಾಜಿ ಗಿರಿಗಳೊಳಗೆ ಮೇರು
ಪೊಳೆಗಳೊಳಗೆ ಮಂದಾಕಿನಿಯು ।
ಫಲದಗಳೊಳಗೆ ಕಲ್ಪತರುವಿನೊಲೆ ಪುರ
ಪೊಳಲೆಲ್ಲಕಧಿಕಮಾಗಿಹುದು ॥ ೬೯

ಅಂಗಡಿ ರಾಜವೀಥಿಯು ರವಿವೀಥಿಯು
ಶೃಂಗಾರ ಶುಭಮಯದಿಂದ ।
ಕಂಗಳಿಗಾವೆಡೆಯಲಿ ಕಾಣಿಸುತಲಿರೆ
ಮಂಗಳ ಕಲ್ಯಾಣವಾಯಿತು ॥ ೭೦

ಆ ನಗರವ ಮುದದಿಂದಲಾಳುತಿಹನು
ಮಾನವ ಪತಿ ಕುಲತಿಲಕ ।
ಭಾನು ಕುಲಾಬ್ಧಿ ಚಂದ್ರಮನೆನಿಸುವ ವೀರ
ಸೇನ ಭೂಪಾಲನೊಪ್ಪಿದನು ॥ ೭೧

ತನಯನೆ ಕೇಳು ಐವತ್ತಾರು ದೇಶದ
ಜನಪರು ಕಪ್ಪವತೆತ್ತು ।
ವಿನಯದೊಳಿರ್ಪರು ವೀರಸೇನನ ಭುಜ
ಘನ ಬಲ ಕೀರ್ತಿಯೊಳಂಜಿ ॥ ೭೨

ಅಲುಗುವ ಮೇರು ಉಕ್ಕೇರದ ವಾರ್ಧಿಯು
ಕಳೇವರವುಳ್ಳ ಮನ್ಮಥನು ।
ಇಳೆವರ ವೀರಸೇನನ ಸದ್ಗುಣ ನೃಪ
ಕುಲವೆಲ್ಲ ಕೀರ್ತಿಪುದೆಂದ ॥ ೭೩

ಸುರಿವ ಸೋನೆಗೆ ಪರಿದಾಡುವ ಪಶುವಿಗೆ
ಗೊರಬುಯಲ್ಲಕ್ಕೆ ಅನುದಿನವು ।
ಧರಣಿಪ ವೀರಸೇನನ ಬಲಕಂಜುತ
ಪರಸಿಕೊಂಬರು ವೈರಿ ನೃಪರು ॥ ೭೪

ಆ ವೀರಸೇನನು ಬುಧಜನ ಕೋಟಿಗೆ
ಈವ ಪೊನ್ನಿನ ತ್ಯಾಗವನು ।
ದೇವೇಂದ್ರನದಕೆ ತಾನಿರ್ಪ ಪೊಂಗಿರಿಗೆ
ಕಾವಲಿಟ್ಟನುವಿನ ಸತಿಯ ॥ ೭೫

ಕುಂದದ ಸಸಿ ಯುಷ್ಣ ಪೊಂದದ ರವಿ ಕಂಠ
ಕಂದಿಲ್ಲದೀಶನೇ ಸತಿಗೆ ।
ಸಂಧಿಸದಿಂದ್ರ ಬೇಡದ ಕೃಷ್ಣನೀತ
ನೆಂದೆಲ್ಲ ಜನವು ಪೊಗಳುವುದು ॥ ೭೬

ಅಡಲರಿಯನೊಂದು ಮಾಡಲರಿಯನೆರಡ
ನೋಡಲರಿಯ ರಿಪು ಬಲಕೆ ।
ನೀಡಲರಿಯನಲ್ಪ ದಾನವ ನೃಪಕುಲ
ಚೂಡಾಮಣಿ ವೀರಸೇನ ॥ ೭೭

ಮುರಿಯಬಲ್ಲನು ಮನ ಪರ ವಧುವಿನೊಳು
ನೆರೆಯ ಬಲ್ಲನು ಸಾಧು ಜನರ ।
ತರಿಯ ಬಲ್ಲನು ಮಲೆತರಿಗಳ ತಲೆಮೆಟ್ಟಿ
ಮೆರೆಯ ಬಲ್ಲನು ಸತ್ಕೀರ್ತಿಯಲಿ ॥ ೭೮

ಪೇಳಲರಿಯನು ದುರ್ನೀತಿ ದುರ್ಗುಣವನು
ಕೇಳಲರಿಯ ಕೊಂಡೆ ತನವ ।
ಆಳಲರಿಯನಪಕೀರ್ತಿಯನಾ ಭೂ
ಪಾಲನೊಪ್ಪಿಹ ವೀರಸೇನ ॥ ೭೯

ವಿಧು ಸುರಕರಿ ಶಂಭುವಾಣಿ ವೃಷಭನಂತೆ
ಚದುರ ವೀರಸೇನನ ಕೀರ್ತಿ ।
ತದು ಸುಧೆಯ ತನ್ಮದ ತತ್ಕಂಠ ತತ್ಕೇಶ
ತದು ಖುರದೊಲು ಬೆಳಗೆ ಕೀರ್ತಿ ॥ ೮೦

ಹೇಮದ ಗಿರಿಯಂತೆ ಪೊನ್ನಗಳಮಯ ಸು
ತ್ರಾಮ ನೆಲೆಯೊಳಮರಾಳಿ ।
ವ್ಯೋಮದೋಳ್ ಕುಂದದ ರಾಜಾರ್ಕಬಿಂಬಮಯ
ಆ ಮಹಿಮನ ವೈರಿ ಪೊಳಲು ॥ ೮೧

ಕೊಡಬಲ್ಲ ದಾನ ಸತ್ಪಾತ್ರವರಿದಾತ
ನುಡಿಯಬಲ್ಲನು ಕಾಲವರಿದು ।
ನಡೆಯ ಬಲ್ಲನು ಧರ್ಮಪಥದಲಿ ವೀರಸೇನ
ಪೊಡವಿಪನನಾರು ವಣ್ಣಿಪರು ॥ ೮೨

ಹಿತವರಸಗೆ ತನ್ನ ದೇಶಕ್ಕೆ ಸಖದೈವ
ತತಿಗಿತ್ತ ಬ್ರಹ್ಮ ವೃತ್ತಿಯನು ।
ಪ್ರತಿಪಾಲಿಸುವ ಒಳ ಲಂಚವನೊಲ್ಲದೆ
ಮತಿವಂತ ಮಂತ್ರಿರ್ಪನ್ನೃಪಗೆ ॥ ೮೩

ಹರಿಯಂತೆ ವಾಗೀಶ್ವರನಂತೆ ಗಿರಿಜಾ
ವರನಂತೆ ಮೂರ್ಗುಣದಿಂದ ।
ತರುಣ ಕೇಳಾ ಭೂಪ ಲೋಕವನಾಳುತ
ನಿರುತಿರ್ದನತಿ ಮುದವೆತ್ತು ॥ ೮೪

ಆತನ ಸತಿ ವಿದ್ಯಾಲತೆಯೆಂಬ ಪೆಸರ್ವೆತ್ತು
ಭೂತಳಕಧಿಕ ರೂಪಿಂದ ।
ಪ್ರೀತುಳ್ಳ ಪತಿ ಭಕ್ತೆ ಸದ್ಗುಣ ಮಾನಿನಿ
ರೀತಿಯನೇನ ವಣ್ಣಿಪೆನು ॥ ೮೫

ಕಪ್ಪೊಡಲು ಮೃಗಶಶ ವಾಲ್ಮೀಕ ವಟಕುಜ
ಮಿಪ್ಪ ಶ್ವೇತಾಂಗ ಪದ್ಮಾರಿ ।
ಸರ್ಪನೆಂಜಲು ಚಂದ್ರನಸಲೆಮೊಗ ಶಶಿ
ಗಪ್ಪಲ್ಲೈಣೆ ಸುತ ಕೇಳು ॥ ೮೬

ಬಡತನವಡಸಿದೊಡುಡುಪಗೆ ಜನರೊಮ್ಮೆ
ಪೊಡಮಡುವದು ಭೂಮಿಪನ ।
ಮಡದಿಯ ಮೊಗ ಪೂರ್ಣಚಂದ್ರನ ಕಂಡಲ್ಲಿ
ಬಿಡದೊಂದಿಪುದು ಜನರೆಲ್ಲ ॥ ೮೭

ತಣ್ಣಸಗದಿರನೆಲ್ಲರಿಗೆ ಸುಧೆಯನಿತ್ತು
ಸಣ್ಣನಾಗೈದಿ ಸತಿಯ ।
ಬಣ್ಣದಧರದ ಮೇಲೆ ನಿಂದನೊ ಎಂಬಂತೆ
ಪೆಣ್ಣಿಗೊಪ್ಪಿತು ವಾಯಿದೆರೆಯು ॥ ೮೮

ಅಂಬುವಿನೊಳಗಾಗದಳಿ ತುಡುಕದ ರವಿ
ಬಿಂಬಕಮ್ಮದ ನೈದಿಲೆಯು ।
ಎಂಬಂತೆ ಸತಿಯ ವದನದೆಡೆಯೊಪ್ಪಿರ್ದ
ವಂಬಕವನೇನ ಬಣ್ಣಿಪೆನು ॥ ೮೯

ಹೆಂಗಳ ಮಾಣಿಕ್ಯವೆನಿಸುವ ರಾಣಿಯ
ಅಂಗದೊಳು ಮೂರು ಸಂಕ್ರಾಂತಿ ।
ಸಂಗ ಮಾಗಿವೆಯಕ್ಷಿ ಕುಚ ಮಧ್ಯೆಮೀನ್ಕುಂಭ
ಸಿಂಗವೆಂಬಿವು ಕಣ್ಗೆಸೆಯೆ ॥ ೯೦

ತಳಿರು ತಾವರೆ ಬತ್ತಳಿಕೆ ಪೊಂಬಾಳೆಯ
ಸುಳಿ ಗಿರಿ ಸಿಂಹ ಪಾವಾನೆ ।
ಫಳ ಶಂಕಾಬ್ಜ ವಿದ್ರುಮ ವಜ್ರ ಚಂಪಕ ಕು
ಟ್ಮಳ ಕೈರವ ವಾಣಿ ಚಾಪ ॥ ೯೧

ತಾರೆ ದ್ರೌಪದಿ ಮಂಡೋದರಿ ಸೀತಹಲ್ಯೆ
ನಾರಿಯರೆಂಬೈವರಿಗೆ ।
ವರಮುನಿ ಜ್ಞಾನಲತೆ ಮಿಗಿಲೆಂದು ಕು
ಮಾರಕನೊಡನುಸುರಿದನು ॥ ೯೨

ಮಡದಿಯ ಕಣ್ಮಲರಿಗೆ ಉಡುಪನು ರವಿ
ಪೊಡದಾಡುವರು ಸತಿ ಮುಡಿಗೆ
ಮೃಡಸುತ ಸುರಪನು ಜಗಳವ ಮಾಳ್ಪರು
ನಿಡಿಗೆ ಮೇಣಿಂದ್ರಜ ಸೆಣಸೆ ॥ ೯೩

ನಡುನಾಭಿಯೊಳು ಸರ್ಪನುದ್ಭವ ಮುಖಚಂದ್ರ
ನೆಡೆಗೆ ಪಾಯಲು ಸ್ಥನ ಗಿರಿಯ ।
ಇಡುಕುರವನು ಕಂಡು ನಿಂದೊಲು ಎಸೆಯಿತು
ಮಡದಿಯ ಸಣ್ಣುರ ಭಾಸೆ ॥ ೯೪

ಕಮಳೆಗರುಂಧತಿ ರೋಹಿಣಿಗುರ್ವಿಗೆ
ಅಮರನದಿ ವಾಣಿ ಶಚಿಗೆ ।
ವಿಮಳೆನೆ ಕೇಳ್ಸಿರಿ ಪತಿಭಕ್ತೆ ಲಾವಣ್ಯೆ
ಕ್ಷಮೆ ಶುಚಿ ಮತಿ ಭೋಗಕಧಿಕಣಿ ॥ ೯೫

ವಾರಿಜ ಕೌಮುದಿ ಶಶಿ ಸರ್ಪ ಶೈಲೊಜ್ರ
ವಾರಣ ವೈಮೊಗಗೂಡಿ ।
ವೈರವನುಳಿದಾಸತಿ ಪುಣ್ಯ ದೇಹವ
ಸಾರಿರ್ಪವೇನ ವರ್ಣಿಪೆನು ॥ ೯೬

ಕುರುಳ್ಗಳೊ ಭ್ರಮರದ ಗದಿರ್ಗಳೊ ನೈದಲೆ
ಅರಳ್ಗಳೊಯೆನೆ ಕಂಗಳೊಪ್ಪು ।
ಬೆರಳ್ಗಳೊ ಕಾವನ ಸರಳ್ಗಳೊ ಪೀಯೂಷ
ದರಳ್ಗಳೊಮೆನೆ ಸವಿನುಡಿಯು ॥ ೯೭

ದನಗಳ ಕಾಯಿದನ ಭಗಮ್ಯೆಯನಾದನ
ಕೊನೆದಲೆ ಕುರುವಿಲ್ಲದವನ ।
ಇನಿತೂನ ಪುರುಷರ ಪಡೆದರು ಸಿರಿ ಶಚಿ
ವಾಣಿಯ ರತಿಯನಣಕಿಪಳು ॥ ೯೮

ಹರಿಯುರಗ ಕರಿಗೆಣೆಯಾ ಜ್ಞಾನಲತೆ ಸುಳಿ
ಗುರುಳು ರೋಮಾಳಿ ಮೆಲ್ನಡೆಯು ।
ಹರಿರಿಪು ಉರಗಾರಿ ಕರಿಯಾಂತಕನಿಗೆ
ಸರಿ ಘ್ರಾಣ ಮೊಗ ತನು ಮಧ್ಯ ॥ ೯೯

ಭಾರಿಯ ವನಧಿ ಗಂಭೀರೆಯ ಪತಿವ್ರತ
ಚಾರಿಯ ಧರ್ಮಕಾರಿಯನು ।
ನಾರಿಯು ಪರಉಪಕಾರಿಯು ನೃಪ ಮನೋ
ಹಾರಿಯನೆಂತು ವರ್ಣಿಪೆನು ॥ ೧೦೦

ಸಸಿಯಲ್ಲಿ ತಣ್ಪು ಕುಸುಮದೊಳು ಗಂಧವು
ರಸುಮೆ ರನ್ನವಗೂಡಿದಂತೆ ।
ವಸುಧಾಧಿಪ ವೀರಸೇನನ ಮನದೊಳು
ಬೆಸುಗೆಯಿಲ್ಲದೆ ಬೆರೆದಿಹಳು ॥ ೧೦೧

ಈ ಸುಖವಾರಿಧಿಯೊಳು ನೃಪನರಸಿಯು
ಮೀಸಾಡುತಿರಲೊಂದು ದಿವಸ ।
ಏಸುತ ಕೇಳು ವೀರಸೇನ ವೈಹಾಳಿಯ ವಿ
ಲಾಸದಿಂದಲಿ ಪೊರವಡೆ ॥ ೧೦೨

ರಾಯರಾದರರಮನೆಯಲ್ಲಿ ಕೇಳು ಸುಮ್ಮ
ನೆಯಿಪ್ಪುದುಚಿತವಲ್ಲೆಂದು ।
ತಾಯೆಯಿದು ಮಂತ್ರೀಶ ಕರವ ಮುಗಿದು ಬಿ
ನ್ನಯಗೈದು ತೆರಳಿಸಿದ ॥ ೧೦೩

ಬಿಲು ವಿದ್ಯೆ ಗರುಡಿ ಶಸ್ತ್ರಾಭ್ಯಾಸ ಪೆರ್ಬೆಂಟೆ
ನಲವಿಂದ ನೃಪರಾಡಲುಚಿತ ।
ಗೆಲವಲ್ಲವರಮನೆಯೊಳಗಿರ್ಪುದು ರಾಯ
ಕುಲಕೆಲ್ಲ ಕಿರಿದೆಂದ ಮಂತ್ರಿ ॥ ೧೦೪

ರಥ ಕರಿ ವಾಜಿಯು ಪರಿವಾರವೆಂದೆಂಬೊ
ಚತುರಂಗ ಬಲಸಯವಾಗಿ
ಕ್ಷಿತಿಬೆಸಲಾದಂತೆ ಮಂತ್ರಿರಾಹುತ ಮಾನ್ಯ
ರ್ತಿಗೂಡಿ ನೃಪ ಪೊರವಂಟ ॥ ೧೦೫

ಕುಂಭಿನಿದೋರದ ಚತುರ್ಬಲ ಪದ ನಿಕು
ರುಂಬವ ಕೊಡೆಗಳಿಟ್ಟಣಿಯು ।
ಅಂಬರಗಾಣಿಸದಾರಾಯ ಪೋಗುವ
ಸಂಭ್ರಮವನೇನ ವಣ್ಣಿಪೆನು ॥ ೧೦೬

ಹೆದ್ದೆವಾರಾದುದು ಸಮತಳ ತಗ್ಗುಗ
ಳಿದ್ದೆಡೆ ಬಲ್ಗುಣಿಜಮಿರೆ ।
ಕರ್ದಮವಪ್ಪುದು ಹೆಗ್ಗೆಸರಿರದೆ ಪುಡಿ
ಯೆದ್ದುದು ದಳಪದಹತಿಗೆ ॥ ೧೦೭

ಸರ್ವೇಶ ವೃಷಭೇಂದ್ರ ನಕ್ಷತ್ರ ಸುರಋಷಿ
ಊರ್ವಶಿ ಮಿಕ್ಕ ಮಂಗಳನ ।
ಮೀರ್ವಭಿಧಾನದ ಫಲಮಕ್ಕಳಿಹ ಸಿರಿ
ತೋರ್ವಂತೊಪ್ಪಿತು ಬನ ನೃಪಗೆ ॥ ೧೦೮

ಕೇಶವ ಗುಹ ಇಂದ್ರ ಶಿಬಿ ಯಮ ಹರಿ ಇಂದು
ಪೂಷರು ವಾಹನವನು ।
ಆ ಶಿವನಲ್ಲವರು ಪಡದರು ತಾಪಡೆದ
ವಿಶೇಷ ತೋರ್ಪೊಲು ದುರ್ಗಮೆಸೆಯೆ ॥ ೧೦೯

ಕಾನನ ಚರರ ಸಂದಣಿಯಲ್ಲಿ ನರಪತಿ ಸೊ
ಕ್ಯಾನೆಗಳಿಗೆ ಗಜಪತಿಯು ।
ತಾನೆರಡರ ದೊರೆವೆಸರಿಂದ ಲೇಸಾಯಿತ್ತು
ಆ ನರೇಂದ್ರನ ಕಣ್ಗೆ ವಿಂಧ್ಯೆ ॥ ೧೧೦

ತುರಗಾನೆ ಖುರಗಳ್ನಿಷ್ಠುರದಿಂದ ನೆಲನೊಡೆದು
ಪರಸದಂತಾಗೆ ಮೈ ಬೆಮರು ।
ನೊರೆ ಜೊಲ್ಲು ಮಳೆಯಿಂದ ಪಸಿರ್ವೆಚ್ಚಿದೂರ್ವಿಯಂ
ಕುರಿಸಿತು ಪೊಲಪಸುರ್ತೀವಿ ॥ ೧೧೧

ಮಂಡಲ ಪತಿ ಕೇಳಾಗಸದಲ್ಲಿ ಬಹ ಮಾ
ರ್ತಂಡನ ಸಪ್ತ ವಾಜಿಗಳು ।
ಖಂಡಿಟ್ಟುವೀ ಪುಲ್ಲಿಗಾಸೆಯ ಪೊತ್ತಿದ್ದು
ದಂಡಮಾಯಿತು ಎಂದ ಮಂತ್ರಿ ॥ ೧೧೨

ಗಿಡಿಬಿಡಿ ದುಂದುಭಿ ಪೊಡೆವ ಭೇರಿಯು ಮುಂದೆ
ತುಡುಮು ತಮ್ಮಟ ನಿಸ್ಸಾಳ ।
ಅಡಿಗಡಿಗೆ ಸಿಂಗಿ ಹೆಗ್ಗಾಳೆ ಬುರುಗು ನಾದದ
ಸಡಗರದೊಳು ನೃಪ ನಡೆಯೆ ॥ ೧೧೩

ರಾಯ ಬರುವ ಭರಕೆಲ್ಲ ಮೃಗಂಗಳು
ಬಾಯಬಿಡುತ ಬೆದರೋಡೆ ।
ಆಯವ ಕಂಡೊಂದು ಗಂಡೇಣ ತಾ ಪಾರಿ
ವಾಯಿತ್ತು ಸಸಿ ಇಪ್ಪ ಬಳಿಗೆ ॥ ೧೧೪

ಪುಲ್ಲೆ ಮೃಗವು ಬೆಚ್ಚಿ ಬಿಟ್ಟೋಡುತಿರೆ ಕಿರು
ಮೊಲಗಾಣುತ ತಾನಂಜಿ ।
ಪಲ್ಲದೆರೆಯೆ ಕಂಡು ಚಂದ್ರಮ ದಯದಿಂದ
ಬಲ್ಲಿದ ಬಿಃಕ್ಕ ಮಾಳ್ಕೊಂಡ ॥ ೧೧೫

ಇಡಿದಾನೆ ಪೌಜು ಕಾರ್ಮೇಘಾಯುಧಂಗಳ
ಝಡಿಸು ಪೊಳಸು ತಟಿಯಿಂದ ।
ಗಡಣ ತುರಗ ಮೈಯ್ಯ ಬೆಮರು ಸೋನೆಯು ವಾದ್ಯ
ಸಿಡಿಲ್ಪೊಳೆ ಶರತ್ಕಾರಲದಂತೆ ॥ ೧೧೬

ತಾರೆಗಳೊಳು ಸಸಿ ನವಗ್ರಹದೊಳು ಮಧ್ಯೆ
ಸೂರಿಯನೊಲು ಸೇನೆಗೂಡಿ ।
ಪಾರದಿಯಾಡಲು ವೀರಸೇನನು ಪೋದ
ಅರಣ್ಯದೆಡಗರ್ತಿಯಿಂದಾ ॥ ೧೧೭

ಅಂತು ಸಂಧಿ ೧ಕ್ಕಂ ಪದನು ೧೧೭ಕ್ಕಂ

ಮಂಗಳ ಮಹಾಶ್ರೀ

ಸಂಧಿ – ಎರಡು

ಭೂಮಿ ಮಗಳ ಗಂಡನ ಮಗನಾತ್ಮಜ
ತಾಮಸದೊಳು ಕದ್ದೊಯಿದ ।
ಭೂಮಿಯ ಕರ್ತಳ ಜನಕನ ದ್ವಾರವ
ಪ್ರೇಮದಿ ಕಾಯಿದನೆ ಸಲಹು* ॥ ೧

ಚಳಿವೆಟ್ಟ ಮಗಳ ತಳಿರ್ದುಟಿ ಸುಧೆಯನು
ಕೊಳಲೊಂದು ವಾಯಿ ನೆರೆಯದೆ ।
ಅಳವಟ್ಟವೈಮೊಗತಾಳ್ದ ಶಿವನೆ ಎಮ್ಮ
ಸಲಹುದು ಯಾವ ಕಾಲದಲಿ ॥ ೨

ಕೇಳು ಸದ್ಗುರು ಸೂತ ಮುನಿವರ ನೀನೊಲ್ದು
ಪೇಳುವ ಶಿವಕಥೆ ಸುಖವು ।
ಶೂಲಿಯ ಭಕ್ತರ ಕರ್ಣಕ್ಕೆ ಅತಿ ಹಿತ
ಖೂಳರಿಗಿದು ಸೊಗಸಲ್ಲ ॥ ೩

ತಂದೆ ಸದ್ಗುರುವೆ ನೀ ಯತಿವರ ಕಾರುಣ್ಯ
ಸಿಂಧುವೆ ಸೂತ ಮುನೀಶ ।
ಮುಂದಣ ಕಥೆಯ ವಿಸ್ತರಿಸೆಂದು ದೀಕ್ಷಿತ
ವಂದಿಸಿ ಮಗುಳೆ ಕೇಳಿದನು ॥ ೪

ಸೇನೆಯೆಲ್ಲವು ಗೂಡಿ ಮುದದಿಂದ ನೃಪವೀರ
ಸೇನ ಸವಾರಿಯ ಪೋಗಲತ್ತ ।
ತಾನಿತ್ತ ಪೊರವಂಟಳು ಬನವ ನೋಡಲು
ಮಾನಿನಿ ವಿದ್ಯಾಲತೆಯು ॥ ೫

---

* ಭೂಮಿ–ದಿತಿ ಇವಳ ಗಂಡ–ಕಶ್ಯಪ ಈತನ ಮಗ ಹಿರಣಾಕ್ಷ ಭೂಮಿಯ ಕರ್ತಳ–ಉಷಾಳ ತಂದೆ–ಬಾಣನ ಬಾಗಿಲ ಕಾದವನು ಈಶ್ವರ, ಹಿರಣ್ಯಾಕ್ಷನು ತಾಮಸದಿಂದ ಕದ್ದೊಯಿದ ಭೂಮಿಯ ಕರ್ತಳ–ಉಷಾಳ ತಂದೆಯಾದ ಬಾಣನ ಬಾಗಿಲ ಕಾಯಿದ ಶಿವನೆ ಸಲಹು

ರಾಯನ ರಾಣಿಯು ಬನ ನೋಡಲು ತನ್ನಗೆಣೆ
ನಾಯಕಿಯರ ಬರಿಸಿದಳು ।
ಕಾಯಜನವನ ಮೇಲೆ ದಂಡ ನೆಗೆದವೊಲು
ತ್ಸಾಯದಿ ಕೇಳ್ತಳರಿದಳು ॥ ೬

ಉಂಗುರ ನಡುವಿನ ಪೊಂಗೊಡ ಮೊಲೆಯರು ಕು
ರಂಗ ಲೋಚನೆಯಬಳೆಯರು ।
ತಿಂಗಳ ಮೊಗದಳಿಕುಳವಳಕದ ಲ.
ತಾಂಗಿಯರೈತಂದರೊಲಿದು ॥ ೭

ಕೆಂದಳಿರಡಿಯರು ಪೊಂಬಾಳೆದೊಡೆಯರು
ಸಿಂಧುರಾರಿಯ ಮಧ್ಯದವರು ।
ಪೊಂದಾವರೆ ಮೊಗ ನೈದಲೆ ಗಣ್ಣಿನ
ಮಂದ ಗಮನೆಯರೈದಿದರು ॥ ೮

ತೆಳುವಸಿರು ಸುಳಿನಾಭಿ ಬಳಕುವ ನಡು ಮೊಗ್ಗೆ
ಮೊಲೆಯೊಪ್ಪತಾಳ್ದಬಲೆಯರು ।
ನಳಿತೋಳು ತಳಿರ್ದುಟಿ ಕಳೆಯಿಂದ ರಾಜಿಪ
ಗೆಳದೇರು ಬಂದರರ್ಥಿಯಲಿ ॥ ೯

ಬೆಳಲ್ಗಾಯ ಮೊಲೆಯರು ತೆಂಗಾಯ ಮೊಲೆಯರು
ಚೆಲುವ ಕಂದುಕ ಮೊಲೆಯವರು ।
ಪೊಳೆವ ಪೊಂಗಳಸದ ಮೊಲೆಯಿಂದಲೊಪ್ಪುವ
ಲಲನೆಯರೈತಂದರೊಲಿದು ॥ ೧೦

ಕುಡತೆಗಂಗಳೆಳೆಯರು ಕಮಲದಳಾಕ್ಷಿಯರು
ನಿಡುಗಂಗಳಸೋಗೆಗಂಗಳ ।
ಕಡೆಗಣ್ಣ ನೋಟದ ಮಡದಿಯರೈತಂದರು
ಪೊಡವೀಶನರ್ಧಾಂಗಿ ಬಳಿಗೆ ॥ ೧೧

ಇಂಗಡಲಿನ ತೆರೆ ಬೆಳುದಿಂಗಳೆಳೆವಳ್ಳಿ
ಕಂಗೊಳಿಸುವ ತಟಿ ಪ್ರಭೆಯ ।
ಸಂಗಾತಿಯರು ತಂದು ಬೆಳ್ವಣ್ಣದುಕೂಲವ
ನಂಗನೆಯಳಿಗುಡಿಸಿದರು ॥ ೧೨

. . . .
ಸೀಮೆಗೆ ಕುರುವನಿಟ್ಟಂತೆ ।
ಹೇಮದ ಮೇಖಲೆ ಪಿಡಿನಡುವಿನ ಸುತ್ತ
ರಾಮಿಸುತಿರ್ದುದೇನೆಂಬೆ ॥ ೧೩

ಮುಡಿಯ ಭಾರಕೆ ಗಳ ಬಳುಕುವದೆಂದದರ
ನಡುವೆ ಚಿನ್ನದ ಕಟ್ಟ ತಂದು ।
ಮಡದಿಯರು ಬಿಗಿದೊಲು ಮುತ್ತು ರತ್ನಗಳಿಂದ
ಜಡಿಸಿದ ಚಿಂತಾಕವೆಸೆಯೆ ॥ ೧೪

ಸೋಲಿಸಿ ಮದನನ ರಥವ ಮುರಿದು ತಂದ
ಗಾಲಿಗಳಿವೊ ಎಂಬಂತೆ ।
ಲೋಲ ಲೋಚನೆಯ ಕರ್ಣದಲಿಟ್ಟರು ಮುತ್ತಿ
ನೋಲೆಗಳ ಸಖಿಯರರ್ಥಿಯಲಿ ॥ ೧೫

ಅರಸಿ ಕೇಳ್ ನಿನ್ನನಾಳುವ ವೀರಸೇನನ
ಸರಸಾಲಾಪಗಳಲ್ಲದನ್ಯಾ ।
ಪುರುಷರ ನುಡಿಗಿವು ಮಾರಿಯಾಗಿರಲೆಂದು
ಧರಿಸಿದರ್ಥಿಮಿಗೆ ಕೊಪ್ಪುಗಳ ॥ ೧೬

ವಿಮಳಾಂಗಿ ವಿದ್ಯಾಲತೆ ನಯನಗಳೆಂಬ
ಕುಮುದವೆರಡು ಪಗಲರಳೆ ।
ಕಮಲಸಂಭವನರೆದಿಂಗಳನಿಟ್ಟಂತೆ
ಗಮಕದೊಳಿದ್ದಿತಾ ನೊಸಲು ॥ ೧೭

ಇಂದುವಿನ ಸಪ್ತಮಿಯ ವಸತಿನ ಕ್ಷೇತ್ರವು ಆ
ನಂದದಿ ಬಂದು ಪಾರ್ವತಿಯು ।
ಚಂದಾಗಿ ಮೋಹಿಸುವಂತೆಸೆದಿರ್ದುದು
ಚಂದದ ಪಣೆ ಬೊಟ್ಟು ಸತಿಯ ॥ ೧೮

ಚಂಪಕ ನನೆಯೊಳಿಬ್ಬನಿ ಪತ್ತಿತಾಗಿ
ಕಂಪಲಿ ತೊಟ್ಟಿಡುವಂತೆ ।
ತಂಪುಗದಿರ ಮುಖಿಯ ನಾಸಿಕಾಗ್ರದಿಯಿತ್ತು
ನುಂಪಿನ ಮೂಗುತಿ ಮುತ್ತು ॥ ೧೯

ಪಾಪಿ ನರರ ದಿಟ್ಟಿ ಸೋಂಕಿದಡೀ ಸತಿ
ಗಪ್ಪುದು ಜಡಮೆಂದು ಸತಿಯ ।
ಕಾಪಿಟ್ಟರೆಂಬಂತೆ ಬೆನ್ನಿನೊಳೊಪ್ಪಿತ್ತು
ಆ ಪುಣ್ಯಸತಿಯ ಸೋಗೆ ಮುಡಿಯು ॥ ೨೦

ಸೂರಿ ಜನ ಮಗಳಂತೆ ಶೌರಿ ವಿಗ್ರಹದಂತೆ
ತಾರೆಗಳಿಹ ಬೀಡಿನಂತೆ ।
ಕಾರಿರುಳಂತರಸಿಯ ಕಣ್ಣ ಪಶ್ಚಿಮ
ವಾರಣವೆಸೆದಿಹುದು ॥ ೨೧

ಸರ್ವಾಭರಣ ಗಂಧಪುಷ್ಪ ಲೇಪನದಿಂದ
ಕಾರ್ವಿಲ್ಲನ ಸತಿ ರತಿಗೆ ।
ನೂರ್ವಡಿ ಚಂದಗೈದರು ಗೆಳದಿಯರೆಲ್ಲ
ಊರ್ವೀಶನರ್ಧಾಂಗಿಗವರು ॥ ೨೨

ಸಗ್ಗದ ಸ್ತ್ರೀಯರಿಗಗ್ಗಳ ರೂಪಿನ
ಒಗ್ಗಿಲಿ ಸತಿ ಜ್ಞಾನ ಲತೆಯು ।
ಹಿಗ್ಗುತ ವೆಣ್ಗಳ ಒಗ್ಗಿಲಿ ನಡೆದಳು
ದಿಗ್ಗಜದೊಲು ಬನ ನೋಡಲು ॥ ೨೩

ಮದಗಜಸಂಕುಳವೊ ಸಿಂಗದ ಮರಿಗಳೊ
ಬೆದರಿದ ಪುಲ್ಲೆ ವಿಂಡುಗಳೊ ।
ಚದುರೆಯರೆಂಬಂತೆ ನಡೆತಂದರಾ ರಾಯ
ವಧುವಿನ ಎಡಬಲದಲಿ ॥ ೨೪

ಭ್ರಮರ ಶಿಖಿಯು ಅರ್ಧಹಿಮಕರಧನುತಿಲ
ಸುಮನವಾರಡಿ ಶಶಿಬಿಂಬ ।
ವಿಮಳ ಶಂಖಹಿಕರಿ ಚಮುರು ಸುಳಿಯಬಾಳೆ
ಕಮಠ ತರರ್ತಳಿರಹೆಂಗೆಳೆಯರು* ॥ ೨೫

---

* ಭ್ರಮರ ಶಿಖಿ–ದುಂಬಿಗಳಂತೆ ಕಪ್ಪಾದ ತುರುಬುಳ್ಳವರು; ಅರ್ಧಹಿಮಕರ ಧನು ಅರ್ಧಚಂದ್ರನಂತೆ ಬಾಗಿ ಧನುವಿನಾಕಾರದ ಹಣೆಯುಳ್ಳವರು; ಸುಮನವಾರಡಿ–ಹೂಗಳ ಮೇಲೆ ಚಲಿಸುವ ದುಂಬಿಗಳಂತೆ ಹಣೆಯ ಮೇಲೆ ಸುಳಿದಾಡು; ವ ಅಲಕವುಳ್ಳವರು, (ಮುಂಗುರುಳ್ಳುಳವರು) ವಿಮಳಶಂಖ–ಬಿಳುಪಾದ ಕಂಠ (ಕುತ್ತಿಗೆ)ವುಳ್ಳವರು, ಚಮುರು–ಜಿಂಕೆ–ಚಂಚಲತೆಯುಳ್ಳ, ಸುಳಿಯಬಾಳೆ–ಗುಂಗುರು ಕೂದಲು, ಚಂಚಲ ಕಣ್ಣುಗಳುಳ್ಳವರು, ಕಮಠತರರ್, ಆಮೆಯ ರೀತಿಯ ಪಾದಗಳುಳ್ಳ ಕೋಮಲ ಸ್ತ್ರೀ ಸಮೂಹ

ಕೊಡೆಯ ನೆಟ್ಟಗೆ ನೆಗಪು ನಡೆಸು ದಂಡಿಗೆಯ
ಬಿಡದೆ ಚಾಮರವ ಡಾಳಿಪುದು ।
ಎಡಬಲದೊಳಗವಧಾರೆಂದು ಪೇಳುವ
ಮಡದಿಯರು ಕೆಲರೊಪ್ಪುತಿಹರು ॥ ೨೬

ಆಗಲಾ ರಾಣಿಯ ಮುನ್ನಡೆದು ಬತ್ತೀಸ
ರಾಗವ ನೆಲೆಗಳನರಿದು ।
ಸೋಗೆ ಕುಂತಳೆಯರು ಕೆಲರಲ್ಲಿ ಪಾಡುತ
ಸಾಗಿದರಾ ಬನಕಂದು ॥ ೨೭

ಪೊಡವಿಪನರಸಿಯ ಎಡಬಲದೊಳು ಕಯ್ಯ
ವಿಡಿದಿನಿ ನುಡಿಗಳಾಡುತಲಿ ।
ನಡೆತರುತಿಹ ಕೆಲ ಕುಡುತೆಗಂಗಳೆಳೆಯರ
ಸಡಗರವನೇನ ವರ್ಣಿಪೆನು ॥ ೨೮

ಕಾರ್ಮುಗಿಲ ಸೋಲಿಸುವ ಸೋರ್ಮುಡಿಯ ಚಿತ್ತಜನ
ಕಾರ್ಮುಖವ ಪೋಲ್ವ ಪುರ್ಬುಗಳಿಹ ।
ಭರ್ಮೆಯ ಕಳಶ ಕುಚ ಕೂರ್ಮಾಂಘ್ರಿ ಚೆಲ್ವೆತ್ತ
ನಿರ್ಮಳಾಂಗಿಯರು ನೆರೆದಿಹರು ॥ ೨೯

ತಣ್ಬಿಸಿಲ ಸೋಲಿಸುವ ಮುಗುಳ್ನಗೆ ಸದ್ಗಂಪು
ನುಣ್ಬನ ಪಳಿವ ಕುರುಳ್ಗಳು ।
ನುಣ್ಬಟ್ಟೆ ಸಸಿ ಮೊಗದಾಳೇರು ಬಂದರು
ಜಾಣ್ಬೆತ್ತ ರಾಣಿಯಗೂಡಿ ॥ ೩೦

ಪರಳು ಕುಚದ ತುಂಬೆ ಗುರುಳುದಲೆ ಶಂಖು
ಗೊರಳನಂಗನ ಸರಳ ಪೋಲ್ವ ।
ವೆರಳುಗ್ಯೆಯ್ಯರು ಕೆಲತರಳೆಯರಿರ್ದರು ಕೇಳು
ಇರುಳೆರೆಯನ ಮೊಗರಾಣಿಯಲ್ಲಿ ॥ ೩೧

ಅಳಿಗಳ ಕಂಬುದಾವರೆ ಮೊಗ್ಗೆ ಸಿಂಗಾನೆ ಕ
ದಳಿಯ ಬನವನಣಕಿಪವು ।
ಲಲನೆಯರ ಜಂಘ ಪೆರ್ದೊಡೆ ಕಟಿ ಸಣ್ಣಡು
ಮೊಲೆಗಳು ಸುಳಿಗುರುಳುಗಳು ॥ ೩೨

ಸುದತಿಯರ ಮೆಲ್ನಡೆ ಸಿಂಗಾರ ಸೊಬಗಿನ
ವದನ ಗಂಡಾನೆಗಳೆಂಟು ।
ವದನವದೋರದೆ ಒಂದೊಂದು ದಿಕ್ಕಿಗೆ
ಕದಲಿಪವು ಕೇಳೆಂದ ॥ ೩೩

ಬೊಕ್ಕಸ ಹಡಪವು ಗಿಂಡಿ ಕಾಳಂಜಿಯು
ಇಕ್ಕುವ ಕಂಕ ಬಿಜ್ಜಣವು ।
ಚೊಕ್ಕಟ ಪರಿಮಳ ಭರಣಿ ದರ್ಪಣವಿಡಿದ
ಕಕ್ಕಸ ಕುಚವೆಯರೈದಿದರು ॥ ೩೪

ಪಾವಿಗಿಯಾಡುವ ಲೆತ್ತದ ಪಗಡಿಯು
ತಾವೇಳೆ ಗಳೆವ ವೇಣಿಯರು ।
ಭಾವಕಿಯರೊಂದಾಗಿ ಈಯರಸಿಯ ಬೆನ್ನ
ತೀವಿಕೆಯಲಿ ಬಂದಿಹರು ॥ ೩೫

ಇಡುವುದು ಮನಪರಾಗದ ಸುಖಕಿನ್ನು
ಕೊಡುವುದು ಕರ್ನ ವಾದ್ಯ ತತಿಗೆ ।
ಬಡುವುದು ಸಂದಣಿಯರಸಿಯೆ ಮುಂದೆಂದು
ನುಡಿವ ವೆಣ್ಗಳು ಕೆಲರೆಸೆಯೆ ॥ ೩೬

ಆಳಕಗ್ಯೆಯಲು ಕೆಲ ಊಳಿಗದ ಸ್ತ್ರೀಯರು
ಓಳಿವಿಡಿದು ಬನ್ನಿರೆಂದು ।
ಪೇಳುವ ಕೆಲವೆಣ್ಗಳರಸಿಯನೊಡಗೂಡಿ
ಕೇಳಿಬನಕೆ ಬರುತಿಹರು ॥ ೩೭

ಕಾವನೆನಿಪ ಸಿದ್ಧನನಾರಾಧಿಸುವ ಮಂತ್ರ
ದೇವತೆಯರೊ ಯೆಂಬಂತೆ ।
ಆ ವನ ನೋಡಲು ಎಡಬಲದಲ್ಲಿ ಘನ
ತೀವಿರ್ಪುದಾಸತಿ ಜನವು ॥ ೩೮

ಬಲ್ಲಿದನೊಳು ಸಮರಕೆ ಪೋಪವೋಲ್ ರಾಣಿ
ಬೆಳಲ್ಗಾಯ ಕುಚೆಯರೊಂದಾಗಿ ।
ಬೆಳ್ಗೊಡೆ ನೆಳಲಿಂದ ಪೊರಮಟ್ಟಳಾ ಬನಕೆ
ಕೊಳಲ್ ಕಾಳೆ ತಮಟಿಯಿಂದ ॥ ೩೯

ಅಂದಳವನು ಪತ್ತಿ ನಡೆದಳಾ ರಾಣಿಯು
ಗೊಂದಣ ಸತಿಯರೊಂದಾಗಿ
ಛಂದ ಛಂದದ ವಾದ್ಯ ಸಂದಣಿಯಿಂದಾಗ
ಬಂದಳಾ ಬನವಿರ್ಪ ಬಳಿಗೆ ॥ ೪೦

ಗೋತ್ರನ ಖಾಂಡವ ವನವು ಮುನ್ನ ವೀತಿ
ಹೋತ್ರನಟ್ಟುಳಿಗಾರದಂಜಿ ।
ಧಾತ್ರಿಗಿಳಿದು ಬಂದಿತೆಂಬೊಲು ಈ ಬನ
ನೇತ್ರಕಾನಂದ ದೋರಿತ್ತು ॥ ೪೧

ಆವನ ಕಾವನ ಜೀವನವೆನಿಪುದು
ಆವನ ಭುವನಕಧಿಕ ।
ಆವನ ಮಾವನ ಭಾವದಿಂದೊಪ್ಪುವ
ದಾವನವೇನ ಬಣ್ಣಿಪೆನು ॥ ೪೨

ಭೂವರನರಸಿಯ ಪತಿಭಕ್ತಿ ಸಿರಿಗೇಳಿ
ದೇವೇಂದ್ರನರ್ಧಾಂಗಿಯೊಲಿದು ।
ಹೂವಳೆಗರಸಿದಳೆಂಬೊಲು ಸತಿಗಾಗ
ಪೂವನ ತೀವಿ ಕಂಗೆಸೆಯೆ ॥ ೪೩

ಕೈರವ ಸಖನಂತೆ ಮಲಯಾಚಲದಂತೆ
ಪಾರಿಜಾತದ ಬಗೆಯಾದಂತೆ ।
ವಾರುಧಿಯಂತರಸಿಯ ಸೋಗೆ ನಯನಕ್ಕೆ
ದೋರಿತಾಬನ ಮುದವೆತ್ತು ॥ ೪೪

ಮಾರನ ಸದನವೊ ವಸಂತನಿಹ ಬೀಡೊ
ಕೀರಗಳೋದುವ ಮಠವೋ ।
ಮಾರುತನಿಹ ಪಕ್ಕೆ ಪಿಕಗಳ ಚಾವಡಿ ಮ
ಯೂರನಾಡುವ ನಂದನ ವನವು ॥ ೪೫

ತಳಿರ ತಾಣವು ನಾನಾ ಫಲನಾಧಾರ ಪುಷ್ಪ
ಕುಲ ಜನ್ಮ ಭೂಮಿ ಎಳೆವಳ್ಳಿ ।
ನೆಲೆ ತಿಳಿಗೊಳನ ಸಂದಣಿಯಿಂದಲಾ ಬನ
ನಳನಳಿಸುತ ಕಣ್ಗೆಸೆಯೆ ॥ ೪೬

ಆ ವಸಂತ ಭೂಪನು ಬನದೇವಿಗೆ
ಪೂವಣ್ಣು ಫಲ ತಳಿರಿಂದ ।
ತೀವಿಪೂಜೆಯಾಗಲ್ಕಟ್ಟಿದಂತಿರ್ದುದಾ ಬನ
ಭಾವಕಿಯರ ಕಣ್ಣಿಗೆಂದ ॥ ೪೭

ಈ ವನ ಲಕುಮಿಯ ನೋಡಲಾ ಸಗ್ಗದ
ದೇವತೆಯರಿಳಿದು ಬಂದಂತೆ ।
ತಾವರೆ ಮುಖರಾಣಿ ಸಹಿತೆಲ್ಲ ಸ್ತ್ರೀಯರು
ತೀವಿದರಾ ಬನದೊಳಗೆ ॥ ೪೮

ಕಾಣುತ ಪೊಕ್ಕಳು ಬನದಲ್ಲಿ ರಾಯನ
ರಾಣಿ ಯಿಳಿದಳು ದಂಡಿಗೆಯ ।
ಏಣಾಕ್ಷೆಯರೊಂದಾಗಿ ಪೂವಳ್ಳಿ ತರುಫಲ
ಶ್ರೇಣಿ ನೋಡುತ ಬರಲಲ್ಲಿ ॥ ೪೯

ಪೊಸ ಪಚ್ಚೆ ಗಿರಿಯಂತೆ ಪವಳದ ನಗದಂತೆ
ಮಿಸುಪ ನೀರ್ಮಣಿ ರಾಜಿಪಂತೆ ।
ಪಸುರೆಲೆ ಕೆಂದಳಿರು ಕುಸುಮವಳಿಗಳಿಂದ
ಎಸೆದುದು ಬನ ರಾಣಿ ಕಣ್ಗೆ ॥ ೫೦

ಕೋಗಿಲೆ ಗಾನವು ಬಂಡುಣಿಗಳ ಶ್ರುತಿ
ಸೋಗೆಯಾಡುವ ನರ್ತನಕ್ಕೆ ।
ಆಗಲಾವನ ಬನವೊಲ್ದು ಪಣ್ಬಲ
ತ್ಯಾಗಮೀವೊಲು ಕಂಗೆಸೆದುದು ॥ ೫೧

ನೀರುಣಿಸಿ ಪೊರದರ ಪಂಗಿಗೆ ನೂತನ
ನೀರು ತೀವಿದ ಕಾಯಿಗಳನು ।
ನಾರಿವಾಳವು ತಮ್ಮ ತಲೆಯಲ್ಲಿ ಪೊತ್ತವಾ
ಕಾರದೊಳು ಸುತ್ತಮೆಸೆದಿಹವು ॥ ೫೨

ಪಂಗಗಳಯಲೆಂದು ಭೂಮಿಗೆ ತಮ್ಮುತ್ತ
ಮಾಂಗದೊಳು ಪಣ್ಗೊನೆವಿಡಿದು ।
ಪೊಂಗದಳಿಗಳಿಹ ತೆರದೊಳೀ ಬನದಲ್ಲಿ
ಕಂಗೊಳಿಪವು ಸತಿ ನೋಡ ॥ ೫೩

ವಿಷ ಊಡಿದವರಿಗೆ ಪಾಲೆರೆಯ ಬೇಕೆಂದು
ಬೆಸಸುವ ಗಾದೆಯ ಕೇಳ್ದು ।
ಎಸೆದವು ಪನಸು ಬೇರುಗಳಿಂದ ತನಿವಣ್ಣು
ವಸುಧೆ ವಾಯಿದೆರೆದ ವೋಲಲ್ಲಿ ॥ ೫೪

ಬನವೆಂಬ ಕರ್ನಿಕೆಯುಡಿಯಲ್ಲಿ ವಸವಂತ
ತನಿವಣ್ಣು ಅಡಿಕೆಲೆ ಪೂವ ।
ಬಿನದದಿಂದ ಈಕ್ಷಿಸಿ ತೀವಿದೊಲು ನೋಳ್ಪ
ಜನರ ಕಂಗೆಸೆದವು ಕೇಳ॥ ೫೫

ನಳಿನಗಂಧಿಯರು ಪೊರಬೀಡ ಬಿಟ್ಟುದ
ಆಲರಂಬನಿಗೆ ಬೇಹ ನೊಯ್ವ*।
ಆಳುಗಳೆ ಬಂದೊಲು ಬನದಲ್ಲಿ ಸುಳಿವುದು
ತಿಳಿಗಂಪು ತಣ್ಣಸಂಗೂಡಿ ॥ ೫೬

ಮಾರನ ದಂಡು ರಾಣಿಯ ಕೂಡ ಕೇಳ್ಕಾದ
ಲಾರದೆ ಮುರಿದುದೆಂಬಂತೆ ।
ಪಾರಿದವಳಿಗಳು ಮರತರು ಹೂ ಬಿಟ್ಟು
ನೇರಿದ ವಸವಂತ ಮರನ ॥ ೫೭

ಕೀರಗಳಂಜಿ ತಳಿರ್ಗರ್ಚಿದವು ಪಿಕ
ಚೀರುತಲುಳಿದಡಗಿದವು ।
ವಾರಣ ಗತಿಯರು ಚೆಂಬುಯಿಲು ಬಂದೊನ
ಸೂರೆಗೊಂಬೊಲು ಕಂಗೆಸೆಯೆ ॥ ೫೮

ತಳಿರು ತಂಗಾಳಿ ವನರೂಪು ಫಲಸಾರ
ಆಲರು ಗಂಪೆಂಬೈದರಲ್ಲಿ ।
ಎಲೆ ಕೇಳ್ವಸರಿಸಿದವಾ ಲಲನೆಯರ
ಚೆಲುವಟ್ಟ ಪಂಚೇಂದ್ರಿಯದಿ ॥ ೫೯

ಅಂತರದೊಳು ಸಾರ ಬಯ್ತಿಡಲವೆಲ್ಲವನು ಕರಿ
ಣಾಂತ್ಯೆಡೆಯಾದ ಕೈಗಳಿಗೆ ।
ಎಂತೆಣೆಯಪ್ಪುವೀತೆಂಗಾಯಿ ಮೊಲೆಗಳಿಗೆ
ಕಾಂತೆ ನೋಡೆಂದು ತೋರಿದರು ॥ ೬೦

---

* ಬೇಹ =ಬೇಗಾರಿಕೆ – ರಹಸ್ಯ ಭೇದಿಸಿ ಸುದ್ದಿ ಮುಟ್ಟಿಸುದಿಕೆ

ಕಂದದು ಕುಂದದು ಬಣ್ಣೆರಡಹುದು
ಕಂದದಳಿರು ಎಮ್ಮ ದುಟಿಯು ।
ಚಂದಕ್ಕೆ ಸಮನಲ್ಲವೆಂದಾದಳಿರನು
ತಂದು ರಾಣಿಗೆ ತೋರುತಿಹರು ॥ ೬೧

ಮುಟ್ಟಿದರೆ ಮೃದುವಿಲ್ಲ ಪುಳಿಸಾರ ಒಡಲಲ್ಲಿ ।
ಇಟ್ಟುದೋರುವ ಬೆಳಲ್ಗಾಯಿ ।
ಮುಟ್ಟಿದರೆ ಮೃದುಸುಖ ಕರತಳಕೆವಾಗಿರ್ಪ
ಬಟ್ಟ ಕುಚಕೆಣೆ ನೋಡ ॥ ೬೨

ಪೂವೆಲೆ ಮರ ತಿಗುಡು*ಕಾಯಿವಣ್ಣು ಅಂಬರವ
ತೀವಿರ್ಪತರುಗಳನೊಲ್ದು ।
ತಾವರೆ ಗಂಧಿ ನೀನೋಡೆಂದು ತೋರಿದ
ರಾವನದೊಳಗಬಳೆಯರು ॥ ೬೩

ಪಣ್ಣಿನೊಳಗೆ ಮೂರು ಬಣ್ಣವ ತಾಳಿದ
ಪಣ್ಣುಗಳಿರ್ಪ ವೃಕ್ಷವನು ।
ಹೆಣ್ಣುಗಳರಸಿಗೆ ದೋರುತಲಿರ್ದರು
ಚೆನ್ನನೆ ಕೇಳು ಬನದೊಳಗೆ ॥ ೬೪

ಮುಳ್ಳಿಲೆ ಮುಡಿದರೆ ಪರಿಮಳವೀವುದು
ಸುಳ್ಳು ಶಂಕರಗೆ ಮುನ್ನದಿ ।
ಸಲ್ಲದೆ ಕೆಲದಿನವಿರ್ದ ಕೇತಕಿವನ
ಸಲೆ ನೋಡೆಂದು ಕೈತೋರಿದರು ॥ ೬೫

ಸಂಪನ್ನ ರಾಯನ ರಾಣಿಯೆ ನೋಡು ನಿನ್ನ
ನುಂಪಿನ ಪಲ್ಮಿಂಚುದುಟಿಯ ।
ಕೆಂಪಿಗೆ ಮನಸೋತು ಮೈಮರೆದು ವಾಯಿವಿಟ್ಟ
ಹೆಂಪಿನ ದಾಡಿಮ ಪಣ್ಣ ॥ ೬೬

---

*ತಿಗುಡು–ತಿಗಡ, ತೊಗಟೆ, ಆಂಬ್ರವ–ಅಂಬರವ, ತೀವಿರ್ಪ–ಆಕಾಶದೆತ್ತರಕ್ಕೆ ಬೆಳೆದ ಮರಗಳನ್ನು ನೋಡೆಂದು ಸಖಿಯರು ರಾಣಿಗೆ ತೋರಿದರು.

ಮಾರತಾನೇರಿರ್ಪ ದೇರಿಗೆ ಹೂಡಿದ
ಕೀರಗಳಿವು ಮುದವೆತ್ತು ।
ನಾರಿಕೇಳು ನಿನ್ನಮರ್ದುಟಿಗೆಂಪನೀಕ್ಷಿಸ
ಸೇರಿದವೀ ಬನದಲ್ಲಿ ॥ ೬೭

ಸಂಚಲಾಕ್ಷಿಯೆ ನಿನ್ನ ಗಮಕದ ನಡೆಯನು
ಅಂಚೆಗಳೆಲ್ಲ ಕಾಣುತಲಿ ।
ನಾಂಚಿ ಬೆಳ್ವೇರಿದಂತೆ ಬನದೆಡೆಯಲಿ
ಮಿಂಚುವ ಫಲವಿವೆ ನೋಡ ॥ ೬೮

ಹೆಂಗಳ ರನ್ನವೆ ಕೇಳು ನಿನ್ನ ಮುಡಿಸೋಗೆ
ಸಿಂಗರವನು ನೋಡಲೆಂದು ।
ಕೆಂಗರಿಗಳ ತಂಡ ಬಂದಿವೆ ಬನದಲ್ಲಿ
ತುಂಗ ಕುಚಿಯರರುಹಿದರು ॥ ೬೯

ಆಯವ ಪೇಳಿ ರಾವಣನಿಂದ ಮುನ್ನಲ್ಲಿ
ಗಾಯವಡೆದು ಬಳಲಿಕೆಯ ।
ಈಯಾಗರದೊಳಾರೈದುಕೊಳ ಬಂದ
ರಾಯ ಸಾಳುವನಿದೆ ನೋಡ ॥ ೭೦

ವಾರಿಜಮುಖಿ ನಿನ್ನ ಶಿರರುಹ ಕಪ್ಪನು
ಆರಡಿಗಳು ಕಂಡು ನಾಚಿ ।
ಪಾರುತವೆ ಮುಖದೋರದೆ ಕೇಳ್ನಿನಗೆಂ
ದೋರಿದರಾ ಭ್ರಮರಗಳ ॥ ೭೧

ಬಗಸೆಗಂಗಳೆ ನಿನ್ನ ಯಿಂಪಿನ ಸ್ವರಗಳಿಗೆ
ಬೆಗಡುಗೊಂಡವು ಪಿಕವೆಲ್ಲ ।
ಮಗುಳೆ ನಿನ್ನಿದಿರಿಗೆ ರವದೋರಲಮ್ಮದೆ
ದೆಗದು ಪೊಕ್ಕವು ಮಾಮರನ ॥ ೭೨

ಬನಸಿರಿ ಲಾವಣ್ಯ ರಸದ ಬೊಬ್ಬುಳಿಯಿದೊ
ತನಿವಣ್ಣುಗಳ ರಸಮೊಸರೆ ।
ವನವೆದ್ದು ಬಂದಿಲ್ಲಿ ನಿಂದೊಲು ಎಸೆದಿದೆ
ಬನ ನೋಡೀತಿಳಿಗೊಳನ ॥ ೭೩

ತಾರೆಗಳಂತೆ ಗೀರ್ವಾಣ ನಿಚಯದಂತೆ
ನಾರಾಯಣನ ನಾಭಿಯಂತೆ ।
ವಾರಿಜಾಂತಕನಂತೆ ಸುರಪನಾಹರದಂತೆ
ನಾರಿ ಕಂಡಳು ಕೊಣದಲ್ಲಿ ॥ ೭೪

ಶ್ವೇತಮಂಜಿಷ್ಟ ಹರೀತ ಕಪೋತವು
ಪೀತಾದಿ ಪಂಚ ವರ್ಣಗಳ ।
ನೀತಿಲಿ ಕೊಳನೊಂದು ಬನದೆಡೆ ಕೇಳು ಭೂಮಿ
ನಾಥನ ಸತಿ ಕಂಡಳೆಂದ ॥ ೭೫

ಆದರೆ ಕೇಳಾ ದಿನಪನ ತನುಜೆಯ
ಸೋದರನಿಕ್ಕೆಲ ದೆಸೆಯ ।
ಆಧಾರವಪ್ಪರ ಪೆಸರಿಂದಲಾ ಕೊಳ
ಕಾದಲೆಯರ ಕಂಗೆಸೆಯಿತು ॥ ೭೬

ಏಕಮಾಗಿರ್ದುದನೆರಡು ಮಾಳ್ಪುದು ನಮ್ಮ
ಭೂಕಾಂತನೆಚ್ಚಂಬು ಕೇಳ ।
ಮಾಕಂದದೆಸಳು ಇದು ದ್ವಯಮಾದವಸ್ತುವ
ನೇಕ ಮಾಳ್ಪಂಬಿವೆ ನೋಡಾ ॥ ೭೭

ವಾರಣಗತಿಯರ ಕಣ್ಣ ಸೊಬಗ ನೋಡಿ
ಕೈರವಕುಲ ಲಜ್ಜೆವಿಡಿದು ।
ಸೈರಿಸಲಾರದೆ ನೈದಲೆ ಕಣ್ಮುಚ್ಚಿ
ನೀರಬಿಟ್ಟು ಎಸೆದಿಹವು ॥ ೭೮

ಈ ವನಸಿರಿಯೊಳು ಮಾತನಾಡಲಾಗಸ
ದೇವ ಧರೆಗಿಳಿದು ನಿಂದಂತೆ ।
ಭೂವರನರಸಿಯ ಕಣ್ಣಿಗೆ ವಿಮಳಾಂಬು
ತೀವೆಸೆದುದು ಕೊಳ ಕೇಳ ॥ ೭೯

ನೆಲನೊಡೆಯನ ರಾಣಿ ಬನ ನೋಡಲ್ಕೆ ತಂದು
ಚೆಲುವ ನೀಕ್ಷಿಸಲೊಲವಿಂದ ।
ಜಲದೇವಿಯರು ತಮ್ಮ ಮೊಗವೆತ್ತಿ ನೋಳ್ಪಂತೆ
ನಳಿನಮಿದ್ದವು ಕೊಣನಲ್ಲಿ ॥ ೮೦

ಅಳಿಗಳೆ ಕುರುಳು ತಾವರೆ ಮೊಗ ನೈದಲೆ
ಯಲರು ನಯನ ಕಮಲನಾಳ ।
ಲಲಿತ ತೋಳುಗಳಿಂದಲಾಕೊಣನರಸಿಯ
ಬಲಗೊಂಬೊಲೆಸೆದುದು ಕೇಳ ॥ ೮೧

ಪಚ್ಚೇದ ಕೊಡೆಗಳ ನೆಗಹಿಸಿ ಜಲದೇವಿ
ಉಚ್ಚಯದಿಂದಲಿ ಸತಿಯ ।
ಹೆಚ್ಚಿಲಿ ಇದಿರುಗೊಂಬಂತೆಸೆದಿರ್ದವು
ಪಚ್ಚ ಪಸಿಯ ಪದ್ಮಪತ್ರ ॥ ೮೨

ಕಮಲದುಂಬಿದ ಕೊಣ ಕಮಲವಾರಡಿಯಿಂದ
ಕಮಲ ಪೊಂಬಣ್ಣ ರೂಪಾಗಿ ।
ಕಮಲ ಸಂಕುಳದೆಡೆಯಲಿ ಎಸೆದಿರ್ದುದ
ಕಮಲಗಂಧಿನಿ ಕಂಡಳಲ್ಲಿ ॥ ೮೩

ಅಲರಂಬನ ಮುರಿದೋಡಿಸಿ ಯಮಿಜನ
ಸೆಳೆದರ ವನತಕ್ಕೆಯ ತಂದು ।
ಕೊಣನಲ್ಲಿ ಮುಳುಗಿಸಲಾದವೀ ಜಲಚರ
ಲಲನೆ ನೋಡೆಂದು ತೋರಿದರು ॥ ೮೪

ಕೊಣನೊಳು ಪತಿಯಿಲ್ಲದಿರೆ ಪೊರಮಟ್ಟಂದು
ಕೊಣರ್ವಕ್ಕಿಗಳ ರವದಿಂದ ।
ಕಣರ್ಕ್ಕು ಕಣರ್ಕ್ಕು ಬಕ್ಕು ಬಕ್ಕೆಂಬುತ
ಕೊಣರ್ವಕ್ಕಿಯಾಗ ಕರವುದನು ॥ ೮೫

ಕಮಲಗಂಧಿನಿ ನಿನ್ನ ಮೃದುವಾದ ರೂಪಿಗೆ
ಸಮನಲ್ಲವೆಂದು ಕೂರ್ಮಗಳು ।
ಕ್ರಮಗೆಟ್ಟು ಲಜ್ಜಿಂದ ಬಿರ್ದೊಲು ಕೊಣದಲ್ಲಿ
ಕಮಠಗಳಿವೆ ಸತಿನೋಡಾ ॥ ೮೬

ತಳಿರಡಿಯಳೆ ನಿನ್ನ ನಳಿತೋಳು ಕರತಳ
ಕಳವಟ್ಟವೀ ಕೆಂಪಿನಬ್ಜ ।
ಎಳೆಯಳೆ ನೋಡು ನಿನ್ನ ನಯನಕ್ಕೆ ಎಣೆಯಾದ
ಬಿಳಿಯದಾವರೆ ಬಿಚ್ಚೆಸಳ ॥ ೮೭

ಮಂದಗಮನೆ ನಿನ್ನ ಉರದಲ್ಲಿ ರಾಜಿಪ
ದ್ವಂದ್ವ ಕುಚದ ಚೆಲುವಿಕೆಗೆ ।
ಒಂದಾಗಿ ಕೊಣದಲ್ಲಿ ದೋರುತಲಿವೆ ನೋಡು
ಹೊಂದಾವರೆ ಮೊಗ್ಗೆಗಳನು ॥ ೮೮

ಚೆಲ್ಲವರಿದು ಬನದೊಳು ಬರುತಿರ್ದರು
ಪೊಲ್ಲೆ ಗಂಗಳೆಳೆಯರರ್ಥಿಯಲಿ ।
ನಲ್ಲಳೆ ನಮ್ಮುರವನು ತಾಕಿ ನೋಯಿಪ
ಮಲ್ಲಿಗೆ ಯೆಂದು ದೋರಿದರು ॥ ೮೯

ರಾವಳ ನೆಗೆಯೆ ಮೇರುವ ತನ್ನ ಕೈಯಿಂದ
ಆ ವಿಯಸ್ಥಳದ ತಾರೆಗಳು ।
ತಾವುದುರಿ ಬಿರ್ದೊಲು ಆ ಕೊಣದೆಡೆಯಲ್ಲಿ
ತೀವಿ ಮೊಲ್ಲೆಯದ ಪೂಗಳೆಸೆಯೆ ॥ ೯೦

ಅಂಗಜನೆರಡನೆ ತೋಮರವಿದು ಸ್ತ್ರೀಯ
ಕಂಗಳೆಡೆಗೆ ಸಂಧಿಪುದು ।
ಹೆಂಗಳ ರನ್ನವಶೋಕೆಯ ನೋಡೆಂದು
ಜಂಗುಳಿ ಸತಿಯರು ತೋರಿದರು ॥ ೯೧

ಮಾರನಿಗೊಪ್ಪುವ ಪ್ರಥಮ ಮಾರ್ಗಣೆಯಿದ
ನಾರೆರ ಮೊಗಕೆಲ್ಲ ಪೂಡೆಸೆಯೆ ।
ವಾರಿಜಮಿದೆ ಯೆಂದು ರಾಣಿಯ ಕೈಗೋರ್ವ
ವಾರಿಜ ಮುಖಿ ಯಿತ್ತಳಲ್ಲಿ ॥ ೯೨

ಇದನೇ ಸಿಳೀಮುಖಿ ಮನುಮಥನಿಗೆ ತಾ
ಕಾದಲೆಯರ ಕುಚದೆಡೆಗೆ ।
ಮೂದಲಿಸುವ ಬಾಣ ಕುಮುದವ ತಂದೋರ್ವ ವಿ
ನೋದವ ಸಖಿಯಳು ತೋರಿದಳು ॥ ೯೩

ಕಂಪಿಸುವ ಇರವಂತಿ ಸುರಗಿ ಶಾವಂತಿಯ
ಕಂಪೆಸೆವ ಮೊಲ್ಲೆ ಜಾಜಿಯನು ।
ಚಂಪಕ ಮೊದಲಾದ ಪೂಗಳ ಸೂಡಿದ
ತಂಪಿನ ಬನದೊಳರ್ಥಿಯಲಿ ॥ ೯೪

ಮಾದವಾಲವು ಜಂಬಿ ಹೀರಳೆ ಕಿತ್ತಳೆ
ಆ ದಡಿಂಬವಾದಾರಾಕ್ಷೆ ।
ಸ್ವಾದು ದುಂಬಿದ ಸಕ್ಕರೆ ನಿಂಬೆ ಖರ್ಜೂರ
ವಾದಿಯಾದ ಪಣ್ಣ ದೋರಿದರು ॥ ೯೫

ನಮ್ಮೂರಂಗಡಿಯಲ್ಲಿ ಕಾಣೆವೀಯಡಕೆಲೆ
ನಿಮ್ಮಿಂದಲೀ ಬನದಲಿ ।
ಉಮ್ಮತ್ತ ಕಂಡೆವೆಂದಾಳಿಯರೆನೆ ಕೇಳಿ
ಗಮ್ಮನೆ ನಕ್ಕಳಾ ರಾಣಿ ॥ ೯೬

ಮುಪ್ಪಾಗದೆಲೆ ಅಡ್ಡದಡಕೆಯ ಕೆಲವೆಣ್ಣು
ತಪ್ಪದೆ ತಂದೊಲವಿಂದ ।
ಒಪ್ಪುವ ರಾಣಿಯ ಕಯ್ಯಲಿ ಕೊಟ್ಟಾಡು
ತಿರ್ಪರಾ ಬನದೊಳರ್ಥಿಯಲಿ ॥ ೯೭

ಹೆಂಗಳ ಮಾಣಿಕ ನಿನ್ನ ಚೆಲ್ವಿಕೆ ಕಾಣಲು
ಕಂಗಳೆರಡು ಸಾಲವೆಂದು ।
ಕಂಗಳೊಂದಧಿಕವ ಪಡೆದುದೀ ಫಲವೆಂದು
ಅಂಗೈಯ್ಯೊಳಿಟ್ಟಾಡುತಿಹರು ॥ ೯೮

ಅವನಿಪನರಸಿಗೆ ಶಿವಸುಖ ಸೂಚನೆ
ವಿವರಿಸುವಂತಲ್ಲಿಗೋರ್ವ ।
ಶಿವಯೋಗಿ ಜ್ಞಾನ ಶೇಖರನೆಂಬ ಮುನಿ ಬಂದ
ಕುವರ ಕೇಳಾ ಬನದೆಡೆಗೆ ॥ ೯೯

ತನುಜನೆ ಕೇಳಾ ಯುವತಿಯರೊಂದಾಗಿ
ಬನವ ನೋಡುತ ಬರಲತ್ತ ।
ದಿನಮಣಿಯಂತೆ ಯತಿಕುಲ ರನ್ನನೆನಿಸುವ
ಮುನಿಯೋರ್ವ ಮುಂದೆ ಕಾಣಿಸಿದ ॥ ೧೦೦

ಉಕ್ಷಕೇತನನು ಮುನ್ನ ಋಷಿಗಳಾಶ್ರಮಕೆ
ಭಿಕ್ಷವ ಬೇಡ ಬಂದಂತೆ ।
ಆ ಕ್ಷಣ ಯತಿವರ ಬನದೆಡೆ ನಿಂದುದ
ನೀಕ್ಷಿಸಿದಳು ರಾಣಿ ಕೇಳ ॥ ೧೦೧

ಕಾವಿಯ ದೋತ್ರದ ಕೆಂಜೆಡೆ ಸುಲಿಪಲ್ಲು
ತೀವಿದ ಭಸ್ಮ ಸರ್ವಾಂಗ ।
ತವದ ರುದ್ರಾಕ್ಷಿ ಕೊರಳೊಳಗೊಪ್ಪುವ
ಪಾವನ ಮುನಿ ಕಂಗೆಸೆದ ॥ ೧೦೨

ಉತ್ತಮ ಗುರುಹಿರಿಯರ ದರುಶನ ಪುಣ್ಯ
ಮತ್ತವರಡಿಗೆರಗಿದಡೆ ।
ಮುತ್ತವು ಭವ ಪಾಶವವರ ಸಂಗೋಷ್ಠಿಯೆ
ಅತ್ಯಂತ ಕೈಲಾಸವೆಂದ ॥ ೧೦೩

ಗ್ರಂಥ: ಸಾಧುನಾಂ ದರುಶನಂ ಪುಣ್ಯ
ಸ್ಪರ್ಶನಂ ಪಾಪನಾಶನಂ
ಸಂಗೋಷ್ಠಿ ಕೈವಲ್ಯೇಚ
ಅಹೋ ಸಜ್ಜನ ಸಂಗಮೇ ॥

ಅರಸು ನರ್ತಕಿ ವೈದ್ಯ ಬೆಲೆವೆಣ್ಣು ಜ್ಯೋತಿಷ
ಗುರು ದರುಶನ ಮಾಳ್ಪ ಎಡೆಯೊಳು ।
ಬರಿಗಯ್ಯ ಪೋಪುದುಚಿತವಲ್ಲೆಂಬುದ
ನರಿದಳಾ ರಾಣಿ ಕೇಳೆಂದ ॥ ೧೦೪

ಯತಿಗೆ ಕಾಂಚನ ಬ್ರಹ್ಮಚಾರಿಗೆ ತಾಂಬೂಲ
ಮತಿಶಯ ಪಾಕದನ್ನವನು ।
ಹಿತದಿಂದ ವಾನಪ್ರಸ್ಥಂಗಿತ್ತಡಾತನು
ಸುತ ಕೇಳು ನರಕಕ್ಕೈದುವನು ॥ ೧೦೫

ಪೊಸತಪ್ಪ ತನಿವಣ್ಣು ನವಪುಷ್ಪ ರಸದಾಳಿ
ಋಷಿವರನೆಡೆಗೆ ಕಾಣಿಕೆಯ ।
ಹಸನಾದ ಪೊಂಬಾಳೆ ಎಲೆಯೊಳು ಮಡಗಿಸಿ
ಅಸಿಯಳೊಯಿದಳು ಮುನಿಯೆಡೆಗೆ ॥ ೧೦೬

ಬಂದಳು ರಾಣಿ ಮುನೀಶನ ಬಳಿಗಾಗ
ಗಂಧಕುಸುಮ ದಿವ್ಯಫಲವ ।
ಮುಂದೆ ಮಡಗಿ ಯತಿವರನಡಿಸರಸಿಜ
ಕೊಂದಿಸಿ ನಿಂದರಿಂತೆಂದ ॥ ೧೦೭

ಭೂನಾಥನರಸಿಯ ಮುಖಪದ್ಮ ಮುನಿ ನೋಡಿ
ತಾನಿಟ್ಟ ಫಣೆಗೆ ಭಸ್ಮವನು ।
ನೀನಾವ ಕಾಲ ಮುತ್ತೈದಾಗಿ ಬಾಳೆಂದು
ಜ್ಞಾನಶೇಖರ ಪರಸಿದನು ॥ ೧೦೮

ಕಂದಕೇಳಾ ಭೂಪನರಸಿಗೆ ತಾ ಭವ
ಬಂಧನ ಪರಿದೀಶ ಪದವು ।
ಸಂದಿತು ಕಾಲವು ಬಂದ ಕಾರಣ ಮುನಿ
ಯಿಂದ ಕಂಡಳು ಭಸಿತವನು ॥ ೧೦೯

ಯಾವ ಕಡೆಯಲಿದ್ದ ಶಬರಾಧಿ ನಾಯಕ
ಯಾವ ಕಡೆಯ ಬಂದ ಭಸ್ಮಿಟ್ಟು ।
ಸಾವಧಾನದಿ ಕೂಡಿ ವಾಲ್ಮೀಕಿ ಋಷಿಯಾದ
ಆವೊಲಾಯಿತು ಸತಿಗೆಂದ ॥ ೧೧೦

ಋಷಿರಾಯ ನೀನೆನ್ನನೊಸಲಿಗೆ ಧರಿಸಿದ
ಭಸಿತದ ಮಹಿಮೆಯನಿನ್ನು ।
ಭೆಸಸೆಂದು ಮಗುಳೆ ವಂದಿಸಿ ರಾಣಿ ಕೇಳಲು
ಶಿಶುವೆ ಕೇಳೆಂದನಾ ಮುನಿಪ ॥ ೧೧೧

ಮಾನಿನಿ ಕೇಳ್ಮುನ್ನ ಶಿವನೈದು ಮುಖದಿಂದ
ಧೇನುಗಳೈದು ಪುಟ್ಟಿದವು ।
ಆನಂದೆ ಸುಮನೆ ಸುಶೀಲೆ ಭದ್ರೆ ಚಿತ್ರೆ
ತಾನೈದು ಪೆಸರ ಗೋಮಯವು ॥ ೧೧೨

ಭೂತಿ ಭಸಿತ ಭಸ್ಮ ಕ್ಷಾರ ರಕ್ಷೆಯೆಂ
ಭೀ ತೆರದೈದು ನಾಮದಲಿ ।
ಖ್ಯಾತಿವಡದು ಜನಿಸಿದ ವಿಭೂತಿಯ
ನೀತಿಯನೇನ ವರ್ಣಿಪೆನು ॥ ೧೧೩

ಸಿರಿಯನೀವುದು ಪವಿತ್ರವ ಮಾಳ್ಪುದು
ಪರಿಹರಿಪುದು ರೋಗ ರುಜೆಯ ।
ನೆರೆ ಲೋಕವ್ಯೆಸಿರಿ ಪುಣ್ಯವನಿತ್ತು ಪೊರೆವದು
ಪರಮಪಾವನ ಭಸ್ಮವೆಂದ ॥ ೧೧೪

ಅಣಿಮಾದಿ ಅಷ್ಟಸಿದ್ಧಿಗಳನೀವುದು ತಾ
ಫಣೆಯ ದುರ್ಲಿಪಿಯನಿಟ್ಟೊರಸಿ ।
ತ್ರಿಣಯನ ಲೋಕವನ್ನೈದಿಸುವುದೊಂದು
ಕ್ಷಣ ಭಸಿತವ ಧರಿಸಿದೊಡೆ ॥ ೧೧೫

ಮಾನವನೋರ್ವನ ಭಾಳದೆಡೆಯ ಭಸ್ಮ
ಶ್ವಾನನ ಪಾದದಿ ಸೋಂಕೆ ।
ಆ ನರ ಶಿವಲೋಕ ಪ್ರಾಪ್ತಿಯನ್ನೈದಿದ
ಮಾನಿನಿ ಕೇಳು ಶ್ರುತಿಸಿದ್ಧ ॥ ೧೧೬

ಪೆಣ್ಣೆ ಕೇಳೀ ವಿಭೂತಿಯ ಘನವನು
ವರ್ಣಿಪರಾರಳವಲ್ಲ ।
ಕಣ್ಣು ಮೂರುಳ್ಳವನನೊಲಿಸುವ ವಶ್ಯದ
ಮನ್ನಣೆಯ ತಿಲಕವಿದೆಂದ ॥ ೧೧೭

ತ್ರಿಸಂಧ್ಯಾ ಕಾಲದಿ ತ್ರಿಪುಂಡ್ರ ಫಣೆಯಲ್ಲಿ
ಪೂಸಿದನಾವನಾದಡೆಯು ।
ನಾಶವ ಮಾಳ್ಪುದು ನಿಮಿಷ ಮಾತ್ರದಿ ಮಹ
ದೋಷವೆಲ್ಲವ ರಾಣಿ ಕೇಳ ॥ ೧೧೮

ಏಣಾಕ್ಷಿ ಕೇಳು ಭಸಿತವನುದಾಸಿಸೆ
ಕ್ಷೋಣಿಯ ಮೇಲುದಿಸಿದ ।
ರೇಣಿಗಳೊಂದಕ್ಕೆ ಸಾಸಿರ ವರುಷವು
ಹೂಣಿಪ ನೇಮ ನರಕದಲು ॥ ೧೧೯

ಸರ್ವಪಾಪವ ಪರಿಹರಿಪುದು ಭಸ್ಮವು
ಸರ್ವೋಪದ್ರವನತಿಗಳೆದು ।
ಸರ್ವಕ್ಕೆ ಭೋಗ ಮೋಕ್ಷದ ನೀವುದೆಂದೆತಿ
ಉರ್ವೀಶನರ್ಧಾಂಗಿಗೊರೆದ ॥ ೧೨೦

ಭಾಮೆಯ ನೊಸಲರ್ಧ ಹಿಮಕರನುದರದಿ
ಕೌಮುದಿ ಮೊಳೆ ಮೂಡುವಂತೆ ।
ಆ ಮುನಿವರನಿಟ್ಟ ಭಸಿತದ ತಿಲಕವಭಿ
ರಾಮಿಪುದೇನ ವಣ್ಣಿಪೆನು ॥ ೧೨೧

ಹೆಂಗಳ ಮಾಣಿಕ ತಾನಿಟ್ಟ ದರ್ಪಣ
ದುಂಗುರನೀಕ್ಷಿಸಿ ಫಣೆಯ ।
ಮಂಗಳ ಭೂತಿಯ ತಿಲಕದ ರಮ್ಯಕೆ
ಕಂಗಳೆರಡು ಸೋತಳೆಂದ ॥ ೧೨೨

ಕಷ್ಟವಡಸದು ಶಿವಕಳೆಗೆಡಸದುದೊಂ
ದಿಷ್ಟು ಭೂತಿಯ ಬೆಟ್ಟಿನಿಂದ ।
ದೃಷ್ಟಮಾಗಲು ರುದ್ರ ಪದವೀವ ಭಸ್ಮಸಾ
ದೃಷ್ಟವಾದುದು ಪುಣ್ಯ ಸತಿಗೆ ॥ ೧೨೩

ಅರವನ ದೇಹ ಶಿವಭವನ ಶಿವಯೋಗಿ ಶ
ರೀರದಲ್ಲಿ ಶಿವನಾವ ಕಾಲ ।
ಸಾರಿರ್ಪ ಕಾರಣ ಶಿವಯೋಗಿ ನುಡಿದುದು
ನಾರಿಗೆ ನಿಜವಾಗದಿಹುದೆ ॥ ೧೨೪

ಮೃತ್ಯುವು ಮಾರಿಯು ಭೂತ ಪ್ರೇತಾದಿಗಳು
ಮುತ್ತವು ಭವಪಾಶ ರುಜೆಯು ।
ಹತ್ತೆ ಸುಳಿಯದಪಮೃತ್ಯುವನೀ ಭೂತಿ
ಸತ್ಯವನೇನ ವಣ್ಣಿಪೆನು ॥ ೧೨೫

ಋಷಿಯಿಂದ ಕೇಳ್ದಳಾ ಭಸಿತದ ಘನವನು
ಅಸಿಯಳೊಂದಿಸಿ ಕರ ಮುಗಿದು ।
ಪೆಸರೇನು ಮುನಿರಾಯ ನೀನಿರ್ಪ ಠಾವೆಲ್ಲಿ
ಬೆಸಸೆಂದಳು ರಾಣಿ ಕೇಳು ॥ ೧೨೬

ನಾವಿರ್ಪ ಮಠವಿಲ್ಲಿಗೆ ಮೂರು ಯೋಜನ
ನಾವೆ ಜ್ಞಾನ ಶೇಖರನು ।
ನಾವು ಬಹೆವು ಮಾಸಕೊಮ್ಮೆ ಸುಗಂಪಿನ
ಪೂವಿಗೋಸುಗ ನಿಮ್ಮ ಬನಕೆ ॥ ೧೨೭

ತಿಂಗಳ ಶಿವರಾತ್ರಿ ಲಿಂಗದ ಪೂಜೆಯ
ಸಂಗ ಸುಖದೊಳಿಹೆವೆಂದು ।
ಪಿಂಗದೆ ರಾಯನ ಅಂಗನೆಯೊಳ್ಪೇಳ್ದ
ಮಂಗಳ ಜ್ಞಾನ ಶೇಖರನು ॥ ೧೨೮

ಅಲರೊಂದಲಿಂಗದ ಮುಡಿಯ ಮೇಲಿಟ್ಟಡೆ
ಫಲಕೊಂದು ಕೋಟಿ ಧೇನುಗಳ ।
ಒಲಿದಿತ್ತ ಪುಣ್ಯವು ಸಮನಲ್ಲವೆಂದೆತಿ
ತಿಳುಹಿದನು ನೃಪಸತಿಗೆ ॥ ೧೨೯

ಒಪ್ಪಿದಳಾ ನುಡಿಗೇಳುತಲಾ ರಾಣಿ
ತಪ್ಪದೀ ಬನಕೈತಂದು ।
ಪುಷ್ಪವನೊಯ್ಯೆಂದು ವನಪಾಲಕನಿಂದ
ಅಪ್ಪಣೆಗೊಟ್ಮಳಾ ಮುನಿಗೆ ॥ ೧೩೦

ಜ್ಞಾನ ಶೇಖರನನತ್ತ ಬೀಳ್ಕೊಟ್ಟಳಾರಾಣಿ
ತಾನ್ಯೆದಿ ಬನದೊಳರ್ಥಿಯಲಿ ।
ಮಾನಿನಿಯರೊಂದಾಗಿ ಕ್ರೀಡಿಸುತಿರ್ದರು
ಏನೆಂಬೆನದನಿತ್ತ ಕೇಳಾ ॥ ೧೩೧

ಅಂತು ಸಂಧಿ ೨ಕ್ಕಂ ಪದನು ೨೪೮ ಕ್ಕಂ
ಮಂಗಳ ಮಹಾಶ್ರೀ

ಸಂಧಿ – ಮೂರು

ಶಿಲೆದಲೆಗನ ತಲೆನೆಳಲೊಳಿಹನೆ ಬಲು
ದಲೆ ಮಧ್ಯದೊಳು ರಾಜಿಪನ ।
ಕಲೆಗೆ ಹೆಚ್ಚುವನ ಮೈನೆಲೆಯ ಮಾಡಿದನಾತ್ಮ
ನೆಲೆಯಾದನೆ ಪಾಲಿಸೆಮ್ಮ ॥ ೧

ಹೈಮವತಿಯ ಕುಚವೆರಡ ತರ್ಕೈಸುವ
ಪ್ರೇಮಕ್ಕೆ ಈರೈದು ಕರವ ।
ನೇಮದಿ ಧರಿಸಿದ ಸೋಮಶೇಖರ ಕೊಡು
ಕಾಮಿತ ಫಲ ಎಮಗೊಲಿದು ॥ ೨

ಸುದತಿಯರೆವ್ವನದಂತೆಳೆ ಮಕ್ಕಳ
ತೊದಳೊಂದಿದ ನುಡಿಯಂತೆ ।
ವಿಧು ದೀಪ್ತಿಯಂತೆ ಕೋಮಳ ಬನದೊಳು ನಿಮ್ಮ
ಮೃದುನುಡಿ ಸೊಬಗಿನ ಕಥೆಯು ॥ ೩

ತಾಪಸೋತ್ತಮ ಗುರು ಸೂತ ಮುನೀಂದ್ರ ನಿ
ರೂಪಿಸುತಿಹ ದಿವ್ಯ ಕಥೆಯಾ ।
ಲಾಪಗಳುಂಡೆನ್ನ ಮನ ದಣಿಯದು ಮುಂ
ದಾಪ ಮೆಲ್ಲತೆಯುಸುರೆಂದ ॥ ೪

ಮಕ್ಕಳೊಳಗೆ ಮಣಿಕವೆ ಕೇಳು ನನ್ನ
ದಕ್ಕರಕಿನಿದಪ್ಪ ಕಥೆಯ ।
ಇಕ್ಕುವೆ ನಿನ್ನೆರಡು ಕರ್ಣಗಳಿಗೆಂದು ಮುನಿ
ಮುಖ್ಯನಾಡಿದನೊಲವಿಂದ ॥ ೫

ಏನೆಂಬೆ ಸುತ ಕೇಳು ರಾಯನ ರಾಣಿಯು
ತಾನೊಂದ ಮಾಡಲೊಂದಾಗಿ ।
ಮಾನಿನಿಯರ ಕೂಡ ಬನ ನೋಡುತಿರಲತ್ತ
ಆ ನರಪತಿ ಮರಳಿದನು ॥ ೬

ಮಗನೆ ಕೇಳಾ ಭೂಪ ವೈಹಾಳಿಯ ಪೋಗಿ
ಮಗುಳೆ ತಿರುಗಿ ಬರುತಿರಲು ।
ಮುಗಿಲ ಘರ್ಜನೆಯಂತೆ ವಾದ್ಯದುಲುಪನತ್ತ
ಮೃಗ ನೇತ್ರೆ ಬನದೆಡೆಗೇಳಿ ॥ ೭

ಭೂಪನರ್ಧಾಂಗಿಯೆ ಕೇಳ್ನಿನ್ನ ಮೊಗ ಪದ್ಮ
ರೂಪಲಾವಣ್ಯ ಗಂಡು ।
ಆ ಪಗಲರಸನು ನಿಹಿತವಗಲದೆ ನಿಂದ
ನೀ ಪಯಣವಾಗೆಂದರಾಳಿಯರು ॥ ೮

ತಂಪಿನ ಬನದೊಳು ವಧು ಜನ ನೃಪನಿಂದ
ಮುಂಪರಿದೈತಹ ಭರಕೆ ।
ಕಂಪಗೊಂಡರಸಿಯ ಬಿಡಿಸಿದರಿರ್ಪ
ಲಂಪಟವಾ ನೆಲೆಯಿಂದ ॥ ೯

ಅಕ್ಕ ಕೇಳ್ಬಾವ ಪಾರದಿ ಪೋಗಿ ಮರಳಿದ
ಉಕ್ಕಡ ಗಹಳೆಯ ರವಕೆ ।
ಸಿಕ್ಕಿರಬಾರದೀ ಬನದೊಳು ತಳರೆಂದು
ದೊಕ್ಕನೆ ಸಖಿಯರಾಡಿದರು ॥ ೧೦

ಪೂವಿಂದ ವಾಸನೆ ಉಂಡಳಿ ಪೋಪಂತೆ
ಈವನ ಸುಖಗೊಂಡು ನೀನು ।
ಭಾವ ಬಾರದ ಮುನ್ನ ಪೋಪುದುಚಿತವೆಂದು
ಆ ವೆಣ್ಗಳರಸಿಗಾಡಿದರು ॥ ೧೧

ಯಿನ್ನು ತರವಲ್ಲವೀ ಬನದೊಳಗಿರ್ಪುದು
ಚೆನ್ನ ವೆಣ್ಗಳ ಕೂಡಿಕೊಂಡು ।
ಪೊನ್ನಂದಳವೇರಿಯೈತಂದಳತಿ ಗಾಢ
ತನ್ನರ ಮನೆಗೆ ಕೇಳೆಂದ ॥ ೧೨

ಒಂದಾಗಿ ಯೆಯಿತಂದ ವೃಂದಸ್ತ್ರೀಯರಿಗೆಲ್ಲ
ಗಂಧವೀಳ್ಯಗಳೊಲಿದಿತ್ತು ।
ಮಂದಿರಕವರನಾನಂದದಿ ಬೀಳ್ಕೊಟ್ಟು
ಇಂದಿತ್ತ ಸುಖಮಿರಲು ॥ ೧೩

ಅತ್ತಲಾ ಭೂಪ ಸವಾರಿಯ ಪೋಗಿಯೆಯಿತಂದ
ನತ್ಯಂತ ಸುಖವೆತ್ತು ಮರಳೆ ।
ಒತ್ತಿನ ಮಂತ್ರಿ ನಾಯಕ ಮಾನ್ಯರಿಗೀಳೆಯ
ವಿತ್ತೆಲ್ಲರ ಕಳುಹಿದನು ॥ ೧೪

ಮಡಪಿಗರೊಂದಾಗಿ ಪೊಡವಿಪ ಬಂದನು
ಮಾಡದಿರ್ದ ಸೆಜ್ಜೆ ಮಂದಿರಕೆ ।
ನಡೆತಂದು ರಾಯಗೆ ಒಡನೆ ಮಂಚವನಿತ್ತು
ಪಿಡಿದಳುದಕವ ಗಿಂಡಿಯಲಿ ॥ ೧೫

ಏಕುವರ ಕೇಳು ಪನ್ನೀರನೆರೆದ
ಳಾಕಾಂತೆ ಮುಖ ಕಮಲವನು ।
ಲೋಕ ಪಾಲಕ ವೀರಸೇನನಾಲೋಕಿಸಿ
ತಾಕಂಡ ಫಣೆಯ ಭಸ್ಮವನು ॥ ೧೬

ಸಸಿಯಬ್ಜ ತಾರೆಗಳ್ಸಂಕ ಮಂದಾರ
ಸಿಸಿರ ಮೌಕ್ತಿಕ ಸ್ವರ್ನದಿಯ ।
ಮಿಸುಪ ಧವಳಕಿಂದಾ ಮಿಗಿಲಾಗಿದೋರಿತಾ
ಅಸಿಯಳ ಫಣೆಯ ವಿಭೂತಿ ॥ ೧೭

ಇಂಗಡಲ ಕಡೆವಲ್ಲಿ ಸಿಡಿವನಿ ನೆಗೆದಿಂದು
ತಂಗದಿರನ ಪತ್ತಿದಂತೆ ।
ಹೆಂಗಳ ನೊಸಲ ಭೂತಿಯ ಬೊಟ್ಟು ರಾಯನ
ಕಂಗೆಸೆದುದು ಕಂದ ಕೇಳು ॥ ೧೮

ಹೆಟ್ಟುಗೆ ಕೇಳ್ನಿನ್ನ ನೊಸಲಲ್ಲಿ ಧವಳದ
ಬೊಟ್ಟದೇನೆಂದು ಭೂಪಾಲ ।
ಸಿಟ್ಟಿಲಿ ಬೆಸಗೊಳಲಾಯಿತಾಕೆಗೆ ಚಿಂತೆ
ವೆಟ್ಟವ ದಲೆಯೊಳಿಟ್ಟಂತೆ ॥ ೧೯

ತಾವರೆ ಮುಖಿಯಿಟ್ಟ ತಾವರೆ ಭಸಿತವ
ತಾವರೆ ನೋಟದಿ ಕಂಡು ।
ತಾವರೆ ಹಿತಗುಲದರಸನ ಮೊಗ ರತ್ನ
ದಾವರೆಯೊಲಾಯಿತು ಯೆಂದ ॥ ೨೦

ನನ್ನರಿಕಿಲ್ಲದೆ ಬೀಳ್ಮಣ್ಣ ತಂದೀಗ
ನಿನ್ನೊಸಲಿಗೆ ಕಯ್ಯ ನೀಡಿ ।
ಇನ್ನಿಡುವ ನರರಿಲ್ಲ ಈ ಲೋಕದೊಳಗೆಂದು
ತನ್ನ ಸ್ತ್ರೀಯರಳಕೇಳುತಿರ್ದ ॥ ೨೧

ಬೋಧಿಸಿದವನಾರು ನಿನ್ನ ಫಣೆಗೆ ತಂದೀ
ಬೂದಿಯನಿಟ್ಟವನಾರು ।
ಮಾಧವನೊ ವ್ಯಾಧನೊ ಪೇಳ್ನಾರಿ ದುರ್ನರ
ನಾದ ನಿನ್ನೊಸಲ ಮುಟ್ಟುವನೆ ॥ ೨೨

ಮುಟ್ಟಲಮ್ಮನು ನಿನ್ನ ನೊಸಲನು ಮುಕ್ಕಣ್ಣ
ನೆಟ್ಟಿಗಾಗದು ಪರಿಕಿಪೊಡೆ ।
ದುಷ್ಟ ದುರ್ಜನರು ನಿನ್ನಿದಿರ ಕಂದೆರದು
ದಿಟ್ಟಪರುಂಟೆ ಲೋಕದೊಳು ॥ ೨೩

ತೀವಿ ನಿನ್ನೊಸಲಿಗೆ ಬೂದಿಯ ತೊಡೆದಾತ
ದೇವನಲ್ಲದೆ ಮೇಣು ಪುಲ್ಲು ।
ಜೀವನು ಕೈ ಮುಟ್ಟ ತಿಳಿಯೆಂದನಾ ಭೂಪ
ಸ್ವೈವೆರಗಾಗಿ ಕೇಳಿದನು ॥ ೨೪

ಏಪರಿ ಬಂದುದು ನಿನ್ನ ಪಣೆಗೆ ಬೂದಿ
ನೀಪೇಳು ಪುಸಿಯದೆನ್ನೊಡನೆ ।
ಕೋಪದಿ ನೃಪಗೇಳಲಾದಳು ತಿಲರಸ
ಲೋಪದ ಸೊಡರೊಲಾ ಸತಿಯು ॥ ೨೫

ಕುಂಕುಮ ಗಂಧ ಕಸ್ತೂರಿ ಇಟ್ಟ ಫಣೆಯಿಂದ ಮೀ
ನಾಂಕನ ಮಾತೆಯಂತಿರ್ದು ।
ಭೋಂಕನೆ ದೋರಿದಳ್ವಿಭೂತಿ ನೊಸಲಿಂದ
ಶಂಕರಿ ಮುಖದೊಲಾ ರಾಣಿ ॥ ೨೬

ನಳಿನಜ ಫಣೆಯಲ್ಲಿ ಬರೆದ ದುರ್ಲಿಖಿತವ
ನಳಿದುದೀ ಭಸಿತವೆಂಬಂತೆ ।
ಜಲಜಾಕ್ಷಿ ನೊಸಲಲ್ಲಿ ಥಳಥಳಿಸುತ ಭಸ್ಮ
ಎಳೆವೆರೆಯೊಲು ಕಂಗೆಸೆಯೆ ॥ ೨೭

ಕಂಡನು ವೀರಸೇನನು ತನ್ನ ಸತಿಯ ತ್ರಿ
ಪುಂಡದ ನೊಸಲ ರೇಖೆಯನು ।
ಗುಂಡಿಗೆಯೊಳು ಕೋಪ ಮಸಗಿ ಅರಸನ ಕಣ್ಣು
ಕೆಂಡದೊಲಾಗೆ ಕೇಳ್ಮಗನೆ ॥ ೨೮

ದೇಶಾಧಿಪನ ಮೊಗ ಕಿರು ಬೆವರೇರುತ
ಮೀಸೆಗಳೆಲ್ಲವಲುಗುತಲಿ ।
ಈಶನ ಉರಿಗಣ್ಣಿನಂತುಗ್ರ ದಾಳಿಯು
ಆ ಸತಿಯೊಡನಿಂತೆಂದ ॥ ೨೯

ಕಾದಲೆ ಕೇಳ್ನಿನ್ನ ಫಣಿಯಲ್ಲಿ ತಂದೀ
ಬೂದಿಯನಾರಿಟ್ಟರೆಂದ ।
ಕ್ರೋಧದಿ ನೃಪಗೇಳೆ ಯರಳೆಯಲ್ಲಿ ಗಾಳ
ಪೊಯ್ದೊಲಾದಳು ಸತಿ ಯೆಂದ ॥ ೩೦

ಪೆತ್ತತಾಯಿ ತಂದೆ ಭರ್ತ ಭಾಂಧವ ಗುರು
ಮತ್ತಿವರೊಳಗೆ ವಂಚನೆಯ ।
ಅತ್ಯಂತಗೈವುದು ಪಾಪವೆಂದಾ ಸತಿ
ಚಿತ್ತದೊಳಗೆ ಯೋಚಿಸಿದಳು ॥ ೩೧

ನಿಂದ್ಯ ವಂಚನೆ ಪುಸಿ ನಿರ್ದಯ ವೇಳಲು
ಒಂದು ಪಂಕ್ತಿಯೊಳೆರಡು ಮೊಳ್ಪ ।
ಕಂದ ಕೇಳು ಷಡು ಚಂಡಾಲ ಲಕ್ಷಣ
ಪೊಂದದು ಸತಿ ಜ್ಞಾನಲತೆಯ ॥ ೩೨

ಪುಸಿ ಒಂದರಿಂದಲಿ ಎಸಗುವದೈನೂರು
ಪಸುಗಳ ಗೊಲಿಸಿದ ಪಾಪ ।
ಪುಸಿದರೆ ಈ ದೋಷ ಮಸಗುವದೆಂದಂಜಿ
ಅಸಿಯಳು ಪೇಳ ತೊಡಗಿದಳು ॥ ೩೩

ಪಾರದಿ ರಾಯ ನೀ ಪೋಗಲಿತ್ತ ನಾನು
ನಾರಿಯರೊಂದಾಗಿ ಬನವ ।
ಹಾರೈಸಿ ನಾವಲ್ಲಿಗೈದಲು ಕಂಡೆವು
ಮಾರಾರಿಯಂತಿರ್ದ ಋಷಿಯ ॥ ೩೪

ಕರಿಯಸುರಗೆ ಮುಳಿಯದ ಉರಿಗಣ್ಣ ಧರಿಸದ
ಗಿರಿಸುತೆಗರೆ ಮೈಯ್ಯ ಕೊಡದ ।
ಕರೆ ಕಂಠನಲ್ಲದ ಹರನೊಲುದೋರುವ
ವರ ತಪಸಿಯ ಕಂಡೆನರಸ ॥ ೩೫

ಗಂಗೆಯ ಸೂಡದುರಗಾಭರಣವಿಲ್ಲದ
ತಿಂಗಳ ಧರಿಸದಭವನ ।
ಅಂಗದೊಲಿರ್ದತಿ ವರನಡಿಯ ಬನದಲ್ಲಿ
ಹೆಂಗಳೊಂದಾಗಿ ನಾ ಕಂಡೆ ॥ ೩೬

ಕಮಳೆ ಶಾರದೆ ಶಚಿ ಮೊದಲಾದ ದಿವಿಜರ
ರಮಣಿಯರೊಲಿದರ್ಚಿಪಂತ ।
ಮಿಮಳ ರೂಪನ ಪಾದ ಕಮಲವ ಕಂಡಾಗ
ನಮಿಸಿದೆ ನಾ ನೃಪ ಕೇಳ ॥ ೩೭

ಮತ್ತರಸ ಕೇಳೀ ಭೂತಿ ವಿಶ್ವಾಸದಾ
ಚಿತ್ತವನೆನ್ನಯ ಹೃದಯದಲಿ ।
ಬಿತ್ತಿದನಾ ಜ್ಞಾನ ಶೇಖರ ಮುನಿ ಮ
ಹೋತ್ತಮನೆಂದಳಾ ರಾಣಿ ॥ ೩೮

ಕ್ಷೋಣಿ ಪತಿ ಕೇಳು ತ್ರಿಪುಂಡ್ರದೊಳಗೊಂದು
ರೇಣು ಪಸು ಪತಿಯ ಸೋಂಕಲು ।
ಮಾಣ್ಬುದು ಯಮಲೋಕ ಭಯ ಮುಂದೆ ಮುಕ್ತಿಯ
ಕಾಣಿಪುದು ಎಂದನಾ ಮುನಿಪ ॥ ೩೯

ಪೊಡವಿಪ ಕೇಳು ಭಾಳದೆಡೆಯಲಿ ಭಸಿತವ
ನಿಡದೆ ರುದ್ರಾಕ್ಷಿಯ ಧರಿಸದ ।
ಮೃಡ ಪೂಜೆ ಸದನದೊಳಿಲ್ಲದ ವಿಪ್ರನು
ಕಡೆ ಶ್ವಪಚಗೆಂದ ಋಷಿಯು ॥ ೪೦

ಬೆಟ್ಟೊಂದರಿಂದಲಿ ಭಸಿತವನಿಟ್ಟರೆ
ಬೆಟ್ಟದನಿತು ಪಾಪವಳಿದು ।
ಮುಟ್ಟಳಿದಾ ನರ ಸ್ವರ್ಗಕ್ಕೈದುವನೆಂದು
ಮುಟ್ಟಿ ಪೇಳಿದ ಋಷಿಯೆನಗೆ ॥ ೪೧

ಸಿಟ್ಟಿಲಿ ಮೊಗ ಬಾಗಿ ದಿಟ್ಟಿಸಿ ವಿಭೂತಿಯ
ಬೆಟ್ಟೊಂದರಲಿ ಫಣೆ ಮುಟ್ಟಿ ।
ಇಟ್ಟನ ಕೊಂಡೊಯಿದು ಜವನವರು ನರಕದೊ
ಳಟ್ಟುವರೆಂದ ತಾಪಸನು ॥ ೪೨

ಮುದದುಂಬಿ ಮುಖ ಪದ್ಮ ಊರ್ಧ್ವಕೆ ನೆಗಪಿಯು
ಒದಗಿ ಮೂರಂಗುಲ ದುಂಬಿ ।
ಸದಮಳ ಭಸಿತವ ನೊಸಲಲ್ಲಿ ಇಡುವಂಗೆ
ಮದನಾರಿ ಪುರವಪ್ಪುದೆಂದ ॥ ೪೩

ಅಡವಿಯೊಳಿಹ ಮೃಗ ಗಂಟೆಯ ಧ್ವನಿಯಗೇಳಿ
ಕುಡುವುದು ನಂಬಿ ಕರ್ನವನು ।
ಪೊಡವಿಪ ಕೇಳೀ ಭೂತಿಯ ಬಲ್ಲರು
ಧೃಡಗೇಳಿ ಮನವಿಡದಿಹರೆ ॥ ೪೪

ಯಾವನಾದರೆ ಫಣೆಯಲ್ಲಿ ಈ ವಿಭೂತಿಯ
ತೀವಿ ಧರಿಸಿದ ನರನವನ ।
ಭೂವರ ಕೇಳು ದಯದಿ ನೋಡಿದಾತಂಗೆ
ಆವ ಕಾರಣ ಸಿದ್ಧಿಯೆಂದ ॥ ೪೫

ತಾಪಸೋತ್ತಮ ಜ್ಞಾನ ಶೇಖರ ಮುನಿಯೊಲ್ದು
ಈ ಪರಿ ಎನಗೆ ಭೋಧಿಸಿಯು ।
ತ್ರಿಪುಂಡ್ರವ ಎನ್ನ ನೊಸಲಿಗೆ ಪರಸಿಟ್ಟನು
ಭೂಪ ಕೇಳೆಂದಳಾ ರಾಣಿ ॥ ೪೬

ಗ್ರಂಥ: ಏಕಂ ಗಳಂ ತ್ರಿಪುಂಡ್ರಂಚ
ಅಧೋಮ್ರುಖಂ ತು ಲೇಪನಂ ।
ಯಮಲೋಕಂ ಭಯಂ ಪ್ರಾಪ್ತಿ
ನಾರಕೇ ಕಾಲಮಕ್ಷಯಂ ॥ ೧ ॥

ಪದ್ಮ ಹಸ್ತಂ ತ್ರಿಪುಂಡ್ರಂಚ
ಊರ್ಧ್ವ ಮುಖಂತು ಲೇಪನಂ ।
ಯಮಲೋಕಂ ಭಯಂ ನಾಸ್ತಿ
ಶಿವಲೋಕ ಮಹಿಂ ನತೇ ॥ ೨ ॥

ಎದ್ಭಾಳೇ ವಿನ ಭಸ್ಮಂಚ
ಗಳೇ ರುದ್ರಾಕ್ಷ ಮಾಲಿಕಾ ।
ನ ಶಂಭು ಪೂಜೇ ಭವಾನಿ
ನವಿಪ್ರ ಶ್ವಪಚ ಸಮಾ ॥ ೩ ॥

ತರುಣಿಯಾಡಿದ ನುಡಿ ರಾಯಗೆ ಕೋಪದ
ಉರಗ ಮುಟ್ಟಿಯು ವಿಷದುಂಬಿ ।
ತೆರೆದ ವಿವೇಕವೆಲ್ಲವು ಪೋಗಿ ತಾಮಸ
ಶರಧಿಯೊಳು ಮುಳುಗಿದಂತಾದ ॥ ೪೭

ಪೆಣ್ಣೆ ಕೇಳ್ನಿನಗೆ ಹಿತವೆಯಿದು ಪರ ಪುರುಷರ
ಕಣ್ಣೆತ್ತಿ ಈಕ್ಷಿಪ ಗುಣವು ।
ಊಣೇವು ಪತಿವ್ರತ ಧರ್ಮಕೆ ದೇಶಾಗ್ರ
ಗಣ್ಯನೆಂದನು ವೀರಸೇನ ॥ ೪೮

ಏತಕೆ ಬರುವಾತ ಗಳಹದಿರೆಲೆ ಭೂ
ನಾಥ ಕೇಳು ಗುರು ಹಿರಿಯರು ।
ತಾತಗಧಿಕವೆಂದು ಪೇಳುವ ಶಾಸ್ತ್ರದ
ನೀತಿಗೇಳೆಂದಳಾ ರಾಣಿ ॥ ೪೯

ಪುಟ್ಟಿಸಿದವನ ಉಪದೇಶವಿತ್ತವನ
ನೆಟ್ಟನೆ ವಿದ್ಯೆಯದೋರಿದನ ।
ಮುಟ್ಟನ್ನವೀವನ ಭಯಕಾದರೈವರ
ಕಟ್ಟ ಜನಕರೆನಲಹುದು ॥ ೫೦

ಮಾಸೋಪ ವಾಸಿಯ ಮೃಷ್ಟಾನ್ನದಾತನ
ಲೇಸಿನ ಕರಣಾಗ್ನಿ ಹೋತ್ರಿಯ ।
ಮಾಸ ಸಾಸಿರ ಬಾಳ್ದ ಪತಿವ್ರತೆ ವೇದಾಂತಿ
ಈಶನ ಸಮ ಷಡುಮೂರ್ತಿ ॥ ೫೧

ಶಿವಯೋಗಿ ಪಾದವ ನೀತಿಲಿ ಕಂಡೆನು
ಭವ ಪಾಶ ಪರಿದೆನ್ನ ಫಣೆಗೆ ।
ಅವನಿಪ ಕೇಳು ಭಸಿತವಿಟ್ಟು ಪರಸಿದ
ಶಿವ ಸುಖ ಸಿರಿಯಿರಲೆಂದು ॥ ೫೨

ಆತಾಪಸೋತ್ತಮ ಪರಸಿಟ್ಟ ಭಸಿತವ
ಕ್ಷತೆ ಇದೆಂದು ಭೂಪತಿಗೆ ।
ಸತ್ಯವ ಪೇಳಲು ವೀರಸೇನನು ಕೋಪ
ದಾತುರನಾದ ಕೇಳುತಲಿ ॥ ೫೩

ದಾರಿದ್ರನಿಗೆ ವಿಷ ಸದ್ಗೋಷ್ಠಿ ಯೌವನ
ನಾರಿ ವಿಷವು ವೃದ್ಧನಿಗೆ ।
ಸಾರ ಮತಿ ಹೀನಂಗೆ ವಿಷ ಶಾಸ್ತ್ರವಂತೆ
ಕ್ಷಾರವಾಯಿತು ನುಡಿ ನೃಪಗೆ ॥ ೫೪

ಏನ ಬಲ್ಲರವರಾದಡಾಗಲಿ ಮೇಣಿನ್ನು
ಹಾನಿ ಬರುವ ಕಾಲಕ್ಕೆ ।
ಜ್ಞಾನವ ಮರೆವರೆಂದಾ ಮುನಿವರ ಪೇಳ್ದ
ಸಾನುರಾಗದಿ ದೀಕ್ಷಿತಗೆ ॥ ೫೫

ದಶಕಂಠ ಮರಹಿಂದಲಸುವ ನೀಗಿದ ಮುನ್ನ
ಸಸಿ ಕ್ಷಯ ರೋಗಿ ತಾನಾದ ।
ವಿಸಜಾಕ್ಷ ಬಾರನೆ ದಶ ಭವದಲಿ ಕಂದ
ಮಸಕದಿನ್ನಾರನು ಮರಹು ॥ ೫೬

ಕೇಳೆತಿ ವರನೆ ವರವೀರಸೇನ ಭೂ
ಪಾಲಗೆ ಮೈಸಿರಿ ಪೋಪ ।
ಕಾಲೊದಗಿ ಕವಿದಿರ್ದ ಮರಹಿಂದಲೊರಸೆಂದ
ಭಾಳದೊಳಿಟ್ಟ ಭಸ್ಮವನು ॥ ೫೭

ಸಾದು ಜವ್ವಾದಿ ಕಸ್ತೂರಿ ಗಂಧ ಕುಂಕುಮ
ನೀಧರಿಸುವಡೆ ಇಲ್ಲವೇನು ।
ಕಾದಲೆಮ್ಮ ಕೀರ್ತಿಗೆ ಕಳಂಕ ನೀ ತಂದೆ
ಬೂದಿಯ ನಿಡಬಹುದೆ ॥ ೫೮

ತೊಡೆ ವೇಗದಿ ನೀನಿಟ್ಟ ನೊಸಲ ಬೂದಿಯನೆಂದು
ಪೊಡವಿಪ ತನ್ನ ಸ್ತ್ರೀಯಳಿಗೆ ।
ನುಡಿಯಲಾ ವೆಣ್ಣಿಗಾಯಿತು ಕರ್ಪೂರಕೆ
ಕಿಡಿ ಸೋಂಕಿದಂತೆ ಕೇಳ್ಮಗನೆ ॥ ೫೯

ಯತಿಯಾಜ್ಞೆ ದೀಕ್ಷಿತ ನೃಪನಾಜ್ಞೆಯನು ಭಂಟ
ಪತಿಯಾಜ್ಞೆ ಸತಿ ಮೀರಿದಡೆ ।
ಅತಿಘೋರ ನರಕವೆಂಬುದು ನೀತಿ ಇನ್ನಿದಕೆ
ಗತಿಯಾವುದೆಂದು ಚಿಂತಿಪಳು ॥ ೬೦

ಆ ತಾಪಸೋತ್ತಮ ಪರಸಿಟ್ಟ ಭೂತಿಯ
ನಾ ತೊಡೆವದು ಪಾಪವೆಂದು ।
ಮಾತನಾಡದೆ ರಾಯನಿದಿರಲಿ ನಿಂದಳು
ಸೀತಕಾಲದ ಪಿಕನಂತೆ ॥ ೬೧

ಸಿಂಗವಾನೆಯ ಕಂಡ ತೆರನಂತೆ ಮೇಣು ಭು
ಜಂಗನ ಹರಿ ನಿಟ್ಟಿಪಂತೆ ।
ಅಂಗನೆ ಫಣೆ ಭೂತಿಯನೀಕ್ಷಿಸಿ ರಾಯನು
ಅಂಗೀಕರಿಸಿದನು ಪಗೆಯ ॥ ೬೨

ನೀತಿಯನರಿವನೆ ಕೋಪದ ನರನು ಸೂ
ಕ್ಷ್ಮತೆಯ ಬಲ್ಲನೆ ಲೋಭಿ ।
ಮಾತಿನ ಪ್ರಹುಡಿಕೆ ತಿಳಿವನೆ ಗಾವಿಲ
ಭೂತಿಯ ಸುಖವೇಕೆ ನೃಪಗೆ ॥ ೬೩

ದಟ್ಟಿಸಿದಡೆ ತಾನೆ ದಟ್ಟಿಸಲೆಂದಾಗ
ಹೆಟ್ಟುಗೆ ತನ್ನ ಪಣೆಯನು ।
ಕೊಟ್ಟೊಡೆ ಭೂಪನು ಪಿಡಿದೆಡೆಗಯ್ಯ ತಾ
ನಿಟ್ಟೊರಸಿದ ಭಸಿತವನು ॥ ೬೪

ಉಸುರುವೆನೇನಾ ಕೇಳರಾಯ ಕೈಮುಟ್ಟಿ
ಭಸಿತವಳಿಯಲವಳಾಸ್ಯ ।
ಸಸ್ಯದ ಪರಾಗಮಾದೊಲು ಕಂಗೆಸೆದುದು
ಅಸಿಯಳ ಮೊಗ ಮುನಿಯೆಂದ ॥ ೬೫
ಎಷ್ಟೇನೆನಲು ಭೂತಿಯೊಳಗೊಂದು ರೇಣುವಿ
ನಷ್ಟುವ ನರನಾವ ನೆಲಕೆ ।
ಬಿಟ್ಟ ಕಷ್ಟವ ಕೇಳು ಈರೇಳು ಭವದಲ್ಲಿ
ಪುಟ್ಟುವನು ಕುಷ್ಠನಾಗಿ ॥ ೬೬

ಶಿಶುವೆ ಕೇಳಾ ಸತಿಯ ಸಂಗ ಸುಖವನು
ವಿಸರುಹಾಸನು ಮುನ್ನ ಬರೆದ ।
ನೊಸಲ ಪತ್ರವ ತೊಡವಂತವ ತೊಡೆದನು
ಭಸಿತವನರಸ ಕೈಯಿಂದ ॥ ೬೭

ಕೋಟಿ ಲಿಂಗದ ಭವನಂಗಳನಳಿದಿರ್ದ
ಪಾಟಿ ಪಾತಕ ಫಣೆ ಭೂತಿ ।
ಸೂಟಿದಡಪ್ಪುದೆಂದ ಮುನಿವರ ಸುತ
ನೆಟ್ಟನೆ ಶಿಷ್ಯಗಾಡಿದನು ॥ ೬೮

ಮರುಗಿದಳಾ ಸತಿ ಮನದಲ್ಲಿ ತಾ ಕಂಡು
ಉರಿ ಸೋಂಕಿದೆಳೆದಳಿರಂತೆ ।
ಹರಹರ ಮಹದೇವ ಗುರುವೆ ನೀ ಬಲ್ಲೆಂದು
ಮೊರೆಯನಿಟ್ಟಳು ಸತಿ ಶಿವಗೆ ॥ ೬೯

ತಿಕ್ಕಿ ಕಳೆದಾ ಸತಿಯಳ ನೊಸಲೆಡೆ
ಇಕ್ಕಿದ ಭಸಿತವೆಲ್ಲವನು ।
ಧಿಕ್ಕರಿಸುತಾ ರಾಯ ನೂಕಿದಡಾ ವೆಣ್ಣು
ಪಕ್ಕ ಮುರಿದ ಪಕ್ಕಿಯಾದಳು ॥ ೭೦

ಸೂಸಲಹುದೆ ಅಣು ಮಾತ್ರ ವಿಭೂತಿಯ
ನಾಶ ಮಾಳ್ಪುದು ಕಾಣಬಹುದು ।
ದೋಷಿಯಾದನು ಭೂಪನೆಂದಿತ್ತಲಾ ಸತಿ
ಈಶ ಚಿಂತೆಯೊಳಿದ್ದಳೆಂದ ॥ ೭೧

ಸತಿಯರ ಕುಲ ರತ್ನವೆಂದೆನಿಸುವ ಜ್ಞಾನ
ಲತೆ ಮುನ್ನ ಶಿವನಿಗೊಂದಿಸುತ ।
ಪತಿಗೆ ಪರಸಿಕೊಂಡಳಾಯುಷ್ಯ ಸಿರಿ ಭಕ್ತಿ
ಗತಿಯಾಗಲೆಂದನವರತ ॥ ೭೨
ಎಲೆ ಶಿವನೆ ಕೇಳೆನ್ನ ಪುರುಷಗೆ ಸುಜ್ಞಾನ
ಮೊಳೆ ಪುಟ್ಟಿ ನಿಮ್ಮಡಿ ಸೇವೆ ।
ಅಳವಟ್ಟ ಗಂಡನ ಕಾಣಿಸಿ ಸಲಹೆಂದು
ಪಲುಬುತಲಿರೆ ಸ್ತ್ರೀಯ ಚಿತ್ತ ॥ ೭೩

ದಾಸಿಗಿಪ್ಪುದು ಮನ ತಾ ಪೊತ್ತ ಕೊಡದಲ್ಲಿ
ವೇಸಿಯ ಮನ ಪರರಲ್ಲಿ ।
ಏಸುತ ಕೇಳು ಸಜ್ಜನ ಸತಿಯರ ಮನ
ಸಾಸವಿಪ್ಪುದು ಗಂಡನಲ್ಲಿ ॥ ೭೪

ಏಕೆ ನಮ್ಮಕ್ಕನ ಮನವ ಬರಿದೆ ಭಾವ
ನೂಕಿದಿ ಚಿತಾಬ್ಧಿಗಿಂದು ।
ಸಾಕಿದ ಗಿಣಿಯೊಂದು ಪಂಜರದೆಡೆಯಿಂದ
ಭೂಕಾಂತನೊಡನಾಡಿತೆಂದ ॥ ೭೫

ಒಲಿದಕ್ಕ ಮುನಿಯಿಂದ ಧರಿಸಿರ್ದ ಫಣೆಭೂತಿ
ತಿಲಕವ ನೀಕಂಡ ಫಲವೊ ।
ಕುಲಕೆಲ್ಲ ಪಾವನಗೈವುದೆಂದಾ ಗಿಣಿ
ತಿಳುಪಲಾ ನೃಪ ಪಗೆಯಾದ ॥ ೭೬

ಪಾಲಿಸಿದೆನು ನಿನ್ನ ಪಂಡಿತ ವಾಕ್ಕೆಂದು
ನಾಲಿಗೆಗೊನೆ ಉಗುರಿಂದ ।
ಸೀಳದೆ ನಿನ್ನನುಳುಹಿದೆನೆಂದು ನೃಪಕೋಪ
ಜ್ವಾಲೆಯೊಳಿಂತೆಂದ ಗಿಳಿಗೆ ॥ ೭೭

ಕಣ್ಣಿಲಿ ನೋಡದಲಿರನೊಂದು ಕ್ಷಣ ತನಿ
ವಣ್ಣುಗಳನೆನಗೆ ಸಲಿಸದೆ ।
ಉಣ್ಣನು ಮಧುರ ನುಡಿಗಳ ಗೇಳದಿರ ರಾಯ
ಮನ್ನಿಸದಾದ ನನ್ಯಾಕೆ ॥ ೭೮

ನೀತಿಯನರಿಯದ ಮೂರ್ಖನ ಕೋಪದ
ಕಾತರದೊಲಿರ್ದ ನರನ ।
ಮಾತಾಡೆ ಗಾವಿಲ ತನವೆಂದು ಗಿಣಿ ಮೋನ
ವಾಂತಿತು ಮಗನೆ ಕೇಳೆಂದ ॥ ೭೯
ಕೋಕಿಲೆ ಶುಕವಂಚೆ ಶಿಖಿ ಪರವತಪಕ್ಕಿ
ಸಾಕಿದೇಣ ಕಸ್ತೂರಿ ಮೃಗವು ।
ಏಕುವರ ಕೇಳು ರಾಯನ ಕೋಪದ
ವಾಕಿಗೆ ಮರೆದೊರಗಿದವು ॥ ೮೦

ತಕ್ಕುದ ಪೇಳಿದಡೀ ರಾಯ ಬರಿದೆನ್ನ
ಧಿಕ್ಕರಿಸಿದನು ಕೋಪದಲಿ ।
ಕಕ್ಕುಲಿದನ ನುಡಿಸೆ ಕಷ್ಟವೆಂದಾ ಗಿಣಿ
ಮೊಕ್ಕಡಗಿತು ಪಂಜರದಿ ॥ ೮೧

ಪ್ರಾಯ ಬರುವ ಸಣ್ಣ ಗಿಳಿತಂದು ಮುನ್ನೋರ್ವ
ರಾಯಗೀಯಲು ಪರಿಕಿಸದೆ ।
ಸಾಯಗೊಂದನು ನೃಪರಿಗೆ ಕೋಪದೋರಿದ
ಡಾಯವಲ್ಲವರ ನುಡಿಸುವುದು ॥ ೮೨

ಕುಂಭಿನಿ ವರನ ಬಲುಗೋಪಕೆ ಚಿತ್ರದ
ಬೊಂಬೆಗಳಂಜಿ ಕಣ್ಣಿಟ್ಟು ।
ಮುಂಬಗಾಣದೆ ಭಿತ್ತಿ ಮರೆಗೊಂಬವೆಂಬೊಲು
ಅಂಬಕಾದುದು ಸತಿಯಳಿಗೆ ॥ ೮೩

ಆ ರಾಣಿ ಮುಖವಂಗ ಲಾವಣ್ಯ ರಸವನು
ವೀರಸೇನನ ಕೋಪವೆಂಬ ।
ಗುರು ಭೂತವು ಸೋಂಕಿ ಪಿಡಿದೊಲಾವೆಣ್ಣು
ಗರ್ತಿತಾ ಕಳೆ ಕಂದಿದಳಾಗ ॥ ೮೪

ಎದ್ದನು ಭೂಪನು ಮುಳಿಸಿಂದ ಮಗುಳೊಂದು
ಪೊದ್ದಿದ ಸಜ್ಜೆ ವನೆಯನು ।
ಚೋದ್ಯವನೇನನೆಂಬೆ ಸುತ ಕೇಳು ಪಾಪ ತಾ
ಬದ್ಧ ರಾಯನಿಗೆ ಲೇಪಿಸಿತು ॥ ೮೫

ಅಂತು ಸಂಧಿ ೩ಕ್ಕಂ ಪದನು ೩೩೩ಕ್ಕಂ
ಮಂಗಳ ಮಹಾಶ್ರೀ

♦

ಸಂಧಿ – ನಾಲ್ಕು

ವೇದದಿಂದಲಿ ಮಿಗೆ ವೇದಳಿದವರಿಗೆ
ವೇದದೋರಿದ ವೇದಕಧಿಕ ।
ವೇದೊಂದರಿಂದಲಿ ವೇದೊಂದ ಸೃಜಿಸಿದ
ವೇದೊಂದರಾದಿಗೆ ಶರಣು ॥ ೧

ಶಿವಭಕ್ತಿ ಪ್ರವೀಣ ಶಿವಶಾಸ್ತ್ರ ಪರಿಣತ
ಶಿವಜ್ಞಾನಿ ಸಜ್ಜನೋತ್ತಮರ ।
ಕಿವಿಗಳಿಗೀವುದು ಸೊಗಸಿಲಿ ಪೇಳುವ
ಸವಿಗಥೆ ವಣ್ಣಿಸುವೆನೇನಾ ॥ ೨

ಸಾಕೆನಿಸದು ಮನ ಮುನಿವರ ನೀ ಪೇಳ್ವ
ವಾಕುಗಳೆನ್ನರಡು ಕಿವಿಗೆ ।
ಬೇಕೆಂಬ ಬಯಕೆಯನುಣಿಸೆಂದು ದೀಕ್ಷಿತ
ತಾ ಕಯ್ಯ ಮುಗಿದು ಕೇಳಿದನು ॥ ೩

ಅತ್ತಲಾ ಸತಿ ಶಿವಚಿಂತೆಯೊಳಿರೆ ರಾಯ
ನಿತ್ತಲಿರಲು ಪಾಪವವನ ।
ಮೆತ್ತಲು ನಾಚಿ ಪೊರಮಟ್ಟು ಕೇಳೊಂದು
ಕತ್ತಲೆಯೊಳು ಕಾನನಕೆ ॥ ೪

ದೀನಂಗೆ ನಿಂದಕ ನಿಷ್ಠೂರಿ ದಾನಾರ್ಥಿ
ಅನೇಕಮುರಗ ಮುಟ್ಟಿರ್ದ ।
ಮಾನವಗೆಚ್ಚರವಿನಿತಿಲ್ಲವೆಂದೆತಿ
ಸೂನುವಿಗೊರೆದ ನೀತಿಯನು ॥ ೫

ಕೋಪವೆ ಅನರ್ಥ ಸಾಧನಕಾದಿಯು
ಕೋಪ ಸಂಸಾರ ಬಂಧನವು ।
ಕೋಪವುಳ್ಳವಗೆ ಇಹ ಪರವೆರಡಿಲ್ಲೆಂದು
ತಾಪಸ ಪೇಳ್ದ ನೀತಿಯನು ॥ ೬

ಕುಲ ಛಲ ರೂಪ ಯೌವನ ಧನ ಧಾನ್ಯವು
ನೆಲನಾಳ್ವ ಸಿರಿ ಮದವಿದು ।
ಎಲೆಮಗನೆ ಕೇಳಾ ಭೂತಿಯ ಘನವು
ತಿಳಿದುದಿಲ್ಲ ರಾಯಗೆಂದ ॥ ೭

ನಾರಿಟ್ಟ ಭಸಿತವನಳಿದ ಕಾರಣದಿಂದೆ
ವೀರಸೇನನಿಗೆ ಕೇಳೆಂದ ।
ನೂರೊಂದು ಲಿಂಗದ ಪೂಜೆಗಳಳಿಸಿದ
ಘೋರ ಪಾತಕವು ಸಂಧಿಸಿತು ॥ ೮

ತಿಂಗಳ ರಾಹು ತುಡುಕುವಂತೆ ಪಾಪವು
ನುಂಗಿತು ರಾಯನಂಗವನು ।
ಸಿಂಗರವಳಿದರಸಗೆ ಬಂದುದೊಂದತಿ
ಭಂಗವನೇನ ಪೇಳುವೆನು ॥ ೯

ನಿಷ್ಕಳ ಭಸಿತವೇಳಿಲದಿಂದಲೊರಸಿದ
ಕಷ್ಟವು ನೃಪನ ದೇಹವನು ।
ಕುಷ್ಠವಗೈದಿತಂದಾ ಋಷಿ ಪೇಳಿದ
ನಿಷ್ಠತೆಯಿಂದ ಶಿಷ್ಯನಿಗೆ ॥ ೧೦

ಇಂಗಳ ಪಿಡಿಯ ಪೋಗಿ ಕೈಸುಟ್ಟುಕೊಂಬಂತೆ
ಮಂಗಳ ಭಸ್ಮವನು ಅಳಿದು ।
ಅಂಗವೆಲ್ಲವು ಬಸಿದು ತೊನ್ನಿನಿಂದ ರೂಹಗೆಟ್ಟು
ಭಂಗನಾದನು ಭೂಪನೆಂದ ॥ ೧೧

ಚಲುವಳಿದ ಕಾಯದ ಕಳೆಗೆಟ್ಟು ಚೈತನ್ಯ
ಬಲಗುಂದಿ ಮೈರೋಮಗಳು ।
ಕಳಿತುದುರಿ ದಿನದಿನಕೆ ಇಳಿದುದವನ ದೇಹ
ಕೊಳತ ಬಾಳೆಯ ಪಣ್ಣಿನಂತೆ ॥ ೧೨

ಆತನ ರೂಪು ಲಾವಣ್ಯ ಬರುತ ಮುಂದೆ
ನಾತ ದೋರಲು ದೇಹವೆಲ್ಲ ।
ಪಾತಕ ನಾನಿನ್ನು ಏತಕ್ಕೆ ಬಾಳಲಿ
ತಾತಾಳ್ದ ರಾಯ ಚಿಂತೆಯನು ॥ ೧೩

ದಚ್ಚಿಪುದಾ ಪಾಪ ರಾಯನ ಕಣ್ಣೆರಡ
ಮುಚ್ಚಲೀಸದೆ ಯಾವಕಾಲ ।
ಬೆಚ್ಚಿದಂತೇಳುತ ಬೀಳುತಲಾ ಬೇನೆ
ಗಿಚ್ಚಿನೊಳು ಸೀರ್ದನಾ ಭೂಪ ॥ ೧೪

ಪಲ್ಗಳಿಳಿದುದೆ ಭಂಗ ಪಿರಿಯರಸಿಗೆ ರಣ
ದಲ್ಲಿ ಸೋಲ್ದುದೆ ಭಂಗ ದಾಡೆ ।
ಇಲ್ಲದಿರ್ದುದೆ ಭಂಗ ಗಜಕಭಿಮಾನಿಗೆ
ಅಲ್ಲವೆಂದುದೆ ಸಾವು ಕಂಡಾ ॥ ೧೫

ಗ್ರಂಥ: ಶತ್ರುವ್ಯೋತ್ಪುತ್ರ ಭಾರ್ಯಂಚ
ಚೋರವಾನ್ಮಿತ್ರ ಭಾಂಧವಾಂ ।
ಸಭಾ ಮಧ್ಯೇನ ಚಾಂಡಾಲ
ಮಹೋ ಕಷ್ಟ ದರಿದ್ರತಃ ॥ ೧

ಎಲೆಗಳಿರ್ಪುವೆ ಶುಷ್ಕ ತರುವಿನಲ್ಲಿಯು ಗಂಪು
ಗಳದಲರಿಗೆ ತುಂಬಿ ಬಹವೆ ।
ಎಲೆ ಮಗನೆ ಕೇಳು ಭಾಗ್ಯದೊಲಗಿದ ಪುರುಷ
ಬಲವಪ್ಪರಿಲ್ಲ ಲೋಕದಲಿ ॥ ೧೬

ನೀರಿಲ್ಲದ ಕೆರೆಗೆ ಮಂಡೂಕವ ತಂದು
ಸೇರಿಸುವರೆ ಜಗದೊಳಗೆ ।
ಮಾರನ ಮಾತೆಯ ಬಲವುಳ್ಳ ಕಾಲಕ್ಕೆ
ಧಾರಿಣೀ ಜನ ನೆಂಟರೆಂದ ॥ ೧೭

ಧಾರಿಣಿ ಉರಿವುದು ಎರೆಯರು ನೀರನು
ಸೇರರು ಕುಲ ಗೂಸು ಕೊಡರು ।
ದಾರಿಯ ಬಿಟ್ಟೆಡೆಯಾಗರು ಪೊಲೆಯರು
ಮಾರನ ತಾಯಿ ತೊಲಗಿದಡೆ ॥ ೧೮

ವೈರವ ಮಾಳ್ಪುದು ಸತಿಸುತರಿಗೆ ಇನ್ನು
ಚೋರನಪ್ಪನು ಬಂಧು ಪ್ರಿಯರಿಗೆ ।
ಸೇರರು ಸಭೆ ಮಧ್ಯೆ ಚಾಂಡಾಲನೆನಿಸುವ
ದಾರಿದ್ರ ವಾಯಿತರಸನಿಗೆ ॥ ೧೯

ಕಂದ ಕೇಳ ಸಿನೆ ಚೆಲುವೆಂಬ ಬನ ಒಣಗಿ
ಬೆಂದು ಪಾಪಗಿಚ್ಚಿಂದ ।
ಸಂದೇಹವಿಟ್ಟಾ ಭೂಪತಿ ತಾನಿರ್ದ
ಮಂದಿರವಿದು ಸಾಕೆನುತ ॥ ೨೦

ಅರಸನಾ ವೀರಸೇನನಿಗೆ ವಾ ಮನದ
ಪಿರಿದಪ್ಪ ಭೂತ ಸಂಧಿಸಲು ।
ಅರಮನೆಯಿಂದಲುಚ್ಚಾಟಿಸಿ ಅರಸನ
ಪೊರಮಡಿಸಿತು ವಿಂಧ್ಯದೆಡೆಗೆ ॥ ೨೧

ಮಾನಗೆಟ್ಟದರೊಳಿನ್ನೇನಾ ಜೀವಿಸಲೆಂದು
ಅನರಪತಿ ಮೋನವಿಡಿದು ।
ತಾನೆದ್ದು ನಡುವಿರುಳು ಕಾನನಕೆ ನಡೆದನು
ಆ ನೋವನೇನ ಪೇಳುವೆನು ॥ ೨೨

ಗಂಧವಾಹನನೆಂಬ ಕಂದನ ಬೆಸಲಾಗಿ
ಸಂಧ್ಯಾವನಿತೆ ಪೊಳೆವೆಟ್ಟ ।
ಕಂದುಗಂಬಳಿಯನು ತಂದು ಪೊದಿಸಿದಂತೆ
ಅಂದ ದುಂಬಿಹುದು ಎಣ್ದೆಸೆಯು ॥ ೨೩

ನಟ್ಟಿರುಳೆ ತಾನಿರ್ದ ಅರಮನೆಯನು ರಾಯ
ಬಿಟ್ಟೆದ್ದು ಪೋಗಲಾ ನೃಪನ ।
ದಿಟ್ಟಗೆ ಕಂಬಳಿಯ ತಂದು ಜವನಿಕೆ
ಗಟ್ಟಿದೊಲು ನಿಶಿ ದೋರುತಿಹುದು ॥ ೨೪

ಭೂಪನ ವೀರಸೇನನ ಮುಂದೆ ಪಿಡಿದಿರ್ಪ
ದೀಪಗಳೊಂದು ಸಾವಿರವು ।
ಅಪತ್ತನೇನೆಂಬೆ ಕದ್ದಿರುಳೋಳೋರ್ವನು
ಪಾಪವಾಸದಿ ಪೊರವಂಟ ॥ ೨೫

ಅವೆಡೆ ಪೋಗಲಾ ರಾಯನ ಬಳಿಸಂದು
ಸಾವಿರ ಜನ ಮಸಗಿಹುದು ।
ಈ ವಿಧಿಯಲಿ ಪೋಪರಾಯನ ಬೆಂಬಳಿಗೋರ್ವ
ದೀವಿಗೆಯವ ಬಾರದಾದ ॥ ೨೬

ಕಾನನ ದಹಿಸುವ ವಹ್ನಿಗೆ ಮಾರುತ
ತಾ ನಂಟನಾಗಿ ದೋರುವನು ।
ತಾನೊಯಿರಿಯಾಪನಾ ಗಾಳಿ ದೀಪಕೆ ಬಲ
ಹೀನರಿಗಿದು ನೀತಿಗೇಳ ೨೭

ಗ್ರಂಥ: ವನನಾಂ ದಗ್ಧಂತೆ ವನ್ಹಿಃ
ಸಖಂ ಭವತು ಮಾರುತಃ ।
ತದ್ವನ್ಹಿ ಕ್ಷೀಣ ದೀಪಂ ಚ
ಶತ್ರು ಭವತು ಮಾರುತ ॥ ೧ ॥

ಬೀಳುವನುಬ್ಬಸ ಬಟ್ಟೊಮ್ಮೆ ನೆಲದಿಂದ
ಲೇಳುವನತಿ ನೋವಿನಿಂದ ।
ಕಾಳಿನೊಳು ಆ ವೀರಸೇನನು ಬರೆ ಮೇ
ಘಾಳಿಯೊಳ್ ತಟಿ ಪೊಳೆವಂತೆ ॥ ೨೮

ಇಕ್ಕೆಯನಗಲಲಾ ವೀರಸೇನಗೆ ಪಿರಿ
ದಕ್ಕೆ ಗವಿದು ಕಣ್ಣಿಲುದಕ ।
ಒಕ್ಕು ಮೊಗದಿಂದ ಉರಕಿಳಿಯುತ ಬಂದ
ಆ ಕಾಡಿನೆಡೆಗೆ ಕೇಳ್ಮಗನೆ ॥ ೨೯

ಗಿರಿಯಿಂದ ತರುವಿಂದ ಸರೋವರ ಸರಿಯಿಂದ
ತರುವಿಂದ ಪೊದರ್ಲತೆಯಿಂದ ।
ಅರಳೆಲೆ ಕಾಯ್ಪಣ್ಣು ಕಿರುಗಿಡ ಮೃಗ ಖಗ
ನೆರವಿಂದ ಬನಮೆಸೆದಿಹುದು ॥ ೩೦

ಶತ ಮಖ ದೂರ್ವಾಸಗಿತ್ತ ಪೂಮಾಲೈರಾ
ವತದಿಂದಲಳಿಸಿ ಕೆಟ್ಟಂತೆ ।
ಸತಿ ಫಣೆ ಭೂತಿಯ ತೊಡೆದ ಕಾರಣದಲ್ಲಿ
ಸುತ ಕೇಳು ನೃಪ ಕಂಡಕೇಡ ॥ ೩೧

ವಿಮಳನೆ ಕೇಳು ಶಿವ ಲಾಂಛನವಿರ್ದೆಡೆ
ತಮಗುಣದಳದನಿನ್ನಾವ ।
ಯಮಬಾಧೆಗೊಳಗಪ್ಪನಿದು ಪುಸಿಯಲ್ಲೆಂದು
ಯಮಿವರ ಪೇಳ್ದ ನೀತಿಯನು ॥ ೩೨

ಗಗ್ಗಾಳಿನೊಳು ವೀರಸೇನನು ಐತರೆ
ತೆಗ್ಗು ತೆವರು ಗಾಣದಲಿ ।
ಮುಗ್ಗುವನೆಡಹುವ ನರಳುವ ಪೊರಳುವ
ಮಗ್ಗುವ ಮರಳೆದ್ದು ಮರುಗಿ ॥ ೩೩

ಹಾಯಿವನು ಕಲ್ಲಿಗೆ ಫಣೆ ಮೂಗು ದುಟಿ ಒಡೆದು
ಬಾಯ ಬಿಡುವ ಮುಳ್ಳುದಾಗಿ ।
ಘಾಯ ವಡೆದು ಕೆಂಪಿನುದಕ ಚಿಮ್ಮುತಾ ಬಂದ
ರಾಯನ ನೋವನೇನೆಂಬೆ ॥ ೩೪

ಜಾರಿ ಬೀಳುತ ಕಯ್ಯನೂರಿ ನೆಗೆವನೊಮ್ಮೆ
ಸಾರೆಡೆ ಯೆಡೆಗೆ ಕುಳ್ಳಿರುವ ।
ನಾರುವ ಮೈಯ್ಯೊಳ ಕೆನ್ನೀರು ಒಸರುತ
ಸಾರಿದ ಹೇರಡವಿಯನು ॥ ೩೫

ವೀರಸೇನನು ಬಂದು ಘೋರಾರಣ್ಯವ ಸಾರ್ದ
ಕಾರಿರುಳೆ ಸಂದು ಸೂರಿಜನು ।
ಪೂರುವ ದಿಕ್ಕಿನಲಿದೋರುತಲಿದ್ದ ಕು
ಮಾರ ಕೇಳೆಂದ ದೇಶಿಕನು ॥ ೩೬

ನಿಶೆಯೆಂಬ ದನುಜನ ಹಿಮ್ಮಡ ರವಿ ತನ್ನ
ಎಸೆವ ಮರೀಚಿ ಖಡ್ಗವನು ।
ಒಸೆದು ಪೊಯ್ಯಲು ರಕ್ತ ಚಿಮ್ಮಿ ಬಿದ್ದೊಲು ಕೆಂಪು
ಮುಸುಗಿ ಮೂಡಿದನಿನನೆಂದ ॥ ೩೭

ಪೂಸಿದ ಭೂತಿಯನಳಿದನೀ ಮಹಾಪಾಪಿ
ಹೇಸಿ ಮೈಯ್ಯನ ಬನದೇವಿ ।
ಆಸರಿಸ ವೇಡ ನಿನ್ನೊಳಗೆಂದು ಪೇಳ್ವಂತೆ
ನೇಸರಗದಿರ ಸೂಸಿದನು ॥ ೩೮

ಸೂರಿಜ ತನ್ನ ರೊಚ್ಚಿಗೆಳೆಂಬ ಕಿಚ್ಚಿಂದ
ಕಾರುಗತ್ತಲೆಯ ಕಾಸಿದಡೆ ।
ಭೋರನೆ ಕರಗಿ ಕೆಂಗಲಸಿದಂತುರಿವುದು
ಧಾರಿಣಿಯು ಬಿಸಿಲಿಂದ ॥ ೩೯

ಆ ವೀರಸೇನನು ದೇಹದ ಬಲಗುಂದಿ
ತಾವೋರ್ವರಿಲ್ಲದ್ಯೆತಂದು ।
ಈ ವಿಪಿನಾಂತರವನು ಪೊಕ್ಕ ದುಃಖದ
ದಾವಾಗ್ನಿಯಲಿ ಬೇವುತಿರ್ದ ॥ ೪೦

ಅವನಿಪನಾ ವೀರಸೇನಂಗೆ ತಾನೊಂದು
ನೆವದಿಂದಲೊದಗಿದ ಪಾಪ ।
ಭವಣೆಯನುಣಿಸಲಾರಣ್ಯಕೆ ತಂದುದು
ಕುವರನಿನ್ನೇನ ಪೇಳುವೆನು ॥ ೪೧

ಕುಷ್ಠ ದೇಹವು ಬಸಿರಕ್ತ ದುರ್ವಾಸನೆ
ಭ್ರಷ್ಠಿತನಾಗಿ ವೀರಸೇನ ।
ನಷ್ಟ ರೂಪಿಂದಲಾರಣ್ಯಕ್ಕಯಿತಂದ
ಕಷ್ಟವನೇನುಸುರುವೆನು ॥ ೪೨

ಕೋಮಲಂಗಾಲಲಿ ಮಸಗಿರ್ಪ ಭೂಪಗೆ
ಭೂಮಿಯ ಪರಳುಗಳೊತ್ತಿ ।
ಭೀಮ ಬೊಕ್ಕೆಗಳೆದ್ದು ಅಡಿಯೂರಲಾರದೆ
ಆ ಮರುಕದಿ ನರಳುವನು ॥ ೪೩

ಚಲುವಪ್ಪ ಚಿನ್ನದ ಪಾವುಗೆಯನು ಮೆಟ್ಟಿ
ಚಲಿಸುವ ನೃಪನಂಘ್ರಿ ತಳಕೆ ।
ಎಲೆಗಳ ಸುತ್ತಿ ಕಾನನದೊಳು ಬರ್ಪಂತಾ
ಗಲೇನಲ್ಲಿ ಬ್ರಹ್ಮನ ಬರೆಹ ॥ ೪೪

ಕಸ್ತೂರಿ ಗಂಧ ಪೂಸುವ ದೇಹ ತಾಕೆಟ್ಟು
ನೆತ್ತರು ಕೀವಿನಿಂದ ಬಸಿಯೆ ।
ಅತ್ತಡಿ ಇಡಲಾರದಡಿಗಡಿಗೆ ಬೀಳಲು
ಮೆತ್ತುವುದು ಅಂಗಕೆ ಧೂಳಿಯು ॥ ೪೫

ಪಲಪರಿ ಚಾಮರಗಳಿಂದ ಡಾಳಿಸಿಕೊಂಬ
ನೆಲದೆರೆಯಗೆ ಬಲಗ್ಯೆಯ್ಯ ।
ಎಳೆದೊಪ್ಪಲಿಂದ ಮೈ ನೊಣನ ಬೀಸುತ್ತ ಬರ್ಪ
ಫಲವ ವಿಧಿಯು ತಂದಿಟ್ಟನು ॥ ೪೬

ಮುತ್ತಿನ ಕುರುಚದ ಪತ್ತೆಂಟು ಗೊಂಡೆಯಗಳ
ಒತ್ತಿಲಿ ರಾಯ ತಾ ಬರುವ ।
ನೆತ್ತಿಯ ಮೇಲೊಂದು ಪತ್ರವು ಸುಳಿಯ
ದಂತಾದುದು ಧರಣೀಶಗೆ ॥ ೪೭

ಅಣುಗ ಕೇಳಾವನಾದಡೆ ಗಯಿದ ದೋಷವು
ಉಣಿಸಿದಲ್ಲದೆ ಯಾವ ದಿನಕೆ ।
ಜುಣುಗಲರಿಯದು ಕೀಡಿಯಕೊಂದ ಮಾಂಡವ್ಯ
ಕ್ಷಣದೊಳು ಬಿದ್ದ ಶೂಲದಲಿ ॥ ೪೮

ಶುಕಮುನಿಯಂತೆ ವಾನರನಂತೆ ಅಜದಂತೆ
ಬಕನಂತೆ ಮೇಣಾಭೂಪ ।
ಪಿಕದಂತೆ ಇದ್ದನಾ ಕಾನನದಲ್ಲೆಂದು
ಅಕಳಂಕ ಮುನಿಶಿಷ್ಯಗೊರೆದ ॥ ೪೯

ದೀಕ್ಷಿತ ಕೇಳಾ ಭೂಪನಡವಿಯೊಳಗೊಂದು
ವೃಕ್ಷದ ಬಳಿ ಒರಗಿರಲು ।
ಪಕ್ಷಿಪನೊಂದಾಗ ಗಗನದಿಂದಲಯಿತಂದು
ನೀಕ್ಷಿಸುತಿತ್ತು ಭೂವರನ ॥ ೫೦

ಬಸಿವುದು ಶೋಣಿತ ರಸಿಕೆ ದೇಹದ ಬಾಡು
ನಸುಗೊಳೆಯ ದುರ್ಗಂಪಿನಿಂದ ।
ಮುಸುಗಿ ಮುತ್ತಿ ಆಡುವ ನೊಣಗಳ ಸಂದಣಿಂದ
ಪಿಸಿತದೊಲಾ ಭೂಪನೆಸೆದ ॥ ೫೧

ಬೇಡರು ಬೇಟೆಯನಾಡುತ ಕಾಡೊಳು
ಬಾಡನೊಯ್ಯಲನುವಾಗದಿಟ್ಟ ।
ಕಾಡೆಮ್ಮೆ ಮರೆ ಪುಲ್ಲೆ ಕ್ರೋಧ ಸಿಂಗಾನೆಯು
ವಾಡಲವರ ಬಳಿ ಸಂದು ॥ ೫೨

ಮರದ ರೋಮುವ ಸದಗುದೆಯ ನೀಬನದಲ್ಲಿ
ಪೊರಲಾರದಿಲ್ಲಿರಿಸಿದರೋ ।
ಪಿರಿದಡಗನು ಕಂಡು ಗರುಡ ಸಂತೋಷಿಸಿ
ಎರಡು ಪಕ್ಕಗಳ ಪೊಂಗಿಸಿತು ॥ ೫೩

ಬಾಡಭಕ್ಷಿಪರಿಗೆ ಕುರಿ ಏನು! ನರಿಯೇನು!
ಕೋಡಗವೇನುಡುವೇನು ।
ಬೇಡೆಂಬುದಿಲ್ಲ ಕೇಳಾ ಖಗವರ ಪಸಿದು
ನೋಡಿತಾ ಭೂಪನಂಗವನು ॥ ೫೪

ಗಾಢನಾ ಖಗವರ ಮೀನ್ಬುಲಿಗನಂತೆರಗಿ
ನಾಡೆರೆಯನ ಗೋಣ ಕರ್ಚಿ ।
ಕೂಡಲೇ ನೆಗೆದಾಕಾಶವಟ್ಟೆಲಿ ತನ್ನ
ಗೂಡಿನ ಬಳಿಗೊಯ್ಯಲಿತ್ತ ॥ ೫೫

ಬೆಳಗುಡಿಗಿ ದೇಹದ ಕಳೆಗುಂದಿ ವೃದ್ಧತ್ವ
ದಳೆಯಲೆನ್ನಿದಿರು ಚಂದ್ರ ।
ಕಳೆದೋರಲುಳಿಯಲಿನ್ನೇಕೆಂದು ಲಜ್ಜಿಸಿ
ಯಿಳಿದನಾ ರವಿ ಜಲಧಿಯಲಿ ॥ ೫೬

ಅಂತು ಸಂಧಿ ೪ಕ್ಕಂ ಪದನು ೩೮೯ಕ್ಕಂ
ಮಂಗಳ ಮಹಾಶ್ರೀ

ಸಂಧಿ – ಐದು

ಪುಷ್ಕರ ಮಣಿ ಶತಕೋಟಿ ದೀಪ್ತಾಂಗನೆ
ಪುಷ್ಕರಾರ್ಭಕ ಮೂರ್ತಿಪಾಣಿ ।
ಪುಷ್ಕರ ಪುಷ್ಕರ ನಾಭನರ್ಚಿತ ಪಾದ
ಪುಷ್ಕರ ಯುಗಳಕೊಂದಿಸುವೆ ॥ ೧

ದಾಸನಾಮದ ಪುರವಾಸ ವಾಗಿಹ ಹರಿ
ದಾಸನ್ನೈಯ್ಯನ ಸಖನೇತ್ರ ।
ದಾಸ ನಿಮ್ಮಡಿಗಾನು ಲೇಸಪ್ಪ ಮತಿಯನು
ದಾಸೀನವಿಲ್ಲದೆ ನೀಡು* ॥ ೨

ಬೇಸರನೀಯದು ಪೇಳ್ದಡೆ ಭಕ್ತಿಯ
ವಾಸನೆ ಪುಟ್ಟ ತಾಮಸವ ।
ನಾಶನ ಮಾಳ್ಪದು ನೀಪೇಳ್ವ ಕಥೆ ವಿ
ಲಾಸವನೇನ ವರ್ಣಿಪೆನು ॥ ೩

ಚಿತ್ತೈಸು ಗುರುರಾಯ ಸೂತ ಮುನೀಶನೆ
ಮತ್ತೆ ಭೂವರ ವೀರಸೇನ ।
ಸತ್ತನೋ ಉಳಿದನೋ ಮುಂದಾದ ಕಥೆಯನು
ಬಿತ್ತರಿಸೆಂದನಾ ಕುವರ ॥ ೪

ಪಾತಕ ರಜನಿ ದಿವಾಕರನೆನಿಪುದು
ಪಾತಕ ವನಧಿ ವಡಬನು ।
ಪಾತಕ ಕುಲಗಿರಿ ಕುಲಿಶವು ಕುಂಭಸಂ
ಜಾತನ ಬನಮೆಸೆದಿಹುದು ॥ ೫

---

*ದಾಸನಾಮದಪುರ – ಪುರದಂಗಡದಲ್ಲಿ ವಾಸವಾಗಿದ್ದವರು ಪುರಂದರದಾಸರು

ತಂಪಿಂದ ತಳಿರಿಂದ ತನಿವಣ್ಣು ಪೂಗಳ
ಗಂಪಿಂದಗಸ್ತ್ಯನ ಬನವು ।
ಪೆಂಪಿಂದಲೆಸೆದಿರೆ ಯಾಪಕ್ಕಿ ರಾಯನ
ಏಂ ಪುಣ್ಯವೋ ಬಿಟ್ಟಿತೆಂದ ॥ ೬

ಉದಯಾದ್ರಿ ಶಿಖರಕ್ಕೆ ರತ್ನಾದ ಕಳಸವ
ವಿಧಿ ನಿಲಿಸಿದ ತೆರನಂತೆ ।
ಉದಿಸಿದನಾ ಪದ್ಮ ಮಿತ್ರನು ಕೆಂಪೇರಿ
ಸದಮಳ ದೀಪ್ತಿ ವೆಗ್ಗಳಿಸಿ ॥ ೭

ಅಣುಗ ಕೇಳಾ ಸತಿ ಮುನ್ನೋಂತ ಫಲದಿಂದ
ಒಣಗುವ ಸಸಿಗುದಕವನು ।
ಉಣಿಸುವ ತೆರನಂತೆ ಭೂಪನ ಪ್ರಾಣವು
ಟೊಣೆಯಾಗದೆ ಮಗುಳುಳಿಯಿತು ॥ ೮

ತರುಣನೆ ಕೇಳು ಮುನ್ನ ಸೀತೆಯ ತಪದಿಂದ
ಅರಸನಾಗನೆ ಸಿರಿರಾಮ ।
ಅರಿದಲ್ಲಿ ಸತಿಯರ ಪುಣ್ಯದ ಫಲದಿಂದ
ಪುರುಷರಿಗಾಗದೆ ಸಿರಿಯೂ ॥ ೯

ಆ ವಿದ್ಯಾಲತೆ ನೋಂತ ಫಲದಿಂದ ಉಳಿದನು
ಈ ವೀರ ಸೇನನಸುವಿಂದ ।
ನೋವಗಳೆದು ಮುನ್ನಿನಂತೆ ಸಿರಿಯ ಗಾಣ್ಬು
ದಾವಧುವಿನ ಪುಣ್ಯದಿಂದ ॥ ೧೦

ಮತ್ತೆ ಪೇಳುವೆನೇನ ವಿಚಿತ್ರವ ಪಕ್ಕಿಗೆ
ದುತ್ತಾಗದಿಳೆಗುರುಳಿದನು ।
ಉತ್ತಮ ಫಲ ವೀರಸೇನನದೇನನೆಂಬೆ
ಮೃತ್ಯುವಿನೊಳಗಾಗದುಳಿದ ॥ ೧೧

ಅಳಿವುದು ಪಾತಕ ಕಂಡರೆ ಬನವೊಮ್ಮೆ
ಮಲಗಿದಡಪ್ಪುದು ಸ್ವರ್ಗ ।
ಕುಲಕೋಟಿ ಪಾವನಮಾಳ್ಪುದು ಸಾರಿರ್ದ
ಪಲ ಪ್ರಾಣಿಗೆಂದನಾ ಮುನಿಯು ॥ ೧೨

ಈ ಕುಂಭ ಸಂಭವಗೊಲಿದುರೆ ಬಂದುದೋ
ಆಕಾಶ ಗಂಗೆ ಎಂಬಂತೆ ।
ಏಕುವರನೆ ಕೇಳಾ ಬನದಲ್ಲಿ ಪರಿವುದು
ಲೋಕ ಪಾವನೆ ಪೊಳೆವಂದು ॥ ೧೩

ಸಿಡಿವನಿ ಸೋಕಲಘಹರವಾ ಸಿಂಧು
ಕಡೆಗಣ್ಣಿನಿಂದ ನೋಡಿದಡೆ ।
ಕೊಡುವದು ಪಾವನತ್ವವನೊಮ್ಮೆ ಮಿಂದವರು
ಪಡೆವರು ದೇವಲೋಕವನು ॥ ೧೪

ಪಲಕಾಲ ಜಡೆಯೊಳು ಮಲಗಿರ್ದ ಜಾಹ್ನವಿಗೆ
ಒಲವಿಂದ ದಯವಿತ್ತ ಹರನು ।
ನಲವಿಂದಗಸ್ತ್ಯನ ಬನದೊಳು ಚರಿಸೆಂದು
ಕಳುಪಿದೊಲಿರ್ದುದಾ ಗಂಗೆ ॥ ೧೫

ಬಳಿಕೊಂದು ದಿನಕೇಳು ಶಿಷ್ಯರಿರ್ವರುಗೂಡಿ
ಜಳಕಕಗಸ್ತ್ಯನು ಬರಲು ।
ಪೊಲಸಿನ ವಾಸನೆ ವಿಡಿದೇಳೆ ಗಾಳಿಯು
ಸುಳಿಯಿತಾ ಮುನಿ ನಾಸಿಕಕ್ಕೆ ॥ ೧೬

ಈವನದೊಳಗೆಂದು ಸುಳಿಯದ ದುರ್ಗಂಧವು
ಯಾವ ಕಾರಣ ಬಂದಿತೆಂದು ।
ತಾ ವೆರಗಾದನು ಮುನಿ ಮೂಗವಿಡಿದುಕೊಂಡು
ಯಾವಟ್ಟೆಯೊಳು ನಿಂದನಾಗ ॥ ೧೭

ನಿಂದನೇತಕೆ ನಮ್ಮ ಗುರುವರ ನಾಸಿಕವ
ನೆಂದು ವಿಡಿಯ ದಾರಿಯಲಿ ।
ಸಂದೇಹವಟ್ಟರೆಡೆಯಾಗಿ ನಿಂದಿರ್ದ
ಕಂದ ಕೇಳಾ ಶಿಷ್ಯರೆಂದ ॥ ೧೮

ಬಟ್ಟೆಯೊಳು ನಿಂದೆಮ್ಮ ಮುನಿವರ ಮೂಗನು
ಮುಟ್ಟಿ ಮಾಳ್ಪನುಷ್ಠಾನವನು ।
ದಿಟ್ಟಿಲಿ ಕಂಡವರಲ್ಲೆಂದು ಸೋಜಿಗ
ವಟ್ಟರೆಳೆಯ ತಪಸಿಗಳು ॥ ೧೯

ಅನಿತರೊಳಗೆ ಕೇಳಾ ವಟುಗಳ ಘ್ರಾಣದ
ಕೊನೆ ಮೂಗಿನಲೀ ದುರ್ಗಂಪು ।
ಮಿನುಗಲವರು ತಮ್ಮ ಮನದಲ್ಲಿ ಕಂಡರು
ಮುನಿ ಮೂಗವಿಡಿದ ರೀತಿಯನು ॥ ೨೦

ಈ ಕಂಪ ತಂದಿಡೆ ಬನದೊಳು ನರ ನಾಗ
ನಾಕ ಜನರ್ಮುನ್ನ ಅಂಜುವರು ।
ಆ ಕುಂಭ ಸಂಭವ ಮರವಟ್ಟು ಕರೆದಾಗ
ತಾ ಕೇಳ್ದ ತನ್ನ ಶಿಷ್ಯರನು ॥ ೨೧

ಆಡಲಮ್ಮದು ಗಾಳಿ ಕುಸುಮ ಸಂಕುಲವ ಮೂಸಿ
ನೋಡಲಮ್ಮವು ಭ್ರಮರಗಳು ।
ನೀಡಲಮ್ಮರು ತಮ್ಮ ಕಿರಣವ ವಿಧು ರವಿ
ನಾಡಾಡಿ ಬನ ನಮ್ಮದಲ್ಲ ॥ ೨೨

ವ್ಯಾಳ ಗರುಡ ಗೂಡಿ ಸಿಂಗಾನೆ ಒಂದಾಗಿ ಮಾ
ರ್ಜಾಲ ಮೂಷಕ ಸರಸದಲಿ ।
ದಾಳದೆ ವೈರವ ಶಾರ್ಧೂಲ ಪುಲ್ಲೆ ಸ
ಮೇಳದಲ್ಲಿಹ ನಮ್ಮ ಬನವು ॥ ೨೩

ಲೆಂಕರು ನಾವಿರೆ ಮುನಿರಾಯ ನಿಮಗಾವ
ಸಂಕಲ್ಪ ಬೇಡ ವಾಸನೆಯು ।
ಅಂಕರವಾರ್ರೈದು ಐತಪ್ಪೆವೆಂದಡಿ
ಪಂಕಜಕವರು ಎರಗಿದರು ॥ ೨೪

ಪಿಡಿವರು ಕಡಲನು ಕುಡಿತೆಯಲಿ ಗಿರಿಗಳ
ನಿಡುವರು ಬೆರಳುಗಳಿಂದ ।
ಸುಡುವರು ಭೂವನವ ಮುನಿದಡಾ ಗುರುವಿಂದ
ಪಡೆದಿರ್ಪರವರು ಸಿದ್ಧಿಗಳ ॥ ೨೫

ವೀರರು ಗುರುವಿನಾಜ್ಞೆಯ ತಮ್ಮ ಜೀವವ
ಸೂರೆಗೊಡುವ ವೀರರವರು ।
ಸ್ವೈರಿಸದೀವುದು ಬೆಸನನು ಈರ್ವರಿಗೆಂದು
ಆರುಷಿ ವರನಿಗಾಡಿದರು ॥ ೨೬

ಜಾತಿ ವೈರಿಗಳಿಲ್ಲದಂತಹ ಬನವಿದು
ನೂತನ ಗಂಪಾವುದೆಂದು ।
ಮಾತಾಡೆ ಮುನ್ನಲಗಸ್ತ್ಯನ ಶಿಷ್ಯರು
ಪ್ರೀತಿಲಿ ಬೆಸನ ಬೇಡಿದರು ॥ ೨೭

ನುಡಿಯಬಾರದು ಗುರುಗಳಿಗಡ್ಡ ಮೊಗವಾದಿ
ಗೊಡಬಾರದು ಅವರ ಹಿಂದಡಿಯ ।
ಆಡಿ ಇಡಬಾರದವರು ಪೇಳ್ದ ಕಜ್ಜವ
ನಡಸೂದು ನೀತಿ ಶಿಷ್ಯರಿಗೆ ॥ ೨೮

ಕಾಣಬೇಕೆಂದೆತಿ ನಾಯಕನೊರೆದನು
ಆ ನಲ ನೀಲರೆಂಬರಿಗೆ ।
ತಾನಾವುದೀ ಗಂಪನಾರೈದು ಬನ್ನಿರೆಂದು
ಮಾಣದವರ ಬೀಳ್ಕೊಟ್ಟ ॥ ೨೯

ಬೇಸರಾಗರು ಸೇವೆಯ ಮಾಳ್ಪಲ್ಲಿ
ಓಸರಿಸರು ಗುರುವ ಕಂಡು ।
ದೇಸಿಕ ದೇವನಲ್ಲದೆ ಮಿಕ್ಕ ದೈವಕ್ಕೆ
ಅಸಿಡರಾ ಶಿಷ್ಯರೆಂದ ॥ ೩೦

ಏಖುಷಿವರ ನಮ್ಮ ಬನವು ಹಿಮ ಗಯ
ವಾರಣಾಸಿಗೆ ಇಮ್ಮಡಿ ಅಧಿಕ ।
ನಾರುವ ದುರ್ಗಂಪನಿಲ್ಲಿರಿಸಿದವ ಜಂ
ಭಾರಿಯೊ ಮೇಣ್ ಮುರಹರನೋ ॥ ೩೧

ಚಿತ್ತೈಸು ಗುರುರಾಯ ಈ ಗಂಪ ತಂದಿಲ್ಲಿ
ಇತ್ತವನಾವೆಡೆ ಇರೆ ನಿಮ್ಮ ।
ಒತ್ತಿಗೆ ತಂದೊಪ್ಪಿಸಲರಿಯದಿರ್ದಡೆ ನಾವು
ಉತ್ತಮರಲ್ಲೆಂದಾಡಿದರು ॥ ೩೨

ಎಲೆ ಮಗನೆ ಕೇಳಾ ಬನದಲ್ಲಿ ಮುನ್ನೆಸೆವ
ಪೊಲಸಿನ ಬಲುಗಂಪುವಿಡಿದು ।
ಮೆಳೆ ಪೊದರು ತರುಗಿಡು ಸರೋವರ ಗಿರಿ ಎಡೆ
ಅಲಸದವರು ಬೆದಕಿದರು ॥ ೩೩

ರಕ್ಕಸ ಸುರ ನರರಂಜುವರೀ ಗಂಪ
ನಿಕ್ಕಲು ನಮ್ಮ ಬನದೆಡೆಯು ।
ಅಕ್ಕಜವಡುತೆಳ ಋಷಿಗಳು ಕೇಳ್ದರು
ಪಕ್ಕಿಗಳಾ ಎಡೆ ಮೃಗವ ॥ ೩೪

ಒದ್ದಡೆ ವೀಂಧ್ಯಾದ್ರಿ ಭೂತಳಕಿಳಿಯುತ
ಲಿದ್ದ ರಾಕ್ಷಸ ಸರ್ವರನು ।
ಶುದ್ಧವಾಪೋಷಣ ಮಾಡಿದ ನಮ್ಮುನಿ
ಸಿದ್ಧನಿಗಿದಿರಪ್ಪವರಾರು ॥ ೩೫

ಎಂದಿಂತು ಗುರುವರನ ಪೊಗಳುತ ತಮ್ಮೊಳು
ಕಂದ ಕೇಳಾ ಶಿಷ್ಯರಾಗ ।
ವಿಂಧ್ಯವ ಬೆದಕುತ ಪೋದರು ಮುನ್ನಾದ
ಗಂಧಿಯ ಬಳಿವಿಡಿದವರು ॥ ೩೬

ದಡಿಗ ದಾನವ ದಿವಿಜರು ತ್ರಿಪುರದಿ ಮುನ್ನ
ಕಡಿದಾಡಲವರೊಳಗೊಂದು
ಸಿಡಿದಿಲ್ಲಿ ಬಿದ್ದಿತೊ ಪೆಣನೆಂಬೊಲಾ ರಾಯ
ಗೆಡದಿರ್ದನಾ ಬನದೆಡೆಯು ॥ ೩೭

ನಂಬನದಲ್ಲಿರಲು ತಕ್ಕುದೆ ಈ ಗಂಪು
ಬೆಂಬತ್ತಿ ಪೊರಯಿಕೆಯಿದು ।
ಬಂಬೊಲು ನೋಡುತ ಬಂಬೊಲು ಋಷಿಗಳು
ಕುಂಭಿನಿ ವರ ಬಿದ್ದ ಬಳಿಯ ॥ ೩೮

ಹಾಹೆದೊಬ್ಬುಳಿಯಂತೆ ಮೇಣವನಂಗವು
ದ್ರೋಹ ದುಂಬಿದ ಮೊಟ್ಟೆಯಂತೆ ।
ಗೋಹಳದಲ್ಲೆಡೆಯಾಗಿ ಮುಂದೋರಿದ
ಬಾಹ ಎಳೆಯ ಮುನಿಗಳಿಗೆ ॥ ೩೯

ಅಡಿಯಿಡಬಾರದ ರಾಯನ ಮಯ್ಯ ಪೆ
ರ್ಬಡಿಕೆಗೆ ಆ ಶಿಷ್ಯರು ತಮ್ಮ ।
ಒಡೆಯನ ನುಡಿಗಂಜಿ ಪೋದರವರು ಕೇಳು
ಪೊಡವಿಪನೆಡೆಗೆಡೆಗಾಗ ॥ ೪೦

ಹೇಸಲಿಲ್ಲವು ಮನ ಪಾಪಕ್ಕೆ ಜೀವದ
ಆಸೆ ತೊಲಗಿ ತಮ್ಮ ಪೊರೆವನ ।
ಭಾಸೆಯ ಮನ್ನಿಸಿದಂಗೆ ಗೀರ್ವಾಣರ
ವಾಸವಪ್ಪುದು ಸುತ ನೀತಿ ॥ ೪೧

ವರ್ಣಿಪೊಡೆ ಉರಗನ ವಿಷ ಬಿಡುವದು ಸು
ಪರ್ಣವೈದಕ್ಕರದಿಂದ ।
ಕರ್ಣಿಸಿ ಎಳೆ ಋಷಿಗಳ ನುಡಿವ ಶ್ರೀ ಪಂಚ
ವರ್ಣವಳಿಯದೆ ದುರ್ಗಂಪ ॥ ೪೨

ವಾಸನೆ ಬಳಿವಿಡಿದ್ಯೆತಂದಗಸ್ತ್ಯ ಮು
ನೀಶನ ಶಿಷ್ಯರು ನೋಡಿದಡೆ ।
ಸೂಸದೆ ದೇಹದ ದಿಮ್ಮಿಲಿ ಬಿದ್ದಿರ್ದ
ದೋಷ ರೂಪಗೆ ತೀವಿತು ತ್ರಾಣ ॥ ೪೪

ಕುಣಪನೊ ಪೆಜ್ಜೇನೊ ಎಂಬೊಲು ನೊಣಮುತ್ತಿ
ಮಿಣುಕದೆ ನೃಪನೊರಗಿರಲು ।
ಅಣುಗ ಕೇಳಾ ಋಷಿಗಳ ದಿಟ್ಟಿಸೋಂಕಿದ
ಕ್ಷಣದೊಳೆಚ್ಚರ ಬಂದುದೆಂದ ॥ ೪೫

ಆರುವ ಸೊಡರಿಗೆ ತಿಲರಸ ವೆರೆದೊಲು
ಈ ಋಷಿಗಳ ದಯನೋಟ ।
ಸಾರಲಾ ಭೂಪಗೆ ಚೈತನ್ಯ ಮೈದುಂಬಿ
ದೋರಲೊಯ್ಯನೆ ಕಣ್ದೆರೆದಾ ॥ ೪೬

ಕೃಪ ಕಂತೆಯ ಜಡೆ ಸುಲಿಪಲ್ಲು ರುದ್ರಾಕ್ಷಿ
ತ್ರಿಪುಂಡ್ರಲಿಂಗ ಧಾರಣದ ।
ಶ್ರೀ ಪಂಚಾಕ್ಷರಿ ವದನದಲೊಪ್ಪುವಾ
ತಾಪಸರೀರ್ವರ ಕಂಡ ॥ ೪೭

ಪಂಗುಳನಲ್ಲಿಗೆ ಪೊಳೆ ಪರಿತಂದಂತೆ
ಕಂಗಳಿರದಗೆ ಕಣ್ಬಂದಂತೆ ।
ಅಂಗದೊಳು ನಿಂದೇಳೆ ಭರದಿ ನೃಪನುತ್ತ
ಮಂಗ ಮಣಿದು ನಮಿಸಿದನು ॥ ೪೮

ಶಿವಯೋಗಿಗಳ ಸ್ಮರಿಸಿದಡಘ ನಾಶವು
ಅವರಡಿಗಳ ನೀಕ್ಷಿಸಲು ।
ಶಿವಲೋಕವಪ್ಪುದೆಂದಾ ಸೂತ ಮುನಿವರ
ಕುವರಗೆಂದನು ಮುದವೆತ್ತು ॥ ೪೯

ಹರಿಹರರಂದದಿ ಐತಂದರೀರ್ವರ
ಚರಣಾರವಿಂದವ ಕಂಡು ।
ಶಿರಬಾಗಿ ಬಿದ್ದಡೆ ಕೈಗಳ ಮುಗಿಯಲು
ಕರುಣದುಂಬಿತು ಚಿಟ್ಟಿಗರಿಗೆ ॥ ೫೦

ಮುನ್ನ ನೀನಾರು ಈವೆಡೆಗೆ ತಂದನಾವ
ನಿನ್ನ ಕಾರಣವ ವಿಸ್ತರಿಸು ।
ತನ್ನೋವನುಳಿದೆಲ್ಲವ ಋಷಿಗಳ ಕೂಡ
ಬಿನ್ನವಿಸಿದ ನೃಪ ಕೇಳಾ ॥ ೫೧

ಅರಸನೆ ಕೇಳಾ ಅನ್ಯ ಕ್ಷೇತ್ರದಲ್ಲಿ ಗೈದಿರ್ದ
ದುರಿತಗಳು ಪುಣ್ಯ ಭೂಮಿಯಲಿ ।
ಪರಿಹರವಪ್ಪುವೆಂದಾ ಕಳಸ ಸಂಭವ
ಕರಜಾತರಿರ್ವರಾಡಿದರು ॥ ೫೨

ವರ್ಣಿಪೆನೇನ ಕೇಳರಸವೀ ಯಾಶ್ರಮ
ದುರ್ನರರಿಲ್ಲಿ ಪುಗಲಮ್ಮರು ಸು ।
ಪರ್ನನ ದೆಸೆಯಿಂದಲೀ ಸ್ಥಾನವ ಕಂಡೆ
ಜೀರ್ನವಪ್ಪುದು ನಿನ್ನ ಪಾಪ ॥ ೫೩

ವಿಸ್ತರಿಸುವೆವು ಕೇಳೆಮ್ಮ ಶ್ರೀ ಗುರು ಅ
ಗಸ್ತ್ಯ ನಿನ್ನೋವ ನೋಡಿದಡೆ ।
ಮಸ್ತಕ ಪಾದವೀ ದೇಹವು ಪಾವನ
ವಸ್ತುಗೈವನು ನಿಮುಷದಲಿ ॥ ೫೪

ಮುಳಿದೊಮ್ಮೆ ಮುನ್ನೀರ ನೀಂಟಿದ ಕುಡಿತೆಯಲಿ
ನೆಲನವ ಸಾರಕ್ಕೆ ಕುಳ್ಳಿರ್ದ ।
ಕುಲಮುನಿಗಳಿಗಧಿಕ ನಾಯಕನಾ ಮುನಿಯ
ಬಲುಪನಿನ್ನೇನ ವರ್ಣಿಪೆನು ॥ ೫೫

ರೇಣುಕಾಚಾರಿಯರಿಂದ ಷಡುಸ್ಥಲ
ಜ್ಞಾನೋಪದೇಶವ ಪಡೆದ ।
ಜಾಣ ನಮ್ಮಗಸ್ತ್ಯ ಗುರುವರನಂಘ್ರಿ
ಗಾಣಲಿರದು ನಿನ್ನ ಪಾಪ ॥ ೫೬

ಅಘಕುಲ ಗಿರಿ ವಜ್ರನಘ ತಿಮಿರಾರ್ಕನು
ಅಘಜಲನಿಧಿ ವಡಬಾಗ್ನಿ ।
ಅಘವಿಂಧ್ಯಾ ದಾವಾಗ್ನಿ ಕುಂಭ ಸಂಭವ ಮುನಿ
ಮೊಗವನೀಕ್ಷಿಸೆ ಮುಕ್ತಿಯಹುದು ॥ ೫೭

ಪುಸಿಯಲ್ಲ ಈ ನುಡಿ ಶಿವಯೋಗಿಗಳ ಸಂಗ
ದೆಸೆಯಿಂದ ಪಾವನಮಾದ ।
ಬೆಸಸುವೆವರಸ ಕೇಳ್ ನಿನಗೆ ಸಾಕ್ಷಿಯ ಮುನಿ
ಶಿಶುಗಳಾಡಿದರೊಲವಿಂದ ॥ ೫೮

ರೇಣುಕ ದೇವಿಯ ದೇಹದ ಕುಷ್ಠವ
ಸ್ಥಾಣು ಭಕ್ತರೊಲವಿನಲಿ ।
ಕ್ಷೋಣಿಯರಿಯೆ ಪಾವನಗೈದುದನಗಸ್ತ್ಯನ
ಪಾಣಿ ಸಂಭವರುಸುರಿದರು ॥ ೫೯

ಪೂತಾತ್ಮ ಮುನ್ನೋರ್ವ ಸನ್ಯಾಸಿಯಕ್ಷನೆಂ
ಬಾತನ ದಿಟ್ಟಿಂದಲೈದು ।
ಪ್ರೇತಗಳು ಪಡೆದವು ಸ್ವರ್ಗವೆಮ್ಮಯ ಗುರು
ನಾಥ ನಿನ್ನೋಡೆ ಪಾವನವು ॥ ೬೦

ಕೇಳರಸ ಮುನ್ನೋರ್ವನುದ್ಭಟ ಯೋಗಿಂದ್ರ
ಏಳ್ನೂರು ಭೂತಂಗಳೆಲ್ಲ ।
ಸಾಲೋಕ್ಯ ಪದವಕಂಡವು ನಮ್ಮ ಗುರುವಿಂದ
ಗಾಳಿ ತೀಡಲು ಪುಣ್ಯ ನಿನಗೆ ॥ ೬೧

ನಾಡಾಡಿ ಗುರುವಲ್ಲ ಕೇಳ್ ನಮ್ಮ ಗುರುವರನು
ನೋಡಲಪ್ಪುದು ಹರಲೋಕ ।
ಬೇಡಿದ ವರಗಳವೀವನೆಮ್ಮೈಯ್ಯನೆಂ
ದಾಡಿದರೆಳೆಯ ತಪಸಿಗಳು ॥ ೬೨

ಸ್ಥಾಣು ದೀಕ್ಷಿತ ಶಿವಮಂತ್ರ ಶರೀರಿಯು
ಪ್ರಾಣ ಲಿಂಗದ ಸಮ್ಮಂಧಿ ।
ಜಾಣ ನಮ್ಮ ಅಗಸ್ತ್ಯ ಮುನಿವರನಡಿಗಳ
ಗಾಣಲಿರ್ಪುದೆ ನಿನ್ನ ಪಾಪ ॥ ೬೩

ಹಿಮವಿರದುರಿಯಲ್ಲಿ ವಿಷವಿರದಮೃತದಿ
ತಮವಿರದಿನ ಕಿರಣದಲ್ಲಿ ।
ಯಮಿವರ ಕುಂಭ ಸಂಭವನಡಿಯಬ್ಜಕೆ
ನಮಿಸಲಿರದು ಜನ್ಮ ಮರುಳೆ ॥ ೬೪

ಸಬ್ಬಗೆಡಿಸದೆ ನಿನ್ನ ಮುನ್ನಿನಿಂದಧಿಕದ
ಶುಭದೊಳಿರಿಸುವನು ಯೆಮ್ಮಯ್ಯ ।
ಅಭಯವನಿತ್ತರಾ ಭೂಪಗೆ ಮುನಿ ಕುಲ
ಪ್ರಭುವಿನ ದೀಕ್ಷಿತರೊಲಿದು ॥ ೬೫

ಪಂಗುಳನಿಗೆ ಗಂಗೆ ಅಂಧಕನಾದಂಗೆ
ಕಂಗಳುದಿಸಿದಂತೆ ನಿಮ್ಮ ।
ಅಂಘ್ರಿಯ ಕಂಡೊಡೆ ಪೋದುದೆನ್ನ ಪಾಪ
ಭಂಗವಿಲ್ಲೆಂದನಾರಾಯ ॥ ೬೬

ಉರಿಯೊಳು ಜನಿಸಿದ ಕಿರಿದಪ್ಪ ದೀಪವು
ಪಿರಿದಾದ ತಮವನೋಡಿಸದೆ ।
ಗುರುಮುನಿ ಶಿಷ್ಯರು ಕರುಣದಿ ನೋಡಲು
ಹರಣಕಿಲ್ಲವು ನೋವೆನಗೆ ॥ ೬೭

ಸುರಪನ ಸಿರಿಗಾಗಿ ಗಿರಿಗೆ ಬೆನ್ನಾಂತನು
ಹರಿಕೂರ್ಮನಾಗಿ ಸವಿಷವ ।
ಧರಿಸುಳುಹಿದ ದಿವಿಜರು ನೀವೆನ್ನ
ಕರದೊಯಿದು ಮುನಿಯದೋರೆಂದ ॥ ೬೮

ಮೆಚ್ಚಿದರಾ ನಳ ನೀಲರೆಂಬ ಕುವರರು
ಇಚ್ಚೆಯ ಮೇಲಾತನನು ।
ಬೆಚ್ಚದೆ ಪಿಡಿಕೊಂಡು ಮನ್ನಿಸಿ ವೈದರು
ನೆಚ್ಚಿನ ಮುನಿ ಇದ್ದ ಬಳಿಗೆ ॥ ೬೯

ಅಂತು ಸಂಧಿ ೫ಕ್ಕಂ ಪದನು ೪೫೮ಕ್ಕಂ
ಮಂಗಳ ಮಹಾಶ್ರೀ

ಸಂಧಿ – ಆರು

ಕಣ್ಣಿಗೆ ಕಣ್ಣಾದರ ಕಣ್ಣುಳ್ಳವನೆ
ಕಣ್ಣಿಗೆ ಕಣ್ಣು ಮೆಚ್ಚಿತ್ತು ।
ಕಣ್ಣು ರವಿಗಯ್ಯ ಕಣ್ಣು ಛಾತ್ರನುತ
ಕಣ್ಣುನೀವನೆ ಸಲಹೆಮ್ಮ ॥ ೧

ಗ್ರಂಥ: ಕಸ್ತೂರಿ ಕಾತ್ಕಣ ಭುಜೋಮಟವೀ ಮೃಗಣಾಂ
ನಿಕ್ಷೇಪ್ರಿಯ ನಾಭಿ ಸೂ ಕುರತೇವ ಧರ್ಮಂ ।
ಮೂಢಾ ವಿಧಿ ದುರ್ಜನಲೋಲ ಜಿಹ್ವಾ
ಮೂಲೇವ ನಿಕ್ಷೆ ಚೇತ್ ಸಕಲೋಪಕಾರಕಃ ॥

ಆದಡೆ ದೇಶಿಕವರ ದಯದಿಂದಲಿ
ಬೋಧಿಸುತ್ತಿಹ ಶಿವ ಕಥೆಯ ।
ಓದದ ಕೇಳದ ಮಾನವ ಪಾಪಿಯು
ಆದ ನಿಂದಿಸ ಸಲ್ಲದೆಂದ ॥ ೨

ಸುದತಿಯರೆವ್ವನದಂತೆಳ ಮಕ್ಕಳ
ತೊದಳೊಂದಿದ ನುಡಿಯಂತೆ ।
ವಿಧು ದೀಪ್ತಿಯಂತೆ ಕೋಮಳ ಬನದೊಲು ನಿಮ್ಮ
ಮೃದು ನುಡಿ ಕಥೆಯ ಪೇಳೆಂದ ॥ ೩

ಉಡುವರನ ಜಡೆ ಮುಡಿ ಎಡೆ ಧರಿಸಿದ
ತೊಡೆಯ ಮೇಲಂಬಿಕೆ ಎಡದ ।
ದಡಿಗಸುರರ ಶಿರ ಮಾಲೆಗಳಿಲ್ಲದ
ಮೃಡನೊಲು ಅಗಸ್ತ್ಯನೊಪ್ಪಿರ್ದ ॥ ೪

ತಂದೆವು ಗುರು ಮುನಿರಾಯ ಚಿತ್ತೈಸೆಂದು
ಮುಂದಿಟ್ಟು ಶಿಷ್ಯರೊಂದಿಸಲು ।

ಚಂದವಳಿದು ದೇಹ ಗಂಪಿನೊಳಿರೆ ಕಂಡು
ನೊಂದ ನೃಪನ ಕೇಳ್ದ ಮುನಿಯು ॥ ೬

ಎಲವೊ ನೀನಾರು ನಿನ್ನ ಪೆಸರೇನು ನೀನಿರ್ಪ
ಪೊಳಲಾವುದು ಇಲ್ಲಿಗೈ ತಂದು ।
ಕಳುಪಿದರಾರು ನಿನ್ನ ಪೇಳೆಂಬುತಾ ಮುನಿ
ನೆಲೆಯ ಭೂಪನ ಬೆಸಗೊಂಡ ॥ ೭

ದಂದುಗ ಶರಧಿಗೆ ವಡಬಾಗ್ನಿಯು ಐದು
ಇಂದ್ರಿಯಂಗಳ ಗುಣವಳಿದ ।
ಕಂದರ್ಪ ರಿಪು ಜ್ಞಾನಿ ಮುನಿವರನಡಿಯಬ್ಜ
ಕೊಂದಿಸಿ ನೃಪ ಕಯ್ಯ ಮುಗಿದು ॥ ೮

ಚಿತ್ತೈಸು ಸತ್ಯದ ಸಾಗರ ರೂಪನೆ
ಚಿತ್ತೈಸು ಮುಕ್ತಿದಾಯಕನೆ ।
ಚಿತ್ತೈಸು ಶರಣಾಗತ ವಜ್ರ ಪಂಜರ
ಚಿತ್ತೈಸು ಎನ್ನ ಬಿನ್ನಪವ ॥ ೯

ತುಂಬಿಯ ಸಂಸರ್ಗದಿಂದ ಗೋಮಯ ದುರುಳಿ
ಬೆಂಬಿಡದೊಯಿವ ಕೀಟಕನು ।
ಶಾಂಭವೀಶನ ಕಂಡು ಮುಕ್ತಿಯ ವಡೆದೊಲು
ನಾಂಬಂದು ನಿಮ್ಮುವ ಕಂಡೆ ॥ ೧೦

ವಾರಿರುಹಕೆ ರವಿ ತನುಭವನಿಗೆ ಮಾತೆ
ದಾರಿದ್ರನಿಗೆ ಕಡವರವು ।
ಸಾರುವಂದದಿ ನಿಮ್ಮ ಚರಣಾರವಿಂದವ
ದೋರೆನ್ನ ಸಲಹಿದಿರೆಂದ ॥ ೧೧

ಆಚಾರ ಸಂಪನ್ನ ಮುನಿಪಾದದೆಡೆಗೆ ತಾ
ಚಾಚಿದ ತನ್ನಯ ಶಿರವ ।
ಸೂಚನೆ ಗಂಡೆತಿ ಏಳೆಂದು ಕೇಳಿದ
ನಾಚದೆ ಪೇಳು ನಿನ್ನ ನೋವ ॥ ೧೨

ಕುಷ್ಠವೇಕಾಯಿತು ಕಾಡಿಗೇತಕೆ ಬಂದೆ
ನಷ್ಟನೇಕಾದಿ ಭಾಗ್ಯದಲಿ ।

ಕಷ್ಟವಟ್ಟುದ ಮುನಿ ಪೇಳೆನೆ ಕಂಬನಿ
ಬೆಟ್ಟಾಡಿದವು ರಾಯಗಾಗ ॥ ೧೩

ತಾಪಸೋತ್ತಮ ಕೇಳು ಮಂಗಳ ಪುರವೆಂಬು
ದಾ ಪೊಳಲು ಎನ್ನರಮನಿಯು ।
ಭೂಪನಾಗಿರ್ದೆನಾ ದೇಶಕ್ಕೆ ಇರಲೊಂದು
ಪಾಪ ಸಂಧಿಸಿತೆನಗೆಂದ ॥ ೧೪

ಆಡಿತಪ್ಪದ ವೀರ ಪರವಧುಗಳ ಕಂಡು
ಗೂಡದ ವೀರ ಮಾಗಧರು ।
ಬೇಡಲು ದಣಿಯದೀವ ವೀರಸೇನನೆಂದು
ನಾಡ ಸುತ್ತಿಪ್ಪುದೆನ್ನ ವೆಸರು ॥ ೧೫

ಋಷಿರಾಯ ಕೇಳಿನ್ನು ಜಸದಿಂದ ಸಿರಿಯಿಂದ
ವಸನದಿಂದ ಬಲ ಭೋಗದಿಂದ ।
ಎಸೆವ ರಾಯರಿಗೆಲ್ಲ ನೊಸಲ ತಿಲಕವೆಂಬ
ಪೆಸರ್ವೆತ್ತು ನಾ ಬಾಳುತಿರಲು ॥ ೧೬

ಏನೆಂಬೆ ಮುನಿ ಕೇಳು ಇರಲೊಂದು ದಿವಸ
ಮಾನಿನಿ ಬನ ನೋಡಲಲ್ಲಿ ಆ ।
ಜ್ಞಾನ ಶೇಖರನೆಂಬ ಋಷಿಗಂಡು ದಯದಿಂದ
ತಾನಿಟ್ಟ ಸತಿಗೆ ಭಸ್ಮವನು ॥ ೧೭

ಯಮಿರಾಯ ಪರಸಿಟ್ಟ ಭಸಿತವ ಧರಿಸೆನ್ನ
ರಮಣಿ ಬಂದಿರಲು ಅರಮನೆಗೆ ।
ಕುಮುದಾಕ್ಷಿ ಫಣೆ ಭೂತಿಯ ಕಂಡುಪ್ಪು ವೆಂಕಿಲಿ
ಸಮನಿಸಿದೊಲಾಯಿತೆಂದ ॥ ೧೮

ತನ್ನಣುಗನ ತಪ್ಪ ತನ್ನೂರ ಸಿರಿಯ
ತನ್ನ ಸತ್ಸಂಗದ ಸತಿಯ ।
ಇನ್ನು ಕೇಳು ಮುನಿರಾಯ ಇವರ ಕಂಡು ನರರು ಸಾ
ಮಾನ್ಯ ಮಾಳ್ಪರು ದಿಟವೆಂದ ॥ ೧೯

ಒಡೆಯ ಕೇಳಿನ್ನು ಕಡಮೆ ಭಾಗ್ಯಕೆ ಬರೆ
ಸಿಡಿವಡಿಯರು ಎನ್ನ ಸಮ ।

ಒಡನೆದ್ದು ಕೋಪದಿ ಮಡದಿಯ ಫಣೆ ಮುಟ್ಟಿ
ದೊಡೆದೆನಾ ಭಸಿತವನೆಂದ ॥ ೨೦

ನೀ ಪೂಸುವರೆ ಗಂಧ ಕಸ್ತೂರಿ ಮೇಣಿಲ್ಲವೆ
ಈ ಫಣೆಗೇಕೆ ಬೂದೆಂದು ।
ಕೋಪೆದ್ದು ವಳಿಯಲಾ ಪಾಪೆನ್ನ ದೇಹವ
ಲೇಪವಾದುದು ಮುನಿ ಕೇಳಾ ॥ ೨೧

ಮೂಢ ನಾದೆಲ್ಲರಸ ಭಸಿತವ ಶಿವನೆಂದು
ನೋಡದೆ ನೀನಳಿಯಲಹುದೆ ।
ಗೇಡಗ್ಯೆದೆ ನಿನ್ನ ಜೀವಕ್ಕೆ ನೀನೆಂದು
ಆಡಲಾ ಮುನಿಗಿಂತೆಂದ ॥ ೨೨

ಕೂಡನೆ ಪರಸತಿಯಳನಿಂದ್ರ
ನಾಡನೆ ಧರ್ಮಸುತನಾಗ ।
ನೋಡಲು ಜನರಾಗಮ ಬುದ್ಧಿ ಮರೆವರು
ಗೇಡು ಬರಲಾವ ಹಿರಿಯರು ॥ ೨೩

ಗುರುಸತಿಗಳುಪನೆ ಸರಸಿಜರಿಪು ಬ್ರಹ್ಮ
ಶಿರವನೀಗನೆ ಗರ್ವದಿಂದ ।
ಕುರಿದಲೆಯಾಗದೆ ದಕ್ಷಗೆ ಬುದ್ಧಿಯ
ಮರೆವರು ಗೇಡು ಸಂಭವಿಸೆ ॥ ೨೪

ಆಸೆಯನಿಡನೆ ವಿಕ್ರಮ ಕಾಸಿಗೆ ವನ
ವಾಸವಾಗದೆ ಪಾಂಡವರಿಗೆ ।
ದೇಸಿಗನಾಗನೆ ಹರಿಶ್ಚಂದ್ರ ಕೇಳು ಮು
ನೀಶ ವಿಧಿಯ ಮೀರಲಹುದೆ ॥ ೨೫

ಹರ ರೂಪೆ ಭಸಿತವೆಂಬುದ ನಿನಗೆ ಮುನ್ನವೆ
ಪಿರಿಯರು ತಿಳಿಯ ಪೇಳಿರ್ದಡೆ ।
ಒರಸುವ ದುರ್ನೀತಿ ನಿನಗಪ್ಪುದೆ ಯೆಂದು
ಅರಸಿಗಾಡಿದನಾ ಮುನಿಯು ॥ ೨೬

ಕರಿಯನಂಕುಶದಲ್ಲಿ ವಾಘಿಂದ ವಾರುವ
ಹರಿಸರ್ಪ ಭೂತ ಮಂತ್ರದಿ ।

ಕಷ್ಟವಟ್ಟುದ ಮುನಿ ಪೇಳೆನೆ ಕಂಬನಿ
ಬೆಟ್ಟಾಡಿದವು ರಾಯಗಾಗ ॥ ೧೩

ತಾಪಸೋತ್ತಮ ಕೇಳು ಮಂಗಳ ಪುರವೆಂಬು
ದಾ ಪೊಳಲು ಎನ್ನರಮನಿಯು ।
ಭೂಪನಾಗಿರ್ದೆನಾ ದೇಶಕ್ಕೆ ಇರಲೊಂದು
ಪಾಪ ಸಂಧಿಸಿತೆನಗೆಂದ ॥ ೧೪

ಆಡಿತಪ್ಪದ ವೀರ ಪರವಧುಗಳ ಕಂಡು
ಗೂಡದ ವೀರ ಮಾಗಧರು ।
ಬೇಡಲು ದಣಿಯದೀವ ವೀರಸೇನನೆಂದು
ನಾಡ ಸುತ್ತಿಪ್ಪುದೆನ್ನ ವೆಸರು ॥ ೧೫

ಋಷಿರಾಯ ಕೇಳಿನ್ನು ಜಸದಿಂದ ಸಿರಿಯಿಂದ
ವಸನದಿಂದ ಬಲ ಭೋಗದಿಂದ ।
ಎಸೆವ ರಾಯರಿಗೆಲ್ಲ ನೊಸಲ ತಿಲಕವೆಂಬ
ಪೆಸರ್ವೆತ್ತು ನಾ ಬಾಳುತಿರಲು ॥ ೧೬

ಏನೆಂಬೆ ಮುನಿ ಕೇಳು ಇರಲೊಂದು ದಿವಸ
ಮಾನಿನಿ ಬನ ನೋಡಲಲ್ಲಿ ಆ ।
ಜ್ಞಾನ ಶೇಖರನೆಂಬ ಋಷಿಗಂಡು ದಯದಿಂದ
ತಾನಿಟ್ಟ ಸತಿಗೆ ಭಸ್ಮವನು ॥ ೧೭

ಯಮಿರಾಯ ಪರಸಿಟ್ಟ ಭಸಿತವ ಧರಿಸೆನ್ನ
ರಮಣಿ ಬಂದಿರಲು ಅರಮನೆಗೆ ।
ಕುಮುದಾಕ್ಷಿ ಫಣೆ ಭೂತಿಯ ಕಂಡುಪ್ಪು ವೆಂಕಿಲಿ
ಸಮನಿಸಿದೊಲಾಯಿತೆಂದ ॥ ೧೮

ತನ್ನಣುಗನ ತಪ್ಪ ತನ್ನೂರ ಸಿರಿಯ
ತನ್ನ ಸತ್ಸಂಗದ ಸತಿಯ ।
ಇನ್ನು ಕೇಳು ಮುನಿರಾಯ ಇವರ ಕಂಡು ನರರು ಸಾ
ಮಾನ್ಯ ಮಾಳ್ಪರು ದಿಟವೆಂದ ॥ ೧೯

ಒಡೆಯ ಕೇಳಿನ್ನು ಕಡಮೆ ಭಾಗ್ಯಕೆ ಬರೆ
ಸಿಡಿವಡಿಯರು ಎನ್ನ ಸಮ ।

ಒಡನೆದ್ದು ಕೋಪದಿ ಮಡದಿಯ ಫಣೆ ಮುಟ್ಟಿ
ದೊಡೆದೆನಾ ಭಸಿತವನೆಂದ ॥ ೨೦

ನೀ ಪೂಸುವರೆ ಗಂಧ ಕಸ್ತೂರಿ ಮೇಣಿಲ್ಲವೆ
ಈ ಫಣೆಗೇಕೆ ಬೂದೆಂದು ।
ಕೋಪೆದ್ದು ವಳಿಯಲಾ ಪಾಪೆನ್ನ ದೇಹವ
ಲೇಪವಾದುದು ಮುನಿ ಕೇಳಾ ॥ ೨೧

ಮೂಢ ನಾದೆಲ್ಲರಸ ಭಸಿತವ ಶಿವನೆಂದು
ನೋಡದೆ ನೀನಳಿಯಲಹುದೆ ।
ಗೇಡಗೈದೆ ನಿನ್ನ ಜೀವಕ್ಕೆ ನೀನೆಂದು
ಆಡಲಾ ಮುನಿಗಿಂತೆಂದ ॥ ೨೨

ಕೂಡನೆ ಪರಸತಿಯಳನಿಂದ್ರ
ನಾಡನೆ ಧರ್ಮಸುತನಾಗ ।
ನೋಡಲು ಜನರಾಗಮ ಬುದ್ಧಿ ಮರೆವರು
ಗೇಡು ಬರಲಾವ ಹಿರಿಯರು ॥ ೨೩

ಗುರುಸತಿಗಳುಪನೆ ಸರಸಿಜರಿಪು ಬ್ರಹ್ಮ
ಶಿರವನೀಗನೆ ಗರ್ವದಿಂದ ।
ಕುರಿದಲೆಯಾಗದೆ ದಕ್ಷಗೆ ಬುದ್ಧಿಯ
ಮರೆವರು ಗೇಡು ಸಂಭವಿಸೆ ॥ ೨೪

ಆಸೆಯನಿಡನೆ ವಿಕ್ರಮ ಕಾಸಿಗೆ ವನ
ವಾಸವಾಗದೆ ಪಾಂಡವರಿಗೆ ।
ದೇಸಿಗನಾಗನೆ ಹರಿಶ್ಚಂದ್ರ ಕೇಳು ಮು
ನೀಶ ವಿಧಿಯ ಮೀರಲಹುದೆ ॥ ೨೫

ಹರ ರೂಪೆ ಭಸಿತವೆಂಬುದ ನಿನಗೆ ಮುನ್ನವೆ
ಪಿರಿಯರು ತಿಳಿಯ ಪೇಳಿರ್ದಡೆ ।
ಒರಸುವ ದುರ್ನೀತಿ ನಿನಗಪ್ಪುದೆ ಯೆಂದು
ಅರಸಿಗಾಡಿದನಾ ಮುನಿಯು ॥ ೩೬

ಕರಿಯನಂಕುಶದಲ್ಲಿ ವಾಘಿಂದ ವಾರುವ
ಹರಿಸರ್ಪ ಭೂತ ಮಂತ್ರದಿ ।

ಗುರುರಾಯ ಕೇಳಿದ ತಿದ್ದಬಹುದು ಮೂರ್ಖ
ನರರಿಗಿಲ್ಲ ಶುದ್ಧಿ ಎಂದ ॥ ೨೭

ಮದ್ದುಂಟು ಉನ್ಮತ್ತ ಜ್ವರ ಶೀತ ವಾತಕ್ಕೆ
ಮದ್ದಿಲ್ಲವರೆಮರುಳರಿಗೆ ।
ಮದ್ದಿಲ್ಲ ಕಾಮುಕ ವಿತ್ತ ಮತ್ತರಿಗೆ ಜ್ಞಾನ
ಶುದ್ಧಿ ಎಂಬುದು ಮುನ್ನಿಲ್ಲ ॥ ೨೮

ಬಗ್ಗಿನ ಮದದಿಂದ ಮುನಿ ಕೇಳು ಗಣ್ಣಿಗೆ
ವೆಗ್ಗಳ ತಾಮಸದೋರಿ ।
ಭರ್ಗನೀ ಭಸಿತವೆಂಬುದ ಗಾಣಲರಿಯದೆ
ಎಗ್ಗನಾದೆನು ಲೋಕದಲ್ಲಿ ॥ ೨೯

ಅಗುಲಾಡಿಸಾಡುವ ತಗುಲಿಸಿಕೊಂಬೊಲು
ಜಗದ ನಾಣ್ನುಡಿ ಎನಗಾಯ್ತು ।
ಬಗೆಕಾಣದಾ ಭೂತಿಯನಳಿದ ಕಾರಣದಿಂದ
ನಗೆಗೀಡಾದೆ ಯತಿಯೆ ಕೇಳ ॥ ೩೦

ಕೇಳಾದ ಚಂದಕೆ ಕಾಲ ಸಂಧಿಸ್ತೆ ತಾನೆ
ಬೀಳುವ ತಾಮಸನಂತೆ ।
ಭಾಳದ ಭಸ್ಮವ ಕೇಳದೆ ತೊಡದಲ್ಲಿ
ಕಾಳಿನೊಳಗೆ ಬಿದ್ದೆನೆಂದ ॥ ೩೧

ಶಿಶು ಹತ್ಯೆ ಬ್ರಹ್ಮಹತ್ಯವು ಭ್ರೂಣಹತ್ಯವು
ಪಶುಹತ್ಯ ಅಶ್ವಹತ್ಯಗಳು ।
ಋಷಿರಾಯ ಕೇಳೊಂದು ಕೋಟಿ ಮಾಡಿದ ಪಾಪ
ಮಸಗಿತೆನಗೆ ಭಸ್ಮವನಳಿಯೆ ॥ ೩೨

ಈ ಪಾಪದಿಂದೆನ್ನ ದೇಹದ ಕವಚವು
ಲೋಪವಾಗಿಯು ಬಸಿಗುಷ್ಠ ।
ಅಪಾದತಳ ಮಸ್ತಕ ಮೊದಲಾಗಿರ್ದು
ಲೇಪಿಸಿತೆಲ್ಲವಂಗವನು ॥ ೩೩

ಅಂಗದ ಚರ್ಮವು ಸುಲಿದೆಲ್ಲ ಕೆನ್ನೀರು
ಜಂಗಲೊಡೆದು ಒಸರುತಲಿ ।

ಭಂಗವಟ್ಟು ಲೋಕದಲ್ಲಿರಬಾರದೆಂದು
ಅಂಗವಿಸಿತು ಮನ ಬನವ ॥ ೩೪

ಏಳಿಲವಾಗಿಲ್ಲಿ ಬಾಳುವದೇನೆಂದು
ತಾಳಿತು ಮನ ಚಂಡಿತನವ ।
ಕಾಳುಗತ್ತಲಿನೋರ್ವನೆ ಕಷ್ಟವಟ್ಟೈತಂದೆ
ಕೇಳು ಮುನೀಶ ಕಾನನಕೆ ॥ ೩೫

ಉಪ್ಪರ ಮಂಚದ ಮೇಲೆ ಪಾಸಿದ ಹಂಸೆ
ದುಪ್ಪಳದಲ್ಲಿ ಪವಡಿಸುವ ।
ಒಪ್ಪಾದ ದೇಹಕೆ ಕಷ್ಟವಾದುದ ಕೇಳ
ದೊಪ್ಪಲ ಮೇಲೊರಗಿರ್ದೆ ॥ ೩೬

ಅಕ್ಕಟ ಕೆಟ್ಟು ಕಾನನವ ಸಾರಿದಡಾಗ
ಉಕ್ಕಿತು ದುಃಖ ಒಡಲಿಂದ ।
ಫಕ್ಕನೆ ರಾಯನ ಕಣ್ಣಿಂದಲುದಕವು
ಒಕ್ಕವು ಮುನಿಯಿದಿರಿನಲಿ ॥ ೩೭

ಪೊಡವಿಪ ತನ್ನ ಕಣ್ಣುದಕವ ಬೆರಳಿನಿಂದ
ತೊಡವುತ ತನಗೆ ಮುನ್ನಾದ ।
ಎಡರನೆಲ್ಲವ ಪೇಳೆ ಕುಂಭ ಸಂಭವ ಮುನಿ
ಒಡನೆ ಕೇಳೆಂದನಾ ಸುತಗೆ ॥ ೩೮

ನಾರುವ ದೇಹಕ್ಕೆ ಊರುವ ಕಟ್ಟಿರುವೆ
ಪಾರುವ ನೊಣ ಮುತ್ತಿ ರಕ್ತ ।
ಸೋರುವ ಮಾಂಸೊಡೆದು ದೋರುವ ಮೈಯಿಂದ
ಆರರಿಯದೊಂದೆಡೆಯಲಿರ್ದೆ ॥ ೩೯

ರೂಪಳಿದು ಪಾಪದಲಿ ಬಾಳ್ವುದು ವಯಿರಿ
ಯಾಪರಿಗೆ ವೇಡವೆಂದ ರಾಯ ।
ಆಪತ್ತು ತನಗಾದುದೆಲ್ಲವ ಕೇಳು ನೀ
ತಾಪಸೋತ್ತಮನೆಂದ ಮಗನೆ ॥ ೪೦

ಪೇಳುವೆನೇನ ಸುಧರ್ಮ ಮುನಿಯೇ ಕೇಳು
ಪಾಳುವನೆಯ ದೀಪದಂತೆ ।

ಬಾಳುತ ಬಿದ್ದಿರಲಾ ಬನದೊಳಗೊಂದು
ಸಾಳುವ ಕಂಡಿತೆನ್ನುವನು ॥ ೪೧

ಸಾಸಿರಗಣ್ಣನಾಗಲಿ ಅಜನಾಗಲಿ ಆ
ಕೇಶವನಾದಡಾಗಲಿಯು ।
ಈಶನಾದಡೆ ಫಣೆಯಲ್ಲಿ ಬರೆದಿರ್ದುದಂ
ನಾಶ ಗೈವನೆ ಮುನಿ ಕೇಳು ॥ ೪೨

ನೋವಿಂದ ಗೂಡಾಗಿ ಬಿದ್ದಿರ್ದಡೆ ತಾಮಸ
ತೀವಿ ಕಣ್ಣೆರಡ ಮುಚ್ಚಿರಲು ।
ಪಾವಿನ ಪಗೆ ಕಂಡು ಪಲಲವೆಂದೆರಗಿತು
ದೇವ ಮುನೀಶ ಕೇಳೆನಗೆ ॥ ೪೩

ಪಸಿದಂಗೆ ಕೋಪದೊಳಿರ್ದಂಗೆ ಪೆಣ್ಣಿನ
ವ್ಯಸನದೊಳಿರ್ಪರಿಗರಿವು ।
ಪುಸಿಯಲ್ಲ ಸಾಮಾನ್ಯವಪ್ಪುದೆಂದಾರಾಯ
ಋಷಿನಾಥನೊಡನುಸುರಿದನು ॥ ೪೪

ಆನೆ ತುರಗ ಸುತ ಸತಿ ಧನ ಧಾನ್ಯವು
ಹಾನಿಯಾದರೆ ತಾಳಬಹುದು ।
ಏನೆಂಬೆ ಕುಂಭಜ ಮುನಿಗೇಳು ದೇಹಾಭಿ
ಮಾನವ ಬಿಟ್ಟಿರ್ಪುದು ಕಷ್ಟ ॥ ೪೫

ತಾವರೆ ನಾಭಗೆ ಧ್ವಜವಾದುದಾ ಪಕ್ಕಿ
ದೇವನ ಮುಖದಿಂದಲೆನಗೆ ।
ಸಾವು ಬಂದಡೆ ಪುಣ್ಯವೆಂದರಿದು ಮನದಲ್ಲಿ
ತಾವೊದರದೆ ಸುಮ್ಮನಿರ್ದೆ ॥ ೪೬

ಜಂಭಾರಿಯ ಬಿಳಿಯಾನೆಗೋಸುಗ ಪಾರ್ಥ
ನಂಬಿನ ತುದಿಗೆ ವಾಲಿಯನು ।
ಬೆಂಬಿಡದೆ ಕಟ್ಟೆಸೆದೊಲು ಪಕ್ಕಿ ಪಾರಿತು
ಅಂಬರದೆಡೆಗೆನ್ನ ಕೊಂಡು ॥ ೪೭

ಆರಿಂದಲೆನ್ನ ದೋಷ ಪರಿವುದೆಂದಾ ಪಕ್ಕಿ
ಸೂರಿ ಜನ ಕೇಳ ಪೋಪಂತೆ ।

ಏರುಷಿವರ ಕೇಳು ಎನ್ನುವ ಪಿಡಿಕೊಂಡು
ಪಾರಿತು ಬಾನುವಿನೆಡೆಗೆ ॥ ೪೮

ಆಗಸ ಗಂಗೆಯ ದೋರುವ ವೊಲು ಎನ್ನ
ನಾಗರ ಪಗೆ ಪಿಡಿಕೊಂಡು ।
ನಾಗಗನದಲಿ ಒಯ್ಯಲು ಮಗುಳೊಂದು ಪೆರ್ವಕ್ಕಿ
ಗೂಗುತ ವಂದುದಂಡಿಂದ ॥ ೪೯

ದುತ್ತಿನ ಭಾಗ್ಯವ ಗಂಡವರಿಲ್ಲೆಂಬಂತೆ
ಮತ್ತೀ ಲೋಕದ ನಾಣ್ಣುಡಿಯು ।
ತಥ್ಯವಾದುದು ಕೇಳು ಮುನಿರಾಯ ಎನ್ನನು
ಮಿತ್ತಿನೋಲದು ಬೇಡಿತೆಂದ ॥ ೫೦

ದಾನವ ವೈರಿಯ ವೈಕುಂಠದಲ್ಲಿಟ್ಟು
ಆನಗ ಕೊಯ್ಯಿತ್ತು ಪಸಿದು ।
ತಾನೆಯಿದಿ ಬಂದೊಲು ದೋರಿತು ಮುನಿಗೇಳು
ಬಾನೆಡೆಗೆ ಖಗರಾಜನಂದು ॥ ೫೧

ಪಾರಮಾರ್ಥಿಕ ಕೇಳಾ ವ್ಯೋಮದೆಡೆಯ ಹೆ
ಮ್ಮಾರಿಯಂತದು ಹೆಬ್ಬಕ್ಕಿ ।
ಸಾರೆನ್ನನೊಯಿವುದ ಕಂಡಡ್ಡನಿಂದುದು
ದೋರಿತು ತನ್ನ ಸಾಹಸವ ॥ ೫೨

ಬತ್ತಿತು ಫಣಿಗಳ ಧೈರ್ಯ ವಾರುಧಿ
ಪತ್ತಿದವು ಖಗಕುಲ ನೆಲನ ।
ಸುತ್ತಲೆಣ್ದೆಸೆ ಗದಗಂಪಿಸುವಂತೊದ
ರುತ್ತ ವಂದುದು ಸಾಳುವನೆಂದ ॥ ೫೩

ಎದೆಯಲಿ ಇಂದ್ರನಾಯುಧದಂತೆ ಮೂಗಿನ
ತುದಿ ಶೂಲಿಯಾಯುಧದಂತೆ ।
ಕೆದರುವ ಕಾಲುಗುರು ಪುಲಿ ನಖದಂತಿರ್ಪ
ಕದನಕಮ್ಮದು ಪೆಣ್ಣುವಕ್ಕಿ ॥ ೫೪

ಒಡೆಯನೆ ಕೇಳಾವ ಕಡೆಯಿಂದ ಬಂದುದು
ಕಡುಗಲಿ ಸಾಳುವನೆನ್ನ ।

ಪಿಡಿದೆತ್ತಿ ಪಾಯಲು ಪದ್ದುರಗನೊಯಿವಂತೆ
ವಿಡುಕದುದೇನ ಪೇಳುವೆನು ॥ ೫೫

ಝಲ್ಲಿಸಿ ದೂಗುತ ವಯ್ಯಲಾ ಖಗವರ
ಅಲ್ಲಿರುವುದು ದೇಹನೊಂದು ।
ದುಳ್ಳುರಿಯಂತೆ ಸೂರಿಜನ ರೊಚ್ಚಿಗಳಿಂದ
ತಲ್ಲಣಗೊಂಬುದೆನ್ನ ಮನ ॥ ೫೬

ಮೆಲ್ಲನೆ ನರಳಿದಡೀ ಪಕ್ಕಿ ಎನ್ನನು
ಕೊಲ್ಲದಿನ್ನಾ ವೆಡೆಯಲಿಯಿಟ್ಟು ।
ಒಲ್ಲದೆ ಪೋಪುದೀ ಜನ್ಮ ಗಳೆಯಲೆಂದು
ಪಲ್ಲ ಗಚ್ಚಿದೆ ನೋವ ನುಂಗಿ ॥ ೫೭

ಯತಿ ವರನೆ ಕೇಳು ನಿಮ್ಮಡಿಯಬ್ಜ ಗಾಣ್ಬೊಂದು
ಗತಿ ಎನಗಿಪ್ಪ ಕಾರಣವು ।
ಮಥನಿಸಿ ಖಗಗಳಾಡುವ ಮಾತು ಮನಕರಿವ
ಮತಿ ದೋರ್ಪುದೆನಗೆಂದಾ ಭೂಪ ॥ ೫೮

ರಟ್ಟೆರಡ ಬೀಸುತ ಸಿಟ್ಟಿಲಿ ಸಾಳುವ
ನೆಟ್ಟಡ್ಡ ನಿಂದೊದರಿತು ।
ಕೊಟ್ಟು ಪೋಗಲ್ಲವೆ ಕದನಕ್ಕೆ ನಿಲ್ಲು ನಿನ್ನ
ಬಿಟ್ಟಡೆ ನಾ ಖಗ ವರನೆ ॥ ೫೯

ಅಂತರಿಸೆಲೆ ಹಂದೆ ಪೆಣ್ಣಕ್ಕಿ ನೀನೀ
ಕಾಂತಾರದೊಳಗಾವ ಮಿಗವ ।
ಸೀಂತ್ಕರಿಸಿ ತಂದುದೀ ಪಿಸಿತವು ನಿನಗಿ
ಪ್ಪಂತೆ ಎಲ್ಲಿಹದು ನಾನರಿಯೇ ॥ ೬೦

ಬಾರದ ಬೇಂಟೆಯ ಬಾಯೊಳು ಕಚ್ಚೀಗ
ದೂರದೊಳ್ಳೈತಂದ ಪಕ್ಕಿ ।
ಪೋರುವಡೆನ್ನೊಳು ನೆರೆಯದು ನಿನ್ನಯ
ಬೀರವಿನ್ನಗುಳು ಮಾಂಸವನು ॥ ೬೧

ದೂರೆಡೆಗೇಳುತ ಪಾರುವ ಪೆಣ್ವಕ್ಕಿ ವಿ
ಚಾರ ಗಂಡಿತು ಮನದಲ್ಲಿ ।

ಶೂರ ತನಕೆ ಹಾನಿ ಬಾಯ ಗುಟುಕ ನೀಯೇ
ದೋರಿಪೆನಿದಕೆ ಸಾಹಸವ ॥ ೬೨

ಸಾಲುವ ಕೇಳು ನಿನ್ನ ಬೇಳಿಲಗ್ಯೆದೀಗ
ಕಾಳಗವನು ತುಡುಕಿದಡೆ ।
ಕೀಳುವೆ ನಿನ್ನೆರಡು ದೋಳನೆಂಬುತ ಪಕ್ಕಿ
ಘೊಳ್ಳನೆ ಪಲ್ಮೊರೆಯಿತು ॥ ೬೩

ಕಿಡಿ ಸ್ವಲ್ಪವಾದಡೇನಡವಿಯ ಸುಡುವುದು
ಬಡ ಪೆಣ್ಣುವಕ್ಕಿ ನಾನಲ್ಲ ।
ಗಡುಗಲಿತನವನು ತುಡುಕಿ ಕೊಂಬೆ ನೋಡೆಂದು
ನುಡಿದುದು ಖಗ ಮುನಿ ಕೇಳೆಂದ ॥ ೬೪

ನಾಗವ್ಯೆರಿಗಳಾ ಎರಡು ಗೂಡಿಯು
ಗೂಗೆಯ ಕೊಲು ಪೊಯ್ವಂತೆ ।
ಮೂಗು ಮೂಗಿಂದ ಗಾಳಗವಾಡುತಿರ್ಪುದ
ಯೋಗಿಂದ್ರ ವಣ್ಣಿಪುದೇನ ॥ ೬೫

ಪೋದೊಲು ಮಾಳ್ಪುದು ಮರಳಡ್ಡನಿಲುವುದು
ಮೂದಲಿಸಿ ವೇಂಟೆ ಬೇಡುವುದು ।
ಕಾದೆಂದು ಕರೆವ ಸಾಳ್ವನ ಪೆಣ್ಣು ಖಗ ಕಂಡು
ಪಾದ ದೊಡಿಸುವುದೆಡ ಬಲಕೆ ॥ ೬೬

ಪೆಣ್ಣಿನ್ನ ವೆರಡಕ್ಕೆ ಮನಗೊಟ್ಟ ಪ್ರಾಣಿಗೆ
ಮುನ್ನಿನ ಲಜ್ಜಿನಿತುಂಟೆ ।
ಈ ನೀತಿ ಪುಸಿಯಲ್ಲ ಖಗ ರಾಜನ ನೋಡಿ
ಕಣ್ಣುಗೆಟ್ಟೊಲು ಸುತ್ತುತಿಹುದು ॥ ೬೭

ಸೀತೆಯ ರಾವಳನೊಯ್ಯಲು ಮುನ್ನುರಗಾ
ರಾತಿಯಡ್ಡಾಗೆಡರುಗೆಯ್ಯೆ ।
ಭೂತಳವರಿಯಲು ಕಡಿವಡೆದುದು ನಿಮ್ಮ
ರೀತಿಯನುಳಿದು ನೀ ಮರಳು ॥ ೬೮

ಬಾಯ ವಾಸನೆಗಾರದವ ಮರದೊಂದು ಬಿ
ನಾಯವನೊಮ್ಮೆ ಕೇಳುವನೆ ।

ನೋಯಿಸೆ ನಾ ನಿನ್ನ ಬಳಿಕ ಖಗ ಕುಲವರ
ನಾಯಕ ಮೊಗದೋರಬಹುದೆ ॥ ೬೯

ಹೆಕ್ಕಳವಾತು ನಿನಗೆ ಸಲ್ಲದೆಲೆ ಪೆಣ್ಣು
ವಕ್ಕಿ ನೀಕಾದಿ ಪೋಗುವಡೆ ।
ದಿಕ್ಕಾವುದು ನಿನ್ನ ಒಳಕೊಂಬುದಿಲ್ಲೆಂದು
ಸೊಕ್ಕಿ ಸಾಳುವ ನಿಂದಿತಡ್ಡ ॥ ೭೦

ಗಾಳಿಗಿದಿರು ತೃಣ ಮಲೆವುದೆ ನೀ ನಿನ್ನ
ಆಳುತನಕೆ ಎಣೆಯಿಲ್ಲ ।
ಸಾಳುವ ನಿನ್ನಸುವನುಳುಹಿಸಿಕೊಂಡು
ಬಾಳೊಂದು ಕೋಣೆಯ ಸಾರಿ ॥ ೭೧

ಪಕ್ಕಿಗಳರಸನ ಬೆಂಬತ್ತಿ ತಲೆಯನು
ಕುಕ್ಕಿರಿದು ಕೊನೆ ಮೂಗಿನಿಂದ ।
ಪಕ್ಕಗಳುಗುರಿಂದ ನೋಯಿಸಿ ಮುರಿದಟ್ಟಿ
ಇಕ್ಕಲೀಸದು ಬಾಯಿಗೆನ್ನ ॥ ೭೨

ನೆಲಕೆನ್ನ ಕೆಡಹದು ಕೊಲೆಗೊಳಗಾಗದು
ಕಲಹಕೆ ತಾನಮ್ಮದಿಹುದು ।
ಎಲೆ ಮುನಿವರ ಕೇಳು ಪೆಣ್ಣು ಪಕ್ಕಿಯದೊಂದು
ಬಲುಪನಿನ್ನೇನ ವಣ್ಣಿಪೆನು ॥ ೭೩

ಅದುರಿದರೆ ಭೂಮಿ ಆಗಸದಲ್ಲಿ ನಕ್ಷತ್ರ
ಉದುರಿದರೆ ಲವಣಾಂಬುಧಿಯು ।
ಕದಡಿದಡೆ ಕೇಳು ಮುನಿ ಖಗವರನೆನ್ನನು
ಬೆದರೀವುದಿಲ್ಲವೀ ಪಕ್ಷಿ ॥ ೭೪

ನೀರಸೋಂಕಿದಡಗ್ನಿ ಆರದಿಪ್ಪುದೆ ನಿನ್ನ
ಬೀರವೆನ್ನೊಳು ತಾ ಸಂಧಿಪುದೆ ।
ಗಾರುಗ್ಯೆದೀ ಬೇಂಟೆಕಾಸಿಸೆ ನಿನ್ನಸುವ
ಸೇರಿಸುವೆ ಕೇಳೆಮ ಪುರಕೆ ॥ ೭೫

ತೊಲಗೆಲೆ ಸಾಳುವ ಬಲುವಾತು ನಿನಗೇಕೆ
ಕಲಹ ಎನ್ನೊಳು ಕೆಣಕಿದಡೆ ।

ಉಳಿಯದು ನಿನ್ನಸು ಜವನಿಪ್ಪ ಪೊಳಲಿಗೆ
ಕಳುಪುವೆನೆಂದಿತು ಪಕ್ಕಿ ॥ ೭೬

ಹೆಣಚಿದವಾ ಖಗ ಒಂದಕೆ ಒಂದತಿ
ಮಣಿಯದೆ ಕದನ ವೆಗ್ಗಳಿಸಿ ।
ದಣಿಯದೆ ಸಮರವ ಮಾಳ್ಪುದು ಪೆಣ್ವಕ್ಕಿ
ಮುನಿನಾಥನೇನ ಪೊಗಳುವೆನು ॥ ೭೭

ಇತ್ತೊಳ್ಳಿದಳಾಗು ಬೇಂಟೆಯ ನಲವಿಂದ
ಒತ್ತಿಲಿರು ಎನಗೆ ಪೆಣ್ಣಾಗಿ ।
ಕುತ್ತು ಬರುವ ವಾತನಾಡಿ ತನ್ನಳಿವಿಗೆ
ಮಿತ್ತ ಮಾಳ್ಕೊಂಡಿತಾಗರುಡ ॥ ೭೮

ನಾಲಿಗಿಂದಲಿ ಮಿತ್ರ ಬಾಂಧವರಪ್ಪರು
ನಾಲಿಗಿಂದಪ್ಪುದು ಸಿರಿಯು ।
ನಾಲಿಗಿಂದಲಿ ಸಾವು ಬಂಧನ ಪ್ರಾಪ್ತಿಯು
ನಾಲಿಗಿಂದಧಿಕಮಿಲ್ಲೆಂದ ॥ ೭೯

ಬಕ್ಕುಳೆದ್ದಾಡಿದೆ ಬರುವಾತನೆಲೆ ಸಾಳುವ
ಸಿಕ್ಕಿದೆನ್ನಯ ಪೊಡೆತಕೆ ।
ಅಕ್ಕಟ ಕೇಳು ನಿನ್ನ ಪಡೆದೊಡಲಿಗೆ ನೀ
ನಿಕ್ಕಿದೆ ಬಲು ಶೋಕದುರಿಯ ॥ ೮೦

ಒಯ್ಯಲೀಸುವೆನೆ ಬೇಂಟೆಯ ನಿನ್ನ ಕೈಯಿಂದ
ಹಾಯಲೀಸುವೆನೆ ಮುಂದಕ್ಕೆ ।
ನೋಯಿಸುವನ್ನಕ್ಕ ನಿನ್ನ ಬಿಟ್ಟಡೆ ಕೇಳು ನ
ಮ್ಮಯ್ಯನಾಣೆಂದಿತಾ ಪಕ್ಕಿ ॥ ೮೧

ಎಲ್ಲ ವಿಹಂಗಗಳರಸನೀ ಸಾಳುವ
ಇಲ್ಲವೇಕಾದುದು ಶಕ್ತಿ ।
ಸೊಲ್ಲಿಪುದೆನಗೆಂದು ಕೇಳ್ದನಾ ಗುರುಕುಲ
ವಲ್ಲಭನಿಗೆ ದೀಕ್ಷಿತನು ॥ ೮೨

ಕಂದ ಕೇಳು ಮುನ್ನ ಕೀಚಕನೆಂಬುವನೋರ್ವಂಗೆ
ಸಂಧಿಸೆ ಸಾವಿರ ಸಿಂಹ ।

ಮಂದವಿಸದ ಶಕ್ತಿಗೆಟ್ಟಳಿದ ಪರಹೆಣ್ಣಿ
ಗೊಂದಕ್ಕೆ ತಾನಾಸೆಗೈದು ॥ ೮೩

ಕಾಯವ ಬಳಲಿಸದಾವನಾದಡೆ ತಂದ
ಬಾಯದುತ್ತಿಗೆ ಆಸೆಗೈದು ।
ನೋಯಿಸಿ ಸೆಳೆಗೊಂಬ ಪಾತಕಗಪ್ಪುದೆ
ಆಯುಷ್ಯ ಸಿರಿ ಬಲವೆಂದ ॥ ೮೪

ಕೇಳು ಕುಂಭಜ ಮುನಿರಾಯ ನಿಮ್ಮಡಿಗಾಣ್ಬ
ಗಾಲವೆನಗಯಿತರ್ಪುದಾಗಿ ।
ಸೋಲದ ಸಮರಕ್ಕೆ ಪೆಣ್ವಕ್ಕಿಯೊಳು ಶಕ್ತಿ
ಸಾಲದೆಯಾ ಖಗ ವರನು ॥ ೮೫

ಆದಡಾ ಖಗವರವಕ್ಕಿಯು ಪಾಯಿದರೆ
ಮೈದೆಗೆವದು ಪಕ್ಕಿ ಮಾರು ।
ಮೂದಲಿಸಿ ಪೆಣ್ವಕ್ಕಿ ಪಾಯಿದಡಾ ಸಾಳ್ವ ನೂ
ರೈದು ಮಾರುದ್ದ ಲೋಡುವುದು ॥ ೮೬

ಆಶ್ಚರ್ಯವನು ಕೇಳು ಮುನಿ ಎನ್ನ ಪೆಣ್ಸಾಳ್ವ
ಬೆಚ್ಚಂತೆ ಕಾಲೊಳು ಪಿಡಿದು ।
ದರ್ಚಿಪುದಾ ಗರುಡ ತನ್ನ ಮೂಗಿಂದ
ತೀರ್ಚಿಪುದೇನ ವಣ್ಣಿಪೆನು ॥ ೮೭

ತಪ್ಪಿಸಿಗೊಂಬುದು ಸಾಳ್ವನಾಗಲೆ ತನ್ನ
ತುಪ್ಪುಳವನು ಸೋಂಕಲೀಸದು ।
ಅಪ್ಪಳಿಸಿ ರಟ್ಟೆಯಲಿ ಪೊಯಿದಡೆ ಖಗವರ
ಗುಪ್ಪಳಿಸಿ ಪಿಂದಕೋಡುವುದು ॥ ೮೮

ಸೋತೋಡಿದಡೆ ಅಪಖ್ಯಾತಿ ಎನಗೀ ಪಕ್ಕಿ
ಜಾತಿಗಳೊಳು ಹೊರಗೆಂದು ನಾಂಚಿ ।
ವಾತಿನಗೊಲೆಗಂಜಿ ಮರಳದು ಖಗವರ
ಭೀತಿಯೊಳಿದರ ಕಾಳಗಕೆ ॥ ೮೯

ಬೆಂಗೊಟ್ಟು ಮುರಿವುದು ಪೆಣ್ಣು ಸಾಳುವನು ಸಮ
ರಂಗಕ್ಕೆ ನಿಲ್ಲದು ಗರುಡ ।

ಭಂಗನಹೆನು ಖಗಕುಲದೊಳೆಂದ ಪ
ತಂಗೇಶನೊಲುಮಡ್ಡಲಹನು ॥ ೯೦

ನಾಚಿಕಿಲ್ಲವೆ ಖಗವರ ನಿನ್ನ ಮಾರಿಯ
ಚಾಚಬಹುದೆ ಎನಗಿದಿರ ।
ಲೋಚು ಮಾಡದೆ ಬಿಡೆ ನಿನ್ನನೆಂದೀ ಪಕ್ಕಿ
ರೊಚ್ಚೆದ್ದು ಗೂಗಿ ಅಬ್ಬರಿಸಿ ॥ ೯೧

ಬಿಲನೆಡೆಗೊಂಬವು ಅಹಿಕುಲ ಕೇಳೆಲ್ಲ
ನೆಲ ಮರೆಗೊಂಬವಕ್ಕಿಗಳು ।
ಎಲೆ ಮುನಿಗೇಳು ಭೃತಕೆ ಬಿಟ್ಟಿಗಾದಂತೆ
ಸುಳಿವ ಸಾಳ್ವನ ಕಂಡೆನಂದು ॥ ೯೨

ಗಬ್ಬಿತನದ ಮಾತು ನಿನಗೇಕೆ ಪಣ್ವಕ್ಕಿ
ಗೊಬ್ಬಗಳೆದು ಪಲ್ಲ ಮುರಿದು ।
ಬಬ್ಬುಳಿಗೈದಲ್ಲದೆ ನಿನ್ನ ಬಿಡುವಡೆ
ಪೆಬ್ಬಕ್ಕಿ ಗುಲದೊಳಾನಲ್ಲ ॥ ೯೩

ಮೇಲುದ್ದವಾಗಿಪ್ಪುದಾನೆಯ ದಲೆಯನು
ಸೀಳಿತ ಸಿಂಗ ತಾನೆನಿಸಿತು ।
ಪೇಳದಿರು ಅನ್ಯರ ಎಂಜಲಿಗೆ ಸೆಣಸುವ
ಸಾಳುವ ನಿನಗೇಕಗ್ಗಳಿಕೆ ॥ ೯೪

ಕೊಡನೆಂಬ ಬಿಂಕವೀ ಖಗಕೆ ಕೊಡದಿರೆ
ಬಿಡೆನೆಂಬ ಬಿಂಕವಾ ಖಗಕೆ ।
ಕೊಡ ಬಿಡದೆ ದೀನತನದಲ್ಲಿ ನೀನಿರ್ಪ
ಅಡವಿ ಎಡೆಗೆ ಬಂದೆವೆಂದ ॥ ೯೫

ಬೇಡಿತೀ ಪಕ್ಕಿಗೆನ್ನಸನವ ಗೊಡದಿರೆ
ಮಾಡಿತು ಬಲುಗಲಹವನು ।
ನೋಡದು ಕದನಕ್ಕೆ ಎನ್ನಾಸೆ ಮರೆದೀ
ಡಾಡಿತು ಮುನಿ ನಿಮ್ಮ ಬನಕೆ ॥ ೯೬

ಅಡವಿಯಾಗಿಚ್ಚೇಕೆ ಸೊಡರಿನ ಕುಡಿಯಿಂದ
ಸುಡುವಂಗೆ ಗುಡುತೆ ನೀರಲಿ ।

ಮಡಿವಂಗೆ ವಾರುಧಿ ಗೊಡವೇಕೆ ವಿಹಗನ
ನುಡಿಸದೆ ಮುನಿ ಬಿದ್ದನೆಂದ ॥ ೯೮

ನಾರಿಯೆಂಬುದು ತೃಣಭಾರ ವಿರಕ್ತಗೆ
ಧಾರಿಣಿಗೆ ತೃಣವಸ್ತು ಪ್ರಾಣ ।
ವೀರಗೆ ತೃಣವಪ್ಪ ಕಾರಣವೆನ್ನಾಸೆ
ಮೀರಿತಾ ಪಕ್ಕಿ ಕೇಳೆಂದ ॥ ೯೯

ಪಂಗುಳನ ನೆಗಪಿ ತಂದೊಲು ದೇವ
ಗಂಗೆಯ ದೋರಿದೊಲೆನ್ನ ।
ಕಂಗಳಿಗೆ ನಿಮ್ಮುವ ಗಾಣಿಸಿತಾ ವಿ
ಹಂಗವಿಲ್ಲಿಗೆ ಎನ್ನ ತಂದು ॥ ೧೦೦

ಬಿಟ್ಟಿಯ ನೆವದಿಂದ ಕಟಕವ ಕಂಡೊಲು
ನೆಟ್ಟನೆ ಆ ಪಕ್ಕಿಯಿಂದ ।
ದಿಟ್ಟಿಲಿ ಕುಂಭಜ ಮುನಿ ನಿಮ್ಮ ಪಾದವ
ಮುಟ್ಟಿ ಕಂಡೆನು ನೃಪನೆಂದ ॥ ೧೦೧

ಅಕ್ಕಟಾ ಲೋಹವ ಕೊಂಡೊಯಿದು ಪರುಷದ
ಇಕ್ಕೆಯಾ ಬಳಿ ಇರಿಸಿದಂತೆ ।
ಪಕ್ಕಿ ಯೆನ್ನನು ತಂದು ನಿಮ್ಮಡಿ ಗಾಣಿಸಿ
ದುಃಖವನೆನಗೆ ನಿಲಿಸಿತು ॥ ೧೦೨

ಅಮ್ಮದಿರಮ್ಮದಿರೆಲೆ ರಾಯ ನಿನ್ನನು
ಬೊಮ್ಮನಾದರೆ ಏಗೈಯ್ವನು ।
ಅಮ್ಮತಿ ಗಟ್ಟಿಗನಲ್ಲದಿರ್ದಡೆ ನೀನು
ಎಮ್ಮ ಪುರಾಣಕ್ಕೆ ಬರಲಳವೆ ॥ ೧೦೩

ಕಾಯ ನಿಮ್ಮಿಂದ ಪಾವನವಾದ ಪಾಪ ಕಲ್ಪವು
ತೋಯಜ ಭವನೆನ್ನ ಫಣೆಯ ।
ಈಯೊಂದು ಪುಣ್ಯವ ಬರೆದ ಕಾರಣ ನಿಮ್ಮ
ಸಾಯದುಳಿದು ಕಂಡೆನೆಂದ ॥ ೧೦೪

ಎಂಬುದಗೇಳುತ ದಯವಂದು ಕೈ ಮುಟ್ಟಿ
ಅಂಬಕ ಎರಡು ನೇವರಿಸಿ ।

ಕುಂಭಜಮುನಿ ಅಂಜವೇಡೆಂದು ಜನಪಗೆ
ನಂಬುಗೆ ಗೊಟ್ಟ ಕೇಳು ಮಗನೆ ॥ ೧೦೫

ವಾರುಧಿ ತೀರದ ಡೋವಿಗೆ ನೃಪನಿಂದ
ಚೂರಣವಾಯಿತು ಕಲ್ಪಣಿಯ ।
ಮೀರಲಹುದೆ ನಿನ್ನ ಮುನ್ನಿನ ಕರ್ಮದ
ಕಾರಣವಿದಕಂಜವೇಡ ॥ ೧೦೬

ಭಾವಿಸರಸ ನಂಬು ಮುನ್ನಿನಿಂದಧಿಕದ
ದೈವಿಕ ಪುರುಷ ನೀನಪ್ಪೆ ।
ನೇವರಿಸಲಾ ಮುನಿ ದಯದಿಂದ ಮಂಡೆಯ
ಪಾವನನಾದನು ನಿಮುಷದಲಿ ॥ ೧೦೭

ವಿಮಳನೆ ಕೇಳಗಸ್ತ್ಯನ ಹಸ್ತ ಕಮಲವು
ವಿಮಳದಿ ಸೋಂಕೆ ದೇಹವು ।
ಗಮಕಾದುದಾಗಳೆ ಹೆರೆಗಳೆದುರುಗನ
ಸಮನೊಲಾದುದು ಭೂಪನಂಗ ॥ ೧೦೮

ಭ್ರಷ್ಟದ ಚಿನ್ನಕೆ ಪುಟವಿಟ್ಟ ತೆರದೊಲು
ನಿಷ್ಠುಳ್ಳ ಮುನಿಹಸ್ತ ಸೋಂಕೆ ।
ಕಷ್ಟವಳಿದು ದೇಹ ಮುನ್ನಿನಂತೆಸೆಯಿತ್ತು
ದೃಷ್ಟವನೇನ ವಣ್ಣಿಪೆನು ॥ ೧೦೯

ತಾಪವುಂಟೆ ಸಸಿಯಲ್ಲಿ ಬರನುಂಟೆ ಸುರ ಕುಜಕೆ
ಪಾಪವುಂಟೆ ಧರ್ಮ ಗಂಗೆಯಲಿ ।
ತಾಪವು ಪಾಪವು ಒಡನಳಿವದು ಸಜ್ಜನ
ರೂಪನೋರ್ವನ ಸಂಗದಲಿ ॥ ೧೧೦

ಕಂದನೆ ಕೇಳು ದುರ್ಜನರಿಂದ ದುಃಖವು
ಸಂಧಿಸುವುದು ಸಜ್ಜನರಿಗೆ ।
ಸಂದೇಹವಲ್ಲ ರಾವಳನಿಂದ ವಾರಿಧಿ
ಬಂಧನ ಕೊಳಗಾಯಿತೆಂದ ॥ ೧೧೧

ರೋಷವಿಲ್ಲದ ಸರ್ಪಗೆ ದೊರಕುವುದೆ ಪಾಲು ಪ
ರುಷ ಪೊಂದದದಾವರೆಯು ।

ಕಿಸುವಿನ ಸುಯೋಗದಲಿ ಉಸುಕದಿಂದ
ಏಸುತ ಕೇಳು ಬಾಳುತಿಹವು ॥ ೧೧೨

ಯಮಿವರ ಚಯ ಮುನಿ ಸಮಾಗಮದಿಂದ
ತಮಿಗಳೆಲ್ಲವು ಶಿವ ಪುರಕೆ ।
ಗಮಿಸಿದವು ಸತ್ಪುರುಷರ ತತ್ಸಂಗಕೆ
ಸಮನಿಲ್ಲೆಂದು ಬಣ್ಣಿಸಿದ ॥ ೧೧೩

ಮಾತಂಗ ವೇಡನೆಂಬುವ ಮುನ್ನ ಸುಜ್ಞಾನಿ
ನಾಥನ ಸಂಸರ್ಗದಿಂದ ।
ಜಾತಳಿದು ಶಿವಭಕ್ತನಾದ ಸತ್ಪುರುಷರ
ಖ್ಯಾತಿಯನೇನ ವಣ್ಣಿಪೆನು ॥ ೧೧೪

ಕಂದನೆ ಕೇಳು ಶ್ರೀಗಂಧವ ಸೋಂಕಿದ
ವೃಂದ ಕಾಷ್ಠವು ಪರಿಮಳಿಪ ।
ಅಂದದೊಳೀ ಕುಂಭ ಸಂಭವ ಮುನಿಯಿಂದ
ಬಂದುದ ಕೇಳು ನೃಪಗೆ ॥ ೧೧೫

ಸತ್ಯನೆ ಕೇಳಿನ್ನು ರಾಯಗೆ ಬಂದಾ ಸಂ
ಪತ್ತಿನದೊಂದು ಚಿತ್ರವನು ।
ಬಿತ್ತರಿಸುವೆನೇನ ಕುಂಭ ಸಂಭವ ಮುನಿ
ಪೋತ್ತಮ ಭಕ್ತಿಯ ಬೋಧಿಸಿದ ॥ ೧೧೬

ಪೊಡವಿಪನೀ ವೀರಸೇನನ ನಂಬೆಣ್ಣನ
ಮೃಡ ಭಕ್ತಿ ಸವಿ ನುಡಿಯೊಳಗೆ ।
ಗೆಡಹಿದನಾ ಕುಂಭ ಸಂಭವ ಮುನಿಯೆಂದು
ನುಡಿದ ಶಿಷ್ಯಗೆ ದೇಶಿಕನು ॥ ೧೧೭

ರಾಯತನದಿ ಪುಣ್ಯವಿನಿತಿಲ್ಲ ಮದದಿಂದ
ನಾಯಕ ನರಕ ಕೇಳು ಮುಂದೆ ।
ಕಾಯಜರಿಪು ಪಾದ ಪೂಜೆಯ ಗೈದರೆ
ಸಾಯಸವಿಲ್ಲ ಆ ದಿನಕೆ ॥ ೧೧೮

ಅರಸನೆ ಕೇಳು ರಾಜ್ಯದ ಪಾಪವಾಳ್ದಂಗೆ
ಗುರುವಿಗೆ ಶಿಷ್ಯನ ಪಾಪ ।

ಪುರುಷಗೆ ಸತಿಯರ ದೋಷ ಸೋಂಕುವದೆಂದು
ಒರದನಾ ಕುಂಭಜ ಮುನಿಪ ॥ ೧೧೯

ಚಕ್ರಿಗೆ ಕೀಟಕನ ಹತ್ತರ ಪಾಪವು
ಚಕ್ರಿ ಹತ್ತರ ಪಾಪ ಧ್ವಜಗೆ ।
ಮಿಕ್ಕ ಹತ್ತರ ಧ್ವಜ ಪಾಪೊಬ್ಬ ವೇಸಿಗೆ
ಲೆಕ್ಕ ಹತ್ತರ ಪಾಪ ನೃಪಗೆ*॥ ೧೨೦

ಭೂಮಿಯನಾಳುವ ಅರಸುತನ ಕೇಳು
ಸಾಮಾನ್ಯವಲ್ಲ ವೀರಸೇನ।
ಸೋಮಧರನ ಪೂಜೆ ನೇಮವಿಡಿದು ನಿಃ
ಪ್ರೇಮಿಯಾಗಿಹೆ ಪರಕೆಂದ ॥ ೧೨೧

ಇಳೆವರ ವೀರಸೇನನೆ ಕೇಳು ಮುನ್ನೋರ್ವ
ಮಳೆರಾಜನೆಂಬ ಕಟ್ಟರಸು ।
ಕಳೆಧರನ ಭಕ್ತಿಂದ ಧರೆ ಸಹಿತಮೆಯಿದಿದ
ಮಲಹರನ ಕೈವಲ್ಯಕೆಂದ ॥ ೧೨೨

ಮಾನವಪತಿ ಕೇಳು ಉದ್ಭಟನೆಂದೆಂಬ
ಆ ನರಪ ಶಿವಭಕ್ತಿಯಿಂದ ।
ಮಾನಿನಿ ಮಾತಿಂಗೆ ಪುರ ಸಹಿತ ಕೊಂಡೊಯಿದ
ಸ್ಥಾಣು ಕೇಳು ತನ್ನಾ ವಾಸಕೆ ॥ ೧೨೩

ಈಶ ಕೋಟಿಗಳ ಪ್ರತಿಷ್ಠೆಯ ಮಾಡಿ ವಿ
ಭೀಷಣ ಸ್ಥಿರ ಪಟ್ಟವಡೆದ ।
ದೇಶವರಿಯೆ ಚೋಳರಾಯನು ಭಕ್ತಿಯಿಂದ ಕೈ
ಲಾಸ ವಾಸಿಯಾದನೆಂದ ॥ ೧೨೪

---

* ಕೀಟಕ: ಹಿಂಸ ವೃತ್ತಿಯವನು, ಕೊಲೆಗಡುಕ, ಚಕ್ರಿ–ಘಟಿಂಗ, ದಗಾಕೋರ, ಧ್ವಜನ–ಹೆಂಡ ಮಾರುವವನು, ಈ ಪದ್ಯ ಮಹಾಭಾರತದಲ್ಲಿರುವ ಒಂದು ಶ್ಲೋಕದ ಅನುವಾದವಾಗಿದೆ. ಆ ಶ್ಲೋಕ ಹೀಗಿದೆ. "ದಶಸೂನಾಂ ಸಮಂ ಚಕ್ರಂ ದಶಚಕ್ರ ಸಮೋದ್ವಜಃ । ದಶಧ್ವಜ ಸಮಾವೇಶ್ಯ ದಶವೇಶ್ಯಾ ಸಮೋ ನೃಪಃ ॥" ಸಾರಾಂಶ: ಹತ್ತು ಕಟುಕರ ಸಮ ಪಬ್ಬ ಘಟಿಂಗ, ಹತ್ತು ದಗಾಕೋರ, ಘಟಿಂಗರ ಸಮ ಹೆಂಡಮಾರುವವನು. ಹತ್ತು ಬಿಲ್ಲವರಸ, ಒಬ್ಬ ಸೂಳೆ, ಹತ್ತು ಸೂಳೆಯರ ಸಮ ಒಬ್ಬ ರಾಜ

ಹೇಗಾದಡು ಅರಸು ತನಕೆ ಪುಣ್ಯವಿಲ್ಲದ
ಲಾಗದು ಕೈವಲ್ಯ ಪದವು ।
ನಾಗಭೂಷಣ ಭಕ್ತಿ ಮರೆದರಸರು ನರಕ
ಸಾಗರದೊಳು ಬೀಳ್ವರೆಂದ ॥ ೧೨೫

ಸೂನುವೆ ಕೇಳಾ ರಾಯನು ಮುನ್ನಲಿ
ನ್ನೇನ ಪುಣ್ಯವ ಪಡೆದಿರ್ದ ।
ಹೀನ ಗುಣವ ಬಿಟ್ಟನಾಗ ದೈವ ಭಕ್ತಿ
ಜ್ಞಾನವಂಕುರಿಸಿತೇನೆಂಬೆ ॥ ೧೨೬

ದೇಶಿಕೋತ್ತಮನೆ ಕೇಳು ನಾ ಮುನ್ನ ಗೈದಿರ್ದ
ದೋಷಕಿನ್ನಾವ ಪ್ರಾಯಶ್ಚಿತ್ತವು ।
ಸೂಸೆನ್ನ ಕರ್ನಕೆಂದಾ ಭೂಪ ಮೈಯಿಕ್ಕೆ
ಬೋಸರಿಸಿ ಋಷಿ ಪೇಳಿದನು ॥ ೧೨೭

ಇಷ್ಟ ಪ್ರಾಣವು ಭಾವ ಭಸಿತ ರುದ್ರಾಕ್ಷಿಯು
ಸ್ಪಷ್ಟ ತೀರ್ಥಶೇಷ ಪ್ರಸಾದ ।
ಅಷ್ಟಾವರಣ ದಂಗವೆಂಬುದನರಿಯದೆ
ಕಷ್ಟವಟ್ಟಲೆ ನೃಪ ಬರಿದೆ ॥ ೧೨೮

ಸಾಕಿದ ಜನನಿಯ ಮಾರಿ ತೊತ್ತಗೊಂಬೊಲು
ಆ ಕಾಂತೆ ಫಣೆಯ ಭೂತಿಯನು ।
ನೀಕರಿಸಿದಡಲ್ಲಿ ಈ ಪಾಪ ನಿನ್ನನು
ತಾಳಿತೆಂದನು ಆ ಮುನಿಪನು ॥ ೧೨೯

ಆ ಪಚ್ಚ ಪಸಿ ಕುಂಭದೊಳು ಜಲ ನಿಲುವುದೆ
ಪಾಪಿ ನರನ ಹೃದಯದಲ್ಲಿ ।
ತಾಪಸೋತ್ತಮ ಕೇಳು ಸುಜ್ಞಾನವಿರ್ಪುದೆ
ಭೂಪನೆಂದನು ಸುತಗೇಳ ॥ ೧೩೦

ಯಾವಲ್ಲಿ ಪೋದುದನಾವಲ್ಲಿ ನೋಳ್ಪಂತೆ
ಭೂವರ ಕೇಳು ವೀರಸೇನ ।
ಪಾವನ ಭಸಿತವ ಧರಿಸಿದಲ್ಲದೆ ನಿನ್ನ
ಜೀವಕ್ಕಾಗದು ಮುಕ್ತಿಯೆಂದ* ॥ ೩೩೧

*ಕಳೆದಲ್ಲಿಯೇ ಹುಡುಕು ಎಂಬ ಗಾದೆಗೆ ಸಮವಾಗಿದೆ.

ನೀರಿಂದಲಾದವು ನೀರಿಂದ ಶುದ್ಧವು
ಏರಾಯ ನೀವಿಭೂತಿ ದೊಡೆದ ।
ಘೋರ ಪಾತಕ ಭೂತಿ ಧರಿಸದನ್ನಕ್ಕ ನಿನ್ನ
ಆ ರುಷಿವರ ಬಿಡದೆಂದ ॥ ೧೩೨

ಭಸಿತವಿಡದ ಹಣೆ ನರಕಕೆಯಿದುವ ಹೊಣೆ
ಭಸಿತವಿಲ್ಲದ ನೆತ್ತಿ ಯಮನ ಬುತ್ತಿ ।
ಭಸಿತವಿಡದ ಗೊರಳು ದುರ್ಗತಿ ಮನೆಯೊರಳು
ಭಸಿತವಿಡದ ಪೊಟ್ಟೆ ಯಮನ ಮೊಟ್ಟೆ ॥ ೧೩೩

ಭೂತಿ ರುದ್ರಾಕ್ಷಿ ಧಾರಣದಲ್ಲಿ ಇರ್ಪರವಾ
ಜಾತಿಗಳೇನಾದಡವನು ।
ಭೂತಳ ಪತಿ ಕೇಳು ಶಿವನೆಂದು ಕಾಣ್ಬುದು
ನೀತಿಯಾಗಮಸಿದ್ಧವೆಂದ ॥ ೧೩೪

ಭಸಿತವಿಡದ ಶ್ರುತಿ ಭಸಿತವಿಡದ ಕ್ರತು
ಭಸಿತವಿಡದ ಜಪತಪವು ।
ಭಸಿತವಿಡದ ಶಿವ ಪೂಜೆಯು ನಿಷ್ಫಲವೆಂದು
ಋಷಿಗಳ ರತ್ನ ನಾಡಿದನು ॥ ೧೩೫

ಭೂರಮಣ ಕೇಳು ಕಹಿ ಸೋರೆಯೊಳು ಭೂತಿಯ
ಮೂರು ದಿವಸವು ತುಂಬಿರಲು ।
ಪಾರುವದು ವಿಷ ಭಸ್ಮ ಧಾರಣದಿಂದಘ
ದೂರಪ್ಪುದು ಅರಿದಲ್ಲರಸ ॥ ೧೩೬

ಸ್ನಾನ ಜಪವು ವಿಶ್ವ ದೇವ ಸುರಾರ್ಚನೆ
ದಾನ ಹೋಮವು ವೇದದಲ್ಲಿ ।
ತಾನಿವರಲ್ಲಿ ವಿಭೂತಿಯ ಧರಿಸಿದ
ಮಾನವಗಿಲ್ಲಪಮೃತ್ಯು ॥ ೧೩೭

ಪೊಡವಿಪ ಕೇಳು ಮಾಸ ಶಿವರಾತ್ರೆ ವ್ರತದಿಂದ
ಬಿಡುವದು ನಿನ್ನ ಸಂಕಲ್ಪ ।
ಕೊಡುವನು ಶಿವ ನಿನಗೆ ಮುನ್ನಿಗಿಂದಧಿಕದ
ಸಡಗರವೆಂದನಾ ಮುನಿಪ ॥ ೧೩೮

ನಂಬಿದಡೆ ಶಿವನಿದ್ದ ಹೆಂಗಳ ಕುಚದಲ್ಲಿ
ನಂಬಿದಡೆ ಶಿವ ಬಳ್ಳದಲ್ಲಿ ।
ನಂಬಿದಡೆ ಕೇಳುಭೂಪ ಮರನಲ್ಲಿ ಶಿವನಿರ್ಪ
ನಂಬಿದಡೆ ಹರ ನಿನ್ನೊಳಿರನೆ ॥ ೧೩೯

ಶಿಲೆ ಜಲ ನೆಲದಲ್ಲಿ ಬರೆದಿರ್ದ ಪಟದಲ್ಲಿ
ಪುಳಿನದ ಮರೆಯಿರ್ಪ ದೇವ ।
ಒಲಿದು ಭಜಿಸೆ ನಿನ್ನ ಹೃದಯದೊಳಿರನೆ
ತಿಳಿದು ನೋಡೆಂದನಾ ಮುನಿಪ ॥ ೧೪೦

ಆ ಪಾಪವಳಿವೊಡೆ ಶಿವರಾತ್ರಿ ವ್ರತದಿಂದ
ಕಾಪಾಲಿ ಲಿಂಗವ ಭಜಿಸು ।
ನೀ ಪಡೆಯುವೆ ಭೋಗ ಮೋಕ್ಷವನೆಂದಾಗ
ತಾಪಸೋತ್ತಮ ಬೋಧಿಸಿದನು* ॥ ೧೪೧

ದೇವನೆ ಕುಂಭ ಸಂಭವನೆ ಶಿವರಾತ್ರಿ ವ್ರ
ತವ ಸಂಭ್ರಮದಿ ಮಾಳ್ಪ ।
ಆವನುವನು ಪೇಳ ದಯದಿಂದಲೆನಗೆಂದು
ಭೂವರ ಬೆಸಗೊಂಡ ಮುನಿಯ ॥ ೧೪೨

ಜನಪನೆ ಕೇಳೀ ಶಿವರಾತ್ರಿಯ ಘನ ಹಿಮ
ತನಯಳಿಗೀಶ ಮುನ್ನೊಲಿದು ।
ವಿನಯದಿ ಪೇಳಿದಾಗ ಮದರ್ಥದೊಳಗೊಂ
ದಿನಿತುವ ನಿನಗುಸುರುವೆನು ॥ ೧೪೩

ಭೂಲೋಕ ವಲ್ಲಭ ಕೇಳು ಶಿವರಾತ್ರಿ ವಿ
ಶಾಲವನಿನ್ನು ವರ್ಣಿಪಡೆ ।
ಸಾಲವು ಆದಿಶೇಷನ ಜಿಹ್ವೆಗಳೆನ್ನೊಂದು
ನಾಲಗೆಗಳವಲ್ಲವೆಂದ ॥ ೧೪೪

ಆರಾರು ಮಾಡದರೀ ಶಿವರಾತ್ರಿಯ
ಪಾರಣೆಗೇನು ಫಲವೆಂದು ।

---

*"ಸಣ್ಣನೆಯ ಮಳಲೊಳಗೆ: ನುಣ್ಣನೆಯ ಶಿಲೆಯೊಳಗೆ: ಬಣ್ಣಿಸುತ ಬರೆದ ಪಟದೊಳಗೆ ಇರುವಾತ: ತನ್ನೊಳಗೆ ಇರನೆ ಸರ್ವಜ್ಞ"

ಆರಾಯ ಬೆಸಗೊಂಡ ಕುಂಭಜ ಮುನಿಪಾದ
ವಾರಿಜಕೆರಗೆ ಕೇಳು ಮಗನೆ ॥ ೧೪೫

ಗಿರಿಸುತೆ ಗುಹ ಗಣಪತಿ ಹರಿಯಜ ಸುರಮುನಿ
ವರ ರಾತ್ರಿ ಮಾಸಕೊಮ್ಮೆ ಮಾಡೆ ।
ಪಿರಿದಪ್ಪ ವರಗಳ ಪಡೆದರೆಂದಾ ಮುನಿಪ
ಒರೆದನಾ ವೀರಸೇನನಿಗೆ ॥ ೧೪೬

ವಿಮಳನೆ ಕೇಳು ಶಿವರಾತ್ರಿ ಒಂದು ವರುಷ
ಕ್ರಮ ತಪ್ಪಿಸದೆ ಗೈದರ್ಗೆ ।
ಅಮರ ಗಣಂಗಳ ಪದವೀವ ಶಿವನೆಂದು
ಯಮಿಗುಲ ರನ್ನ ನಾಡಿದನು ॥ ೧೪೭

ಈ ಶಿವರಾತ್ರಿ ಗಿನ್ನಾವ ನಾದಡೆ ಉಪ
ವಾಸಮಿರ್ದಗೆ ಶಿವನೊಲಿದು ।
ಆ ಸುರಪನ ಪದವೀವನೆಂದು ಹರುಷದಿ ಮು
ನೀಶ ನಾಡಿದ ಭೂಪನಿಗೆ ॥ ೧೪೮

ಗಣಿಸ ಬಹುದು ಗಗನದೊಳಿರ್ಪ ತಾರೆಯ
ಗಣಿಸ ಬಹುದು ಮಹಿತೃಣವೆ ।
ಗಣಿಸುವಡಳವಲ್ಲ ಶಿವರಾತ್ರಿ ಪಾರಣೆಯ
ನಣುಗ ಕೇಳಿದರ ಪುಣ್ಯವನು ॥ ೧೪೯

ಕಾಶಿ ಕೇತಾರವು ಗಯ ಪ್ರಯಾಗದಲಿ
ಏಸು ಕಾಲವು ತಪವಿರ್ದ್ದ ।
ಆ ಸುಕೃತ ಶಿವರಾತ್ರಿಯ ದೊಂದುಪ
ವಾಸಕ್ಕೆ ಸಮನೆಂದ ಮುನಿಯು ॥ ೧೫೦

ಸೌರಾಷ್ಟ್ರ ಶಂಭು ಗೋಕರ್ಣ ರಾಮೇಶ್ವರ ಕು
ಮಾರ ಸ್ವಾಮಿಯು ಪಂಪಾದಿ ।
ಭೂರಿ ಕ್ಷೇತ್ರಗಳ ನೋಡಿದ ಫಲ ಶಿವರಾತ್ರೆ
ಪಾರಣೆಗೆಣೆಯೆಂದ ಮುನಿಯು ॥ ೧೫೧

ಪಕ್ಷಿ ತೀರ್ಥವು ಕುಂಭ ಕಂಚಿ ಕಾಳಹಸ್ತಿಯು
ದ್ರಾಕ್ಷಾ ರಾಮೇಶ ಶ್ರೀ ಶೈಲ ।
ಸುಕ್ಷೇತ್ರವಾಗಿರ್ದ ವಾದಿಯ ಕಂಡು ಬರಲು
ಮೋಕ್ಷವಪ್ಪುದು ರಾಯ ಕೇಳ ॥ ೧೫೨

ಸಟೆಯಿಂದಾಡೆ ದಿಟದಿಂದಾಡೆ ಆಗಲಿ
ಕುಟಿಲ ಕಪಟ ತನದಿಂದ ।
ನಿಟಿಲಾಕ್ಷನ ಪಾರಣೆಯೊಳಿರೆ ರಾತ್ರಿವೇಳೆ
ಘಟಿಪುದು ಪುಣ್ಯವೇನೆಂಬೆ ॥ ೧೫೩

ಏನೆಂಬೆನೀ ಶಿವರಾತ್ರಿಯ ಫಲಕೇಳು
ಕಾನನದೊಳಗೊರ್ವ ವೇಡ ।
ತಾನಿರ್ದ ಮೃಗಗಳಿಗೋಸುಗ ಪಾರಣೆ
ಆ ನರಗಾಯಿತು ಕೈವಲ್ಯ ॥ ೧೫೪

ವರ್ಣಿಪೆ ಕೇಳು ಶಿವರಾತ್ರಯಲೊಂದು ಆ
ರಣ್ಯದಿ ಶಬರ ದಂಪತಿಯು ।
ಪರ್ಣಾಶನವ ಬಿಟ್ಟು ಕಲಹದಿಂದೊರಗಿದ
ಹೆಣ್ಣು ಗಂಡಿಗೆ ಶಿವನೊಲಿದ ॥ ೧೫೫

ಕಷ್ಟ ದರಿದ್ರನು ಮೂರ್ಖನು ದಯಹೀನ
ನಿಷ್ಠುರಿ ನೀಚ ನಿಂದಕನು ।
ಭ್ರಷ್ಟ ಮನುಜರಿರೆ ಶಿವರಾತ್ರಿ ಪಾರಣೆ
ಶ್ರೇಷ್ಠರಪ್ಪರು ದಿವಿಜರಿಗೆ ॥ ೧೫೬

ತೊಟ್ಟಂಬು ಪುಸಿವುದೆ ಬೆಟ್ಟವನೆಚ್ಚಡೆ
ಇಟ್ಟ ಕೈ ಪುಸಿವುದೆ ನೆಲಕೆ ।
ಕಟ್ಟು ಶಿವರಾತ್ರಿ ಪಾರಣೆ ಫಲ ಪುಸಿವುದೆ
ಮುಟ್ಟಿಗೇಳೆಂದನಾ ಮುನಿಯು ॥ ೧೫೭

ಲಿಂಗವನೀ ಶಿವರಾತ್ರಿ ಯೊಳಿನ್ನಾವ
ಅಂಗದೊಳರ್ಚಿಪ ನೆಲೆಯ ।
ಏಂಗಿತವೆನಗುಸುರೆಂದು ಭೂಪನು ಕೇಳ್ದ
ಮಂಗಳ ಮುನಿ ಪಾದಕೆರಗಿ ॥ ೧೫೮

ಪಾರಣೆಯಲ್ಲಿ ರಲಾರದಿರ್ದಡೆ ಮೇಣು
ಕ್ಷೀರಕ್ಷಾರ ರಸ ಪಾನಗಳ ।
ಸಾರಾಯ ಫಲವಣ್ಣು ಭಕ್ಷ್ಯಾದಿ ಶಿವಗಿತ್ತು
ಯಾರಾತ್ರಿ ಮಾಡು ಜಾಗರಣೆಯ ॥ ೧೫೯

ಕಂಗಳಿಗೆ ಚೆಲುವೆತ್ತ ಮನಕೆ ಇಂಪಣದೋರಿ
ಅಂಗೈಗೆ ಮೃದು ಪತ್ರಿ ಪೂವ ।
ಪಿಂಗದೆ ಪರಿತಂದು ಶಿವರಾತ್ರಿ ಕಾಲದಿ
ಲಿಂಗವ ನೀ ಭಜಿಸೆಂದ ॥ ೧೬೦

ಗುರುಗಳ ಮಠದಲ್ಲಿ ಶಿವ ಭವನಗಳಲ್ಲಿ
ಶರಣರಿರ್ಪ ಸದನದಲ್ಲಿ ।
ಅರಸೆ ಮಾಳ್ಪುದು ಶಿವರಾತ್ರಿ ಪೂಜೆಯ
ಪರಿವಿಡಿಯನೇ ಬಣ್ಣಿಪೆನು ॥ ೧೬೧

ವಾರುವಗಳೈನೂರು ಕೋಟಿ ಧೇನುಗಳೊಂದು
ನೂರು ಕೋಟಿಯು ಪೊಂಗಳನು ।
ಮೇರುವಿನನಿತಪ್ಪ ಫಲಂಗಳನೀವುದು
ಈ ರಾತ್ರಿ ಲಿಂಗ ದರುಶನಕೆ ॥ ೧೬೨

ಫಲಕಾಲ ಲಿಂಗವ ಭಜಿಸಲಾರದ ನರ
ಘಳಿಗೊಂದು ಶಿವರಾತ್ರಿಯಲ್ಲಿ ।
ಒಲಿದೊಮ್ಮೆ ಲಿಂಗವ ಪೂಜಿಸಿದಾತಂಗೆ
ಕುಲಕೋಟಿ ಪಾವನವೆಂದ ॥ ೧೬೩

ಏಕುವರ ಕೇಳು ಪಂಚಾಮೃದದಭಿ
ಷೇಕ ತಂಡುಲ ತಿಲಗಂಧ ।
ಬೇಕಾದ ಪರಿಮಳ ಧೂಪದೀಪಗಳಿಂದ
ನೀ ಕರಿಕಂಠನ ಭಜಿಸು ॥ ೧೬೪

ಸ್ತೋತ್ರವ ಪಠಿಸುತ ಮಂತ್ರವ ಜಪಿಸುತ
ಶಾಸ್ತ್ರಾಗಮವ ಕೇಳುತಲಿ ।
ಭೂತ್ರಯ ದೊಡೆಯನ ಎವೆ ಪಳಚದೆ ಶಿವ
ರಾತ್ರಿ ಯೊಳೊಲಿದರ್ಚಿಸೆಂದ ॥ ೧೬೫

ಮೆಚ್ಚಿಂದಲ್ಲೊಂದು ಲಿಂಗವ ಶಿವರಾತ್ರಿಯೊ
ಳರ್ಚಿಸಲಾ ಮರುದಿವಸ ।
ಅಚ್ಚರಿಯನೇನೆಂಬೆ ಸಾಸಿರ ಲಿಂಗಕ್ಕೆ
ಪೆಚ್ಚಿನ ಫಲವಪ್ಪುದೆಂದ ॥ ೧೬೬

ಶಿವನುಡಿ ಶಿವಗೋಷ್ಠಿ ಶಿವಭಕ್ತ ರೊತ್ತಿಲಿ
ಶಿವರಾತ್ರಿ ಜಾಗರಣೆ ಗೈಯ್ಯೆ ।
ಶಿವರೂಪರಪ್ಪರು ಶಿವಪುರವಾಳುವ
ಶಿವನವರಿಗೆ ಪ್ರಿಯವಹರು ॥ ೧೬೭

ತಾಳವು ದಂಡಿಗೆಯು ಮದ್ದಳೆ ಕಂ
ಸಾಳ ತಮ್ಮಟೆ ಗಂಟೆ ಶಂಖ ।
ಕಾಳೆ ಬುರುಗು ಭೇರಿ ಗಿಡಿಬಿಡಿ ದುಂದುಭಿ
ಘೀಳಿಡುತಿಹ ರವದಿಂದ ॥ ೧೬೮

ನರ್ತನ ವಾದ್ಯ ಗೀತಂಗಳೋಲಗದಿಂದ
ಕೂರ್ತು ಶಿವರಾತ್ರಿ ಜಾಗರಣೆಯ ।
ಅರ್ತಿಂದ ಗೈದಿರ್ಪ ನರನಿಂದ್ರ ಲೋಕಕ್ಕೆ
ಕರ್ತನಹನು ಭೂಪಕೇಳು ॥ ೧೬೯

ಈ ಹರರಾತ್ರಿಯ ಮಹಿಮೆಯನ್ನಿನ್ನಾವ
ದೇಹಿಕ ನೊಲಿದು ಕೇಳಿದಡೆ ।
ದ್ರೋಹಗಳೆಲ್ಲಳಿದಾತಂಗೆ ತಾಂ ಮುಕ್ತಿ
ಯಾಹುದರಿದಲ್ಲೆಂದ ನೃಪಗೆ ॥ ೧೭೦

ಅಂತು ಸಂಧಿ ೬ಕ್ಕಂ ಪದನು ೬೨೮ಕ್ಕಂ

ಮಂಗಳ ಮಹಾ ಶ್ರೀ

♦

ಸಂಧಿ – ಏಳು

ಹಿಮವಂತ ಗಿರಿರಾಜ ತನೆಯಳ ಕುಚಯುಗ್ಮ
ಕಮಳ ಕುಟ್ಮಳವರಳದಂತೆ ।
ಕುಮುದಬಾಂಧವನ ಕೆಂಜೆಡೆ ಮುಡಿಯೊಳು ತಾಳ್ದ
ಉಮೆಯರಸನೆ ಸಲಹೆನ್ನ ॥ ೧

ಏಳಕೊಂದರ ಪೆಸರಿನ ಬಿಲ್ಲಿನೊಳು ಇರಿದನೆ
ಏಳಕೊಂದರ ಪತ್ತೆಧರನೆ ।
ಏಳರೊಳೊಂದ ನೀಂಟಿದಗೆ ಬೋಧೆಯನಿತ್ತ
ಏಳೇಳ ಪೊರೆವಗೊಂದಿಸುವೆ ॥ ೨

ದೇಶಿಕೋತ್ತಮ ನಿನ್ನ ವಾಙ್ಮಣಿಗಳ ತಂದು
ಸೂಸಿದೆನ್ನಯ ಶ್ರೋತ್ರವೆಂಬ ।
ಕೋಶದೊಳಿರಿಸೆಂದು ನಮಿಸಿ ಮಗುಳೆ ಕೇಳ್ದ
ನಾಶಿಷ್ಯನತಿ ಹರುಷದಲಿ ॥ ೩

ಎಲೆ ಮಗನೆ ಈ ಕಥೆ ಕೇಳ್ವರ ಕರ್ನಕ್ಕೆ
ಸಲಿಸೂದು ಸೊಗಸಮೃತವ ।
ತಿಳಿಪುದು ಧರ್ಮದ ಮಾರ್ಗವ ಮುಕ್ತಿಯ
ನಿಳಯದೊಳು ಸುಖಮಿರಿಸುವುದು ॥ ೪

ಬಿಡಿಸುವುದು ತಾಮಸಗುಣ ಶಿವಭಕ್ತಿಯ
ಪಿಡಿಸುವುದು ಮನವ ದುರ್ಗತಿಗೆ ।
ನಡಸದೀ ವೀರಸೇನನ ಚಾರಿತ್ರದ
ನುಡಿಯೊಂದ ಕರ್ನ ಕೇಳಿದಡೆ ॥ ೫

ಒಣಗುವದಜ್ಞಾನದಂಕುರ ಕೇಳ್ದರಿ
ಗುಣಿಸುವುದು ಸುಜ್ಞಾನವ ।
ಜುಣುಗಿಸುವುದು ಭವಬಾಧೆಯನೀ ಕಥೆ
ಯಣುಗ ಕೇಳೆಂದ ದೇಶಿಕನು ॥ ೬

ಕಂದ ಕೇಳಾ ವೀರಸೇನನ ಹೃದಯದ
ಮಂದಮತಿಯೆಂಬ ತಾಮಸವು ।
ಪೊಂದದೆ ಓಡಿತಾಗಗಸ್ತ್ಯನ ಬೋಧೆಯು
ನಿಂದುದನೇನ ಬಣ್ಣಿಪೆನು ॥ ೭

ತಪಸಿಗುಲೋತ್ತಮ ಕುಂಭಸಂಭವ ಲಿಂಗ
ದುಪದೇಶವ ಎನಗಿತ್ತು ನಿಮ್ಮ ।
ಕೃಪೆಯಿಂದ ಭಕ್ತನ ಮಾಡೆಂಬುತ ರಾಯ
ವಿಪಳಗಸ್ತ್ಯನಿಗೆರಗಿದನು ॥ ೮

ಲೇಸ ನೆನದೀ ಭೂಪ ಕೇಳು ಮುನ್ನ ಹರಿಯಜ
ವಾಸವ ಸುರ ಮುನಿಗಣರು ।
ಈಶನನರ್ಚಿಸಿ ಪರಮಾಯುವ ಪಡೆದರು
ಅಸುಖವನು ರಾಯ ಕೇಳು ॥ ೯

ಮಾಧವನಿಂದ್ರನೀಲದ ಲಿಂಗವನು ತಾ
ಪೊರ್ದಿಸಿ ಸರ್ವಕಾಲದಲಿ ।
ಮಾಧವನಿಂದತ್ತ ವಿಷ್ಣುತ್ವವ ಪಡೆದನು
ಮೇದಿನಿಪತಿಗೇಳೆಂದ ॥ ೧೦

ಮಾಣಿಕದ ಲಿಂಗವ ಮುದದಿಂದ ಭಜಿಸಿದ
ವಾಣಿಯರಸನನುದಿನವು ।
ಸ್ಥಾಣುವಿನಿಂದತ್ತ ಬ್ರಹ್ಮತ್ವವಡೆದನು
ಕ್ಷೋಣಿಪತಿಗೆಂದನಾ ಮುನಿಯು ॥ ೧೧

ಕೌಶಿಕ ಕಶ್ಯಪ ಭಾರದ್ವಾಜ ನರ
ಕೇಶ ಪಾಣಿನಿ ದಧೀಚಿ ।
ವಾಸಿಷ್ಠ ಜಯಮುನಿ ಗೌತುಮ ವಾಲ್ಮೀಕಿ ದು
ರ್ವಾಸತ್ರಿ ಮಹಾಕಾಲ ಮುನಿಯು ॥ ೧೨

ಯತಿ ಮುನಿಗಳು ಶಿವಲಿಂಗವ ನೋಂಪಿಂದ
ಮತಿವಂತರಾಗಿ ಸಿದ್ಧಿಗಳ ।
ಹಿತವಾಗಿ ಪಡೆದರೆಂದಾ ಮುನಿ ಪೇಳಿದ
ಕ್ಷಿತಿಪತಿಗತಿ ಮುದೆತ್ತು ॥ ೧೩

ವಾರಿಜಸಖ ಕೇಳು ತಾಮ್ರದ ಲಿಂಗವ
ಮೂರುಕಾಲದಲಿ ಭಜಿಸುತಲಿ ।
ಮಾರಾರಿ ಭಕ್ತಿಂದ ಸೂರ್ಯತ್ವನೊಡೆದನು
ಧಾರುಣೀಶನೆ ಲಾಲಿಸೆಂದ ॥ ೧೪

ಮತ್ತೆ ಕೇಳರಸನೆ ಹಿಮಕರ ಭಜಿಸಿದ
ಮುತ್ತಿನಲಿಂಗವನೊಲಿದು ।
ಚಿತ್ತಜ ರಿಪುವಿಂದ ಸೋಮತ್ವನೈದಿದ
ಉತ್ತುಮನಗಸ್ತ್ಯನುಡಿದನು ॥ ೧೫

ಬಿತ್ತರಿಸುವೆನೇನಾ ಸುರಪತಿ ಭಜಿಸಿದ
ರತ್ನದ ಲಿಂಗವನೊಲಿದು ।
ಮತ್ತೀಶಭಕ್ತಿಂದ ಇಂದ್ರತ್ವವಡೆದನು
ಪೃಥ್ವೀಶ ಕೇಳೆಂದ ಮುನಿಯು ॥ ೧೬

ಹಸ್ತದಲಿ ಶ್ರೀಪತಿ ಕೊರಳಲಿ ವಾಣೀಶ
ಮಸ್ತಕದಿಂದ ಲಿಂಗವನು ।
ವಿಸ್ತರದಿಂದುರದಲಿದಾಳ್ದರು ಸ
ಮಸ್ತ ಸುರರು ನೃಪ ಕೇಳಾ ॥ ೧೭

ಗೋಮಿ ಭಾರತಿ ಶಚಿ ಮೊದಲಾಗಿರ್ದ
ಆ ಮಹಾದೇವತ ಸ್ತ್ರೀಯರು ।
ಕಾಮಾರಿಯನರ್ಚಿಸಿ ಪತಿ ಪ್ರೇಮವೊಡೆದರು
ಭೂಮಿಪ ಕೇಳು ವೀರಸೇನ ॥ ೧೮

ದೇವದಾನವ ಮಾನವರೆಲ್ಲ ಲಿಂಗದ
ಸೇವೆಯ ಮುದದಿಂದಗೈದು
ಪಾವನ ಮುಕ್ತಿಯನೈದಿದರೆಂದು ಯತಿ
ದೇವನಗಸ್ತ್ಯ ಬೋಧಿಸಿದಾ ॥ ೧೯

ಲಿಂಗವೆಂಬೆರಡಕ್ಷರವಗೇಳಿದಡೆ ಪಾಪ
ಹಿಂಗಿ ಪೋಪವು ನಿಮಿಷದಲಿ ।
ಲಿಂಗವೆಂಬೆರಡಕ್ಷರವ ನೆನದಡೆ ಜನ
ನಂಗಳಿಲ್ಲವು ಮರುಳೆಂದ ॥ ೨೦

ಸಟೆಯಿಂದ ನೆನದಡೆ ದಿಟದಿಂದ ನೆನದಡೆ
ಆಟಮಟದುದ್ಯೋಗದಿಂದ ।
ನಿಟಿಲನೇತ್ರನ ಪಾದಪದ್ಮವ ನೆನದಡೆ
ಘಟಿಪುದು ಪುಣ್ಯ ಕೇಳು ಭೂಪ ॥ ೨೧

ಸಣ್ಣವರುಗಳೊಂದು ಬಳಿಯಲಿ ಕ್ರೀಡೆಗೆ
ಮಣ್ಣಿನಲಿಂಗವಗೈದು ।
ಬಣ್ಣನೆಯಿಂದಲರ್ಚಿಸಲವರಿಗೆ ಮು
ಕ್ಕಣ್ಣನಿತ್ತನು ರಾಯಪದವ ॥ ೨೨

ಸರ್ವದೈವವ ಜರಿದೈಮೊಗನನರ್ಚಿಸು
ಸರ್ವ ಮಂತ್ರಗಳ ನೀನುಳಿದು ।
ಶರ್ಮನ ಪ್ರಣಮ ಪಂಚಾಕ್ಷರಿಯ ನೆನೆಯೆ
ಸರ್ವ ಸಿದ್ಧಿಯು ನಿನಗಕ್ಕು ॥ ೨೩

ಪಾಪಗುಲಾಂಧರವಿಂದ ಮಿತ್ರನ ಭವ
ದಾಪಯೋಧಿಗೆ ವಡಬಾಗ್ನಿ ।
ಕಾಪಾಲಿಮಂತ್ರದಿ ಪಂಚಾಕ್ಷರಿಗೆಣೆ
ಯಾಪ ಮಂತ್ರಗಳಿಲ್ಲವೆಂದ ॥ ೨೪

ಆರೈದು ಕೇಳ್ದಂಗೆ ನಾರೈದು ನುಡಿವಂತೆ
ಆರೈದದರೊಳು ಮನಸೇರ್ದಂಗೆ ।
ಆರಾರು ಸಮನಲ್ಲವೆಂದನಾ ಮುನಿವರ
ನಾರೈದು ಪೇಳ್ದರಾಯನಿಗೆ ॥ ೨೫

ಲಿಂಗಕೀ ಮಂತ್ರವೆ ಅಂಗವಾಗಿರ್ಪುದು
ಅಂಗವೀ ಮಂತ್ರಕ್ಕೆ ಲಿಂಗ ।
ಲಿಂಗ ಮಂತ್ರಕ್ಕೆ ಭಿನ್ನವಿಲ್ಲೆಂದು ಮುನಿ
ಹಿಂಗೊಪ್ಪವಿಟ್ಟುಸುರಿದನು ॥ ೨೬

ದಿಟ್ಟಿಲಿ ಕಂಡರೆ ಅಘಹರ ರುದ್ರಾಕ್ಷೆ
ಮುಟ್ಟಲು ಗೋದಾನಫಲವು
ಕಟ್ಟೊಂದುಮಾಲೆಯ ಧರಿಸಿದಾತಗೆ ರುದ್ರ
ಪಟ್ಟವಪ್ಪುದು ಭೂಪಗೇಳ ॥ ೨೭

ಮೂಲವೆ ಬ್ರಹ್ಮತಾ ರುದ್ರಾಕ್ಷಿಯಂತ
ನ್ನಾಳವೆ ವಿಷ್ಣು ಮುಖ ರುದ್ರ ।
ಮೇಲುಬಿಂದುಗಳೆಲ್ಲವು ಸರ್ವಮ
ರಾಳಿಗಳೆಂದನಾ ಮುನಿಯು ॥ ೨೮

ದಂತವು ಬಂತವು ವಂತವು ಲಂತವು
ಮಂತವು ಎಂಬಯಿದು ಮಾತೃಕೆ ।
ಅಂತರಿಸದೆ ರಾಯ ಚಿಂತಿಸುತಿರೆ ನಿನಗೆ
ಕಂತುಹರನು ದಯವಪ್ಪ *॥ ೨೯

ಎಲ್ಲ ಮಂತ್ರಗಳ ಮುಡಿಯ ಮಾಣಿಕ
ಎಲ್ಲ ಶಾಸ್ತ್ರಕ್ಕೆ ಅಧಿಪತಿಯು ।
ಎಲ್ಲ ತತ್ತ್ವಗಳಿಗಾಧಾರ ಪಂಚಾಕ್ಷರಿಯ
ಸೊಲ್ಲ ನಾನೆಂತು ಬಣ್ಣಿಪೆನು ॥ ೩೦

ಆಲಿಸಿ ಕೇಳ್ದಡೆ ಭವನಾಶ ಮಾಳ್ಪುದು
ನಾಲಗೆಯಲಿ ಜಪಿಸಿದಡೆ ।
ಶೂಲಿಯಪದವೀವುದೀ ಪಂಚಾಕ್ಷರಿ
ಪೇಳುವೆನೇನ ಕೇಳರಸ ॥ ೩೧

ಆರಿದೊಮ್ಮೆ ನೆನೆದಡೆ ಗಣಪದವೀವುದು
ಮರದೊಮ್ಮೆ ನೆನೆಯೆ ಗುರುಪದವು ।
ಅರಸ ಕೇಳು ಸಪ್ತಕೋಟಿ ಮಂತ್ರಗಳು
ಸರಿಯಲ್ಲ ಪಂಚಾಕ್ಷರಿಗೆ ॥ ೩೨

ರಾಯನೆ ಕೇಳು ವೇದ ನಾಲ್ಕಕೆ ಜನನಿಯು
ಗಾಯತ್ರಿಮಂತ್ರ ವೇದಕ್ಕೆ ।
ತಾಯಿ ಷಡಾಕ್ಷರಿಮಂತ್ರವ ನುತಿಸಲು
ಬಾಯೊಂದಕಳವಟ್ಟುದಿಲ್ಲ ॥ ೩೩

---

* ದಂತವು: ದಕಾರದ ನಂತರದ ಅಕ್ಷರ 'ನ', ಬಂತವು: ಬಕಾರದ ನಂತರದ ಅಕ್ಷರ 'ಮ' ವಂತವು: ವಕಾರದ ನಂತರದ ಅಕ್ಷರ 'ಶಿ', ಲಂತವು: ಲಕಾರದ ನಂತರದ ಅಕ್ಷರ 'ವ' ಮಂತವು: ಮಕಾರದ ನಂತರದ ಅಕ್ಷರ 'ಯ', ನಮಃ ಶಿವಾಯ ಎಂದಾಗುತ್ತದೆ.

ಏನೆಂಬೆನೀ ಷಡಾಕ್ಷರಿಯ ಮಂತ್ರ ವೀರ
ಸೇನನೆ ಕೇಳು ಇನ್ನು ಘನವ ।
ಭೂನಾಥ ಮುನ್ನೋರ್ವ ಬೇಟೆಯನಾಡುತ
ಕಾನನದೊಳು ಬರುತಿರ್ದ ॥ ೩೪

ಅರಣ್ಯದೊಳು ಬರೆ ರಾಯನಗಣ್ಣಿಗೆ
ದೋರಿದನೋರ್ವ ತಾಪಸನು ।
ದೂರದೊಳಾತನ ಭಲ್ಲೂಕಮೃಗವೆಂದು
ಕೂರಂಬು ತೊಟ್ಟನಾ ಮುನಿಗೆ ॥ ೩೫

ರಾಯನೆಚ್ಚಂಬಲಿ ಗಾಯವಡೆದ ಮುನಿ
ಬಾಯಿಂದಲಾ ಶಿವನ ಕರೆಯೆ ।
ಆಯತಿವರಗೆ ಮತ್ತಾ ನೃಪ ಋಷಿಯನಿಬರ್ಗೆ
ಕಾಯಜರಿಪು ದಯವಾದ ॥ ೩೬

ಗೋಹತ್ಯೆ ಬ್ರಹ್ಮ ಹತ್ಯೆ ಶಿಶು ಅಶ್ವಹತ್ಯೆ
ಸ್ತ್ರೀ ಹತ್ಯೆ ಶತಕೋಟಿ ಪಾಪ ।
ಹೋಹದು ಲಿಂಗವನೊಂದನರ್ಚಿಸಿದಡೆಂದು
ಆ ಹಠಯೋಗಿ ಆಡಿದನು ॥ ೩೭

ನಂಬಿದನೀ ಬೋಧೆಗೇಳುತ ಮುದವೆತ್ತು
ಕುಂಭಜಮುನಿಗೆ ಮೈಯಿಕ್ಕಿ ।
ಶಂಭುಪದೇಶವ ಪಡೆದನಾ ಯತಿಯಿಂದ
ಕುಂಭಿನೀಪತಿ ವೀರಸೇನ ॥ ೩೮

ಮಸ್ತಕದೊಳು ಕೇಳು ದಯದಿ ದೇಶಿಕ
ಹಸ್ತವನಿರಿಸಿ ಮಂತ್ರವನು ।
ವಿಸ್ತರಿಸಿದ ಕರ್ಣವೆರಡಕ್ಕೆ ಅಂಗೈಯ್ಯ
ಹಸ್ತ ತಲಕಿತ್ತು ಲಿಂಗವನು ॥ ೩೯

ಈ ಲಿಂಗ ಚಿನ್ಮಯನೀ ಲಿಂಗ ಚಿದಾತ್ಮ
ನೀ ಲಿಂಗ ಸಕಲ ದೈವಾತ್ಮ ।
ಈ ಲಿಂಗ ಜನಕನೆಂದಾ ಮುನಿ ಪರಸಿದ
ಬಾಲಕ ಕೇಳು ಭೂಪನಿಗೆ ॥ ೪೦

ಅವನಿಪನಣುಗನಲ್ಲದೆ ಮಿಕ್ಕ ನರರಿಗೆ
ಭುವನವನಾಳುವ ಸಿರಿಯುಂಟೆ ।
ಕುವರ ಕೇಳೀ ರಾಯ ಮುನ್ನೋಂತ ಫಲದಿಂದ
ಶಿವಭಕ್ತಿ ಸಂಪದಗಂಡ ॥ ೪೧

ಈಶಲಾಂಛನವಿರ್ದನೋರ್ವನ ವದನವ
ನೇಸರುದಯಕೆ ನೋಡಿದಡೆ ।
ಸಾಸಿರಕೋಟಿ ತೀರ್ಥವ ಕೊಂಡ ಫಲ ಕೈ
ಲಾಸವಪ್ಪುದು ರಾಯ ಕೇಳು ॥ ೪೨

ಕುಂಭಿನಿಪತಿ ಕೇಳು ಶಿವಭಕ್ತನಾದವ
ಶಾಂಭವ ಮುನಿಯಿರೆ ಬಿಟ್ಟು ।
ಉಂಬಲಾದಪುದು ಕೋಟಿವರುಷ ಪಂದಿ
ಡಿಂಬದಿ ಬಂದ ಪಾತಕವು ॥ ೪೩

ವದನದಿ ಶಿವ ಮಂತ್ರ ನೊಸಲೆಡೆ ಭಸಿತವು
ಒದಗಿ ರುದ್ರಾಕ್ಷ ಕಂಠದಲಿ ।
ಸದುವಿನಯದಿ ತಾಳ್ದ ನರ ರುದ್ರನೆಂದು
ಸುದತಿಗೆ ಹರನೆಂದ ಕೇಳು ॥ ೪೪

ಅವನೀಶ ಕೇಳು ಶಿವಮಂತ್ರ ಶಿವಪೂಜೆ
ಶಿವಗಣರೊಡನೆ ಬಾಳೆಂದು ।
ಶಿವನವರ ಕಂಡರೆ ಶಿವನೆಂದು ಭಾವಿಸು
ಶಿವ ನಿನಗೊಲಿವನರಸನೆ ॥ ೪೫

ತಿಂಗಳ ಶಿವರಾತ್ರಿ ವ್ರತವಿತ್ತು ರಾಯಗೆ
ಲಿಂಗವ ಧರಿಸಿ ಅಗಸ್ತ್ಯ ।
ಅಂಗನೆಯಳಗೂಡಿ ಸುಖದಲ್ಲಿ ಬಾಳೆಂದು
ಮಂಗಳಪುರಕ್ಕೆ ಬೀಳ್ಕೊಟ್ಟ ॥ ೪೬

ಅಳಿಗಳು ಪೂಗಂಪ ತಿಳಿಜೊನ್ನ ಚಕೋರ
ನಳಿನಗಳಂಬರಮಣಿಯ
ಬಲವ ಹಾರೈಸುವಂತೆ ನೃಪ ನಿನ್ನ ಬಯಸುವ
ಲಲನೆಯ ಇಚ್ಛೆಯ ಸಲಿಸೆಂದ ॥ ೪೭

ಬೇಸರವಿರಲಿಲ್ಲ ಗುರುವಚನಕೆ ಮನ
ಸೂಸಲಿಲ್ಲ ಪರಧನದಲಿ ।
ಆಸೆಬಡಲಿಲ್ಲನ್ಯ ಕ್ಷೇತ್ರಕೆ ಭಕ್ತರಾ
ವಾಸವೆ ಕಾಶಿ ಕೇಳೆಂದ ॥ ೪೮

ಕಳಸಸಂಭವ ಮುನಿ ವೀರಸೇನನಿಗೊಲ್ದು
ನಳ ನೀಲರೆಂಬ ಶಿಷ್ಯರನು ।
ಪೊಳಲಿಗೆ ರಾಯನ ಬೀಳ್ಕೊಟ್ಟು ಬನ್ನಿ ಯೆಂದು
ಕಳುಪಿದ ಯತಿ ಭೂಪನೊಡನೆ ॥ ೪೯

ಗುರು ಕುಂಭಸಂಭವನ ಚರಣಾರವಿಂದಕ್ಕೆ
ಕರವ ಮುಗಿದು ರಾಯ ನಮಿಸೆ ।
ಕರುಣದಲಿ ಬೀಳ್ಕೊಂಡು ಪುರದೆಡೆಗೈತರೆ
ಪಿರಿದಪ್ಪ ಬನವ ಮುಂದೆ ಕಂಡು ॥ ೫೦

ಭೂವೆಣ್ಣು ತಾ ತನ್ನ ಕುವರರದಲೆಯಲ್ಲಿ
ಪೂವಣ್ಣು ಫಲ ಕಾಯಿವಾಂತು ।
ಈ ವೀರಸೇನಗೆಗಾಣಿಕೆ ಕಳುಪಿದ
ಆ ವೊಲದಿತ್ತು ಬನಮೆಂದ ॥ ೫೧

ನಿಮ್ಮ ಮೋಹದ ಪಶು ನಿಮ್ಮ ಮೋಹದ ಜೀವ
ನಿಮ್ಮ ಮೋಹದ ಕಂದ ನಾನು ।
ನಿಮ್ಮಿಂದಲೇ ಪೊಳಲುವ ಕಂಡೆನೆಂದೀಶ
ಗಮ್ಮನಾಡಿದ ಋಷಿಗಳಿಗೆ ॥ ೫೨

ಸಲಹಿದ ಮಂತ್ರೋಪದೇಶವನಿತ್ತನಾ
ಜಲದೊಳಿಳಿದನ ಎಡರೆಡೆಯ ।
ದಲೆಗಾಯಿದವನ ವರಪದಕೆ ಬೀಳದಿರೆ ಕೇಳ್ಸುತ
ಕುಲಕೋಟಿ ನರಕವಹುದೆಂದ ॥ ೫೩

ಒಂದಾಗಿಯೆಯಿತಂದ ಮುನಿ ವಟುಗಳ ರಾಯ
ಹಿಂದಕಗಸ್ತ್ಯನ ಬಳಿಗೆ ।
ವಂದಿಸಿ ಬೀಳ್ಕೊಟ್ಟು ತಾನಿತ್ತ ಬಂದನು
ನಂದನ ಬನಕೆ ಕೇಳು ಮಗನೆ ॥ ೫೪

ಬಳಲಿ ಬಂದ ರಾಯ ತಳಿತ ಬನವ ಪೊಕ್ಕು
ಗೊಳನೆಡೆಯಲಿ ಒರಗಿರಲು ।
ಎಳೆವಳ್ಳಿ ಪೂಗಿಡ ಫಲದ ಕುಲಕೆ ನೀರ
ಸಲಿಸುತಲಿರಲು ದೋಂಟಿಗನು ॥ ೫೫

ಸತಿಯರ ಕುಲರತ್ನವೆನಿಸುವ ವಿಜ್ಞಾನ
ಲತೆಯಳಗೂರ್ತುನೋಂಪಿಯನು ।
ಕ್ಷಿತಿವರಗೈಯ್ಯಲಾ ಬನದಲ್ಲಿ ನಿಂದನೊ
ಸುತಗೇಳು ರಾಯ ಪೊಕ್ಕಿರ್ದ ॥ ೫೬

ಸೂನುವೆ ಕೇಳು ಅರಸನಹುದಲ್ಲವೆಂಬನು
ಮಾನದಿ ಮೆಲ್ಲನಡಿಯಿಟ್ಟು ।
ತಾನವನ್ನೈದಿ ಒಯ್ಯನೆದೆರೆದನು ರಾಯ
ನಾನನಕಿಟ್ಟ ಮರೆಯನು ॥ ೫೭

ಜೀವಿಲ್ಲದೊಂದರೆ ದಿನ ಬಾಳಲರಿಯದ
ಜೀವಗಳಿಗೆ ಜೀವವೀವ ।
ಜೀವನು ತನಗೆ ಜೀವನಪ್ಪ ಮುಖ ರಾ
ಜೀವ ಜೀವಧರನ ಕಂಡ ॥ ೫೮

ಸಸಿಯನು ಸೂಡದ ಬಿಸಗೊರಳಲ್ಲದ
ಬಿಸು ವಿಲೋಚನವಡಗಿಸಿಯು ।
ಪಶುಪತಿರೂಪನು ಮೊಡೆದರಸ ಪಟ್ಟಿರೆ
ಬೆಸಗೊಳದವ ನೋಡುತಿರ್ದ ॥ ೫೯

ಪಾವೆನ್ನದುಡುಕದೆ ಬಿಡದೆಂಬ ಭೀತಿಯಲಿ
ಮಾವನಾಗಸದಿಂದಲಿಳಿದು ।
ಈ ವನ ಮರೆಗೊಂಡನೆಂಬೊಲು ಕೇಳು ಸುತ
ಭೂವರನೊರಗಿರ್ದನಲ್ಲಿ ॥ ೬೦

ಅಂಗಜ ಮದಕರಿವೊಲು ಆ ಬನದಲ್ಲಿ
ತಂಗಾಳಿಗುಸುಮದ ರಜವ ।
ಪಿಂಗದೆ ಚೆಲ್ಲಾಡುತಿರ್ಪುದು ನೋಳ್ಪ ಜ
ನಂಗಳಿಗೆ ಅತಿ ಚೆಲುವೆತ್ತು ॥ ೬೧

ತಾವರೆಸಖನ ಮೈಯುಷ್ಣವನಾರೈಯ್ಯ
ಲಾ ವನದ ತನಿಗಂಪ ಬಾಚಿ ।
ವೈವೊಲು ತಂಬೆಲರು ಸುಳಿದಾಡುತಿರ್ಪುದು
ಭಾವಕಜನರ ಕಂಗಳಿಗೆ ॥ ೬೨

ನಾರಿಯ ಫಣೆಭೂತಿಗಾರಣವೆನಗೀಗ
ಸಾರಿತೀ ಶಿವಭಕ್ತಿ ಎಂದು ।
ಓರುವನಾ ಬನದೇವಿಗೆ ಏಕಾಂತ
ವಾರಾಯ ಪೇಳ್ದವೊಲಿರ್ದ ॥ ೬೩

ಪೊಡವಿಪನ ಸತಿ ಒಡಗೂಡದಾ ರಾಯನು
ಗೆಡದಿರೆಗಂಡು ದೋಟಿಗನು
ಕಡು ಚೋದ್ಯನಾಗಿ ರಾಜೇಂದ್ರಪಾದಕ್ಕೆ
ಪೊಡಮಟ್ಟನವ ದೂರದಿಂದ ॥ ೬೪

ಬರೆ ಮುಂದುಗಂಡನಾ ಪವಡಿಸಿದರಸನ
ಚರಣ ಸರೋಜಯುಗ್ಮವನು ।
ಬೆರಗೊಂದಿ ನೋಡಿದ ನೃಪನಂಗವ ಬನಪಾಲ
ಸಿರವಾಗಿ ಕೈಯೆರಡ ಮುಗಿದು ॥ ೬೫

ಮುನ್ನೇಸುಗಾಲವು ತಪವಿರ್ದನಿಗೆ ಶಿವಪ್ರ
ಸನ್ನನಾದೊಲು ಬನಪಾಲ ।
ಗಣ್ಣಲಿ ರಾಯನನೀಕ್ಷಿಸಿಯಾನಂದ
ಮುನ್ನೀರಿನೊಳು ಬಿರ್ದನೆಂದ ॥ ೬೬

ಪುತ್ರನೆ ಕೇಳರಸಿನ ರಾಣಿ ಯಿರಲತ್ತ
ರಾತ್ರೊಂದು ಸ್ವಪನದೋರಿತ್ತು ।
ಚಿತ್ರವಿದೇನೆಂದು ತನ್ನ ಮನಕೆ ಬಂದ
ಮಿತ್ರೆಯೋರ್ವಳ ಬರಿಸಿದಳು ॥ ೬೭

ಪಾಳುಗುಡಿಯಲೊಂದು ಲಿಂಗವ ನಿಲಿಸುವ
ರೋಳಿವಳಿಗೆ ಚಂದವಿಟ್ಟು ।
ಓಲೆವಾಗಿನಯೆನಗೀವರೆಂದಾ ರಾಣಿ
ಪೇಳಿದಳು ಸಖಿಗೆ ಕನಸನು ॥ ೬೮

ನೀ ಕಂಡ ಸ್ವಪ್ನವು ಲೇಸು ಲೇಸಮ್ಮಾಜಿ
ಭೂಕಾಂತನೈತಂದನೆಂಬ ।
ವಾಕುವನೆ ಕೇಳು ಸುಖಿಯಪ್ಪ ಸೂಚನೆ
ಗೀ ಕನಸ ಶಿವ ಬರಿಸಿದನು ॥ ೬೯

ಪೊಳಲ ಪಾಳ್ಗುಡಿ ಲಿಂಗ ಅರಸನಿಲ್ಲಿಗೆ ಬಂದು
ನಲಿವುದೆ ಒಳ್ಳೆಯಾ ಚಂದ ।
ಒಲಿದಿತ್ತವಾಗಿನ ಮುತ್ತೈದೆತನವೆಂದು
ತಿಳಿಪಿದಳಾ ಸಖಿ ಕನಸ ॥ ೭೦

ಮೆಚ್ಚಿತ್ತಳು ನುಡಿಗೇಳುತಲಾ ರಾಣಿ
ಮೆಚ್ಚಿನಾಭರಣವ ತರಿಸಿ ।
ಉಚ್ಚಯದಿಂದಲಾ ಸಖಿಗಿತ್ತು ಬೀಳ್ಕೊಟ್ಟು
ಮಚ್ಚಲೋಚನೆ ಯಿತ್ತಮಿರಲು ॥ ೭೧

ಧ್ಯಾನದಪುರುಷನ ಸೈನ್ಯ ದೊಳಿರ್ಪನ
ಮಾನಿನಿಯೊಳು ಬೆರದಿಹನ ।
ತಾನೆಬ್ಬಿಸಲು ಪಾಪವೆಂದು ವನಪಾಲಕ
ಮೋನಗೊಂಡವ ಮರಳಿದನು ॥ ೭೨

ಇಳೆವರನೆನ್ನಯ ಮನದ ನೋವಗಾಣದ
ಕಳವಳಮಲ್ಲದಿನ್ನಾವ ।
ಬಳಲಿಕೆದೋರದೆ ಲೋಕವ ತಾನಿತ್ತ
ಸಲಹುತಲಿರ್ದ ಕೇಳ್ಮಂತ್ರಿ ॥ ೭೩

ತಳುಗೆಯ್ಯದೀ ವಾರ್ತೆ ದಂಡನಾಯಕನಿಗೆ
ತಿಳುಹಬೇಕೆಂದು ದೋಟಿಗನು ।
ರಳಿಯಿಂದಲವ ಬರುತಿರ್ದನೋಲಗ ಸಾಲೆ
ಬಳಿಗೆ ಕೇಳೆಂದ ದೀಕ್ಷಿತಗೆ ॥ ೭೪

ಇಂಗಡಲ ತೆರೆ ತಿಳಿಜೊನ್ನದರಾಸಿ
ಮಂಗಳ ರಜತಾದ್ರಿಯಂತೆ ।
ಸಿಂಗಾರ ಬೆಳ್ಳಿನ ಮುತ್ತಿನೋಲಗಸಾಲೆ
ಕಂಗೆಸೆದಿಹುದು ಕೇಳು ಮಗನೆ ॥ ೭೫

ಆನಂದಮಯ ಜಲ ವದನಂಗಳಬ್ಜವು
ಮೀನ್ಗಳೆ ಗಂಡು ಢಾಳಿಸುವ ।
ಮೇಣ್ಚಾಮರ ತೆರೆಗಳಂತೆಸೆವುದಾಸ್ಥಾನ
ತಾನಬ್ಧಿಯಂತೆ ಕಂಗಳಿಗೆ ॥ ೭೬

ಸಪ್ತಾಂಗ ಲಕ್ಷಣದಿಂದೊಪ್ಪುತಿಹ ಸಭೆ
ದೀಪ್ತಿಯೊಳು ಮಂತ್ರಿ ಕುಳ್ಳಿರಲು ।
ಗುಪ್ತವಾಗಿರ್ದ ರಾಯನ ವಾರ್ತೆಯ ಕೊಂಡು
ವ್ಯಾಪ್ತಿಂದ ಬಂದ ದೋಟಿಗನು ॥ ೭೭

ತುಂಬಿದೋಲಗಗೊಟ್ಟು ಕುಳಿತಿರೆ ಮಂತ್ರಿ ತಾ ದಾ
ಡಿಂಬ ದರಾಕ್ಷಿ ಪಣ್ಣೂವ ।
ಮುಂಬಿಲೆ ಗಾಣಿಕೆಯ ಇಟ್ಟು ವನಪಾಲಕ ಕ
ರಾಂಬುಜ ಮುಗಿದು ಬಿನ್ನೈಸೆ ॥ ೭೮

ಮಾತಿಲಿ ಪ್ರಾಜ್ಞನು ಮೈಯೊಳು ಮನ್ಮಥನು
ನೀತಿಗೆ ತಾ ಗಂಪಿಸುವನು ।
ಖ್ಯಾತಿಗೈಯನು ದಯರಸಮುಳ್ಳ ನೃಪ ಬಂದ
ಓತಿರ್ದ ವೈದಿಂದ್ರಿಯ ವಿಷಯ ॥ ೭೯

ಸತ್ತ ಶ್ರವಕೆ ಪ್ರಾಣ ಬಂದೊಲು ಗವಿದಿರ್ದ
ಗತ್ತಲೆಗೆ ಸಸಿ ಮೂಡಿದಂತೆ ।
ಚಿತ್ತೈಸು ಮಂತ್ರೀಶ ನಮ್ಮ ನಂದನ ಬನ
ದೊತ್ತಿಲಿ ಗಂಡೆ ನಾ ನೃಪನ ॥ ೮೦

ಕಾಬಡಿನ್ನಾ ಭೂಪ ರುದ್ರನಾಗಿಯು ನಮ್ಮ
ಈ ಭೂಮಿ ಪಾವನಗೈಯ್ಯೆ ।
ತಾ ಬಂದನೆಂದು ಮಂತ್ರಿಯಗೂಡ ಪೇಳಿದ
ನಾ ಬನಪಾಲ ಕೇಳೆಂದ ॥ ೮೧

ವನುರುಹ ಸಂಕುಲಕೆ ಇನನುದಯವಾದಂತೆ
ತನೆಯರಿಟ್ಟಡಿಯನೀಕ್ಷಿಸುತ ।
ಜನನಿ ಬಪ್ಪೊಲು ಮಂತ್ರಿ ಕೇಳೆಮ್ಮ ರಾಯನು
ಬನಕೆ ದೋಟಿಗ ಬಂದನೆಂದ ॥ ೮೨

ಗಮ್ಮನೆ ರಾಯನ ನುಡಿಗೇಳಿ ಮಂತ್ರಿಗೆ
ಜುಮ್ಮನೆದ್ದವು ಮೈನವಿರು ।
ಉಮ್ಮಯದಿಂದಲಾ ಬನಪಾಲಗೆ ಇತ್ತ
ಇಮ್ಮಡಿ ಉಡುಗೊರೆಗಳನು ॥ ೮೩

ಅರಸಿನ ವಾರ್ತೆಗೇಳುತ ಜನವೆಲ್ಲ
ಹರುಷಬ್ಧಿಯೊಳು ಮುಳುಗುತಲಿ ।
ಕರೆದೊನ ಪಾಲಗಿತ್ತರು ತಮ್ಮ ಮೈಯ್ಯೊಳು
ಧರಿಸಿದ ಪೊಂದೊಡುಗೆಗಳನು ॥ ೮೪

ಬಂದನಾ ಜನಗೂಡಿ ದಂಡೇಶ ರಾಣಿರ್ಪ
ಮಂದಿರಕತಿ ಮುದವೆತ್ತು ।
ವಂದನೆಗೈದರಸಿಯಗೂಡವೇಳಿದಾ
ನಂದದಿ ನೃಪನ ವಾರ್ತೆಯನು ॥ ೮೫

ಸೀತೆಗೆ ರಾಮನ ವಾರ್ತೆಯ ವಾನರ
ನಾಥ ತಂದೊರೆದೊಲು ಮಂತ್ರಿ ।
ನೀತಿಲಿ ವೀರಸೇನನು ಬಂದ ಸವುಜ್ಞೆಯ
ನಾ ತರುಣಿಗೆ ಪೇಳ್ದ ಕೇಳಾ ॥ ೮೬

ಸುದ್ದಿಯ ಕೇಳಲಾ ರಾಣಿಗೆ ಮೈದುಂಬಿ
ಎದ್ದವು ಮೈ ರೋಮಾಂಚನವು ।
ಬಿದ್ದಳು ವಿಪುಳಾಂಬುಧಿಯೊಳೆಂದಾ ಮುನಿ
ವೃದ್ಧನಾಡಿದ ಶಿಷ್ಯನಿಗೆ ॥ ೮೭

ಬಡತನದಿಪ್ಪಂಗೆ ಕಡವರ ಬಪ್ಪೊಲು
ನಡುಗಡಲೊಳು ಮುಳುಗುವಗೆ ।
ಪಡಗೊದಗಿ ಬಂದಂತೆ ಅಮ್ಮಾಜಿ ಕೇಳು ನಮ್ಮ
ಪೊಡವಿಪ ಬಂದ ವೀರಸೇನ ॥ ೮೮

ಸಾಯದ ಗಂಡನ ಮುನ್ನೇಸುಗಾಲ ದಾ
ಕ್ಷಾಯಿಣಿ ತಪವಿರ್ದು ಪಡೆದಳ ।
ಮ್ಮಯ್ಯ ಸುದೈವದಿ ನೀವಿಂದು ವೀರಸೇನ
ರಾಯನವಡೆದಿರೆಂದ ಮಂತ್ರಿ ॥ ೮೯

ಆ ನುಡಿಗೇಳುತಾ ರಾಣಿ ಇತ್ತಳು ಆಗ
ಧೇನುಗಳೊಂದು ಸಾಸಿರವ ।
ಆನೆ ತುರಗ ಫಲ ದಾನವಗೊಟ್ಟಳು
ಮಾನಿನಿ ಪುರುಷ ಬಂದುದಕೆ ॥ ೯೦

ಸಿರಿಗೆಲ್ಲವಧಿಕ ಮುತ್ತೈದೆತನವೆಂಬ
ಸಿರಿಗಿನ್ನು ಎಣೆಗಾಣೆನೆಂದು ।
ಸಿರಿಯೊಂದು ಕೋಟಿವಡೆದಂತೆ ಪುರುಷನ
ಸಿರಿಗೇಳಿ ಸತಿಗಾಯಿತೆಂದ ॥ ೯೧

ನೀ ನೋಂತ ಪುಣ್ಯದ ಫಲಿದಿಂದ ಕೇಳಮ್ಮ
ತಾನೊಲ್ದು ಬಂದ ನಮ್ಮಪ್ಪ ।
ಮಾನವಪತಿ ನಮ್ಮ ಬನದಲ್ಲಿ ಇರ್ಪುದ
ನೀನೋಡಲುಚಿತವಾಗೆಂದ ॥ ೯೨

ಭೂಪ ಬಂದುದಗೇಳಿಯಾ ರಾಣಿ ತಾನಿರ್ದ
ಉಪ್ಪರಿಗೆಯ ಪೊರಮಟ್ಟು ।
ಒಪ್ಪಿತ್ತಳು ಒಳ್ಳೆಯುಡುಗೊರೆಯ ಮಂತ್ರಿಗನೇಕ
ಕಪ್ಪಡ ಕಂಠಮಾಲೆಯನು ॥ ೯೩

ಕಟ್ಟಿಸಿದಳು ಗುಡಿ ತೋರಣ ಮನೆ ಮನೆ
ಗಿಟ್ಟಳು ಕಳಸ ಕನ್ನಡಿಯ ।
ಪಟ್ಟಣ ವೀಥಿ ವೀಥಿಗೆ ಗಂಧ ಕಸ್ತೂರಿ
ಗೊಟ್ಟ ಚಳೆಯನರ್ತಿಯಲಿ ॥ ೯೪

ಕ್ಷೀರಾಬ್ಧಿಯೊಳು ಜನಿಸಿದ ಲಕ್ಷ್ಮಿಯ ತಂದು
ನಾರಾಯಣಗೆ ಸುರರಿತ್ತ ।
ಕಾರಣದೊಳು ಮಂತ್ರಿ ಪೊಳಲೆಂಬ ವಾರ್ಧಿಂದ
ನಾರಿಯ ನೃಪಗೊಯಿವುತಿರ್ದ ॥ ೯೫

ಅಳಿವಳೋ ನಾನಗಲಿದ ನೋವಿಗಂಗವ
ನುಳಿವಳೋ ನನ್ನಾಸೆಗಸುವ ।
ಉಳಿದಳೋ ಎಂದು ಬನದಲ್ಲಿ ಕುಳ್ಳಿರ್ದ
ಕಳವಳದಿಂದತ್ತ ನೃಪನು ॥ ೯೬

ದಂಡನಾಯಕನಿಂದಲಾ ಬನಪಾಲಕ ಬೀ
ಳ್ಕೊಂಡು ಬಂದಿತ್ತ ನೃಪನ ।
ಕಂಡೆರಗಿದಡೆ ತೋಟಿಗನ ಕಂಡು ರಾಯ
ಮಂಡೆ ನೇವರಿಸಿ ಕೇಳಿದನು ॥ ೯೭

ಮಾಧವಾಲವ ಜಂಬಿ ಕದಳಿಯ ಪಣ್ಗೊನೆ
ಗೇದಿಗೆ ಮೊದಲಾದ ಪೂವ ।
ಮೇದಿನಿವರನಿಗೆಗಾಣಿಕೆ ತಂದಿಟ್ಟು
ಪಾದಕೊಂದಿಸೆಯವನೆಂದ ॥ ೯೮

ಯಾವೆಡೆ ನೀನಿರ್ದೆ ನಿನ್ನ ಸುಳುಹು ಮತ್ತಿ
ನ್ನಾವ ವನದೊಳುಗಾಣಲಿಲ್ಲ ।
ಸೇವೆಯದೆಗೆದರೊ ನೀನಿಲ್ಲಿ ಮಾಳ್ಪುದ
ಭೂವರ ಗೇಳ್ದ ದೋಟಿಗನ ॥ ೯೯

ಪೊಡವಿಪ ಚಿತ್ತೈಸು ನೀವಿತ್ತ ಬನಸೇವೆ ಪೊಂ
ಬೊಡಲನೆಯಿತಂದಡಾನಂಜಿ ।
ವಿಡುವವನಲ್ಲ ನಾನಿನ್ನ ಕಿಂಕರನೆಂದು
ನುಡಿದ ರಾಯನಿಗೆ ದೋಟಿಗನು ॥ ೧೦೦

ನನ್ನರಿಕಿಲ್ಲದೀ ಬನದೊಳು ತಳಿರ್ವಾಸಿ
ಲಿನ್ನೊರಗಿರ್ಪನಾರೆಂದು ।
ಸನ್ನಿಲಿ ಐತಂದೊಯ್ಯನೆ ನಿಮ್ಮ ನೋಡಿದೆ
ನಿನ್ನವನೆಂದ ದೋಟಿಗನಾಗ ॥ ೧೦೧

ಎಬ್ಬಿಸಲಾನಂಜಿ ನಿಮ್ಮ ವಾರ್ತೆಯನಾ
ನುಬ್ಬಿ ಕೊಂಡೊಯಿದೆ ಚಾವಡಿಗೆ ।
ದುಬ್ಬಿಸಲಾ ಮಂತ್ರಿ ಮುದವೆತ್ತು ರಾಣಿಗೆ
ಸಬ್ಬರೊಂದಾಗಿ ಪೇಳೆ ಪೋದ ॥ ೧೦೨

ಇಳೆವರನೊರ್ವನೆ ಎಂದಿತ್ತಲೆನ್ನನು
ಕಳುಪಿದ ನಿನ್ನ ಸಂಗಕೆ ।
ದಳಗೂಡಿ ರಾಣಿಯ ತಾ ಕೊಂಡು ನೃಪ ತಾ ನಿಮ್ಮ
ಬಳಿಗೆ ಬಹೆನೆಂದನಾ ಮಂತ್ರಿ ॥ ೧೦೩

ನಲ್ಲಳು ಪ್ರೇಮದೊಳು ಐದಾಳೆ ಮಂತ್ರಿ ಮು
ನ್ನೆಲ್ಲರಿರ್ಪರೆ ಚಂದವೆತ್ತು ।
ಮೆಲ್ಲನೆಗೇಳಲಾ ರಾಯಗೆ ಆ ಬನ
ದೊಲ್ಲಭ ಮಗುಳಿಂತೆಂದ ॥ ೧೦೪

ನೇಸರಿಲ್ಲದ ದಿನ ಕಳಸಮಿಲ್ಲದ ಹರ್ಮ್ಯ ಮಧು
ಮಾಸಮಿಲ್ಲದ ಬನ ಕಣ್ಗೆ ।
ಸೂಸದು ರಮ್ಯವನರಸ ನೀನಿಲ್ಲದ
ದೇಸ ಮುಕ್ಕಾಗದೆ ಎಂದ ॥ ೧೦೫

ನೆನೆವಳೆ ನಮ್ಮನೆಂದಾದಡೆ ತಾ ತನ್ನ
ಮುನಿಸಿನೊಳಿರ್ಪಳೆ ಎಂದು ।
ಬನಪಾಲಕನೊಡಗೇಳಿದನಾ ರಾಯ
ಬಿನದದಿಂದ ನೀ ಬಲ್ಲೆ ಎಂದು ॥ ೧೦೬

ವಲ್ಲಭಗೇಳು ನೀನಗಲಿದ ಮೊದಲು ನಾ
ನಲ್ಲಳ ನೋಂಪಿಗೋಸ್ಕರವು ।
ಪುಲ್ಲಗಳನಡಕುತಲಾ ತಾಯ ರೀತಿಯ
ಬಲ್ಲುದಾ ಮನವೆನ್ನದೆಂದ ॥ ೧೦೭

ಭೂವರಗುಲ ಚಿಂತಾಮಣಿ ಕೇಳು ಖಗ
ದೇವನ ಬಾಣ್ಬೇಜದಿಂದ ।
ಪಾವಿನ ನಂಜಳಿವಂತಾ ರಾಣಿಗೆ
ಸಾವಿಲ್ಲ ನಿನ್ನ ನೆನವಿಂದ ॥ ೧೦೮

ಕುಂಡಲಿಯ ಧ್ಯಾನವಲ್ಲದೆ ಮಗುಳೊಂದನು
ಮಂಡಿಸದಾ ಕೀಟಕನು ।
ಮಂಡಲ ಪತಿಗೇಳು ನೀನಲ್ಲದನ್ಯರ
ಪುಂಡರೀಕಾಕ್ಷಿ ಚಿಂತಿಪಳೆ ॥ ೧೦೯

ಭೂರಮಣನ ಕರ್ಣಗಳೆಂಬ ಎರಡನೆ
ತಾರೆನಾಮದಲಿ ದೋಟಿಗನು ।
ನಾರಿಯ ಗುಣ ಮಣಿ ದುಂಬಲು ಗುಡಿಗಟ್ಟಿ
ದೋರಿದವು ನೃಪಗೆ ಮೈನವಿರು ॥ ೧೧೦

ಮಂದ ಗಮನೆ ಜ್ಞಾನಲತೆಯ ಮೊಗದಾವರೆ
ಎಂದು ಗಾಂಬವೊ ಈ ಎನ್ನಕ್ಷಿ ।
ಸಂದೆಯವಡುತಿರಲಾ ರಾಯನೆದೆಯನು
ಕಂದರ್ಪ ಪೂ ಬಾಣವೆಚ್ಚ ॥ ೧೧೧

ಅಂಗಜನುರಿಯನು ತಾಳಲಾರದೆ ರಾಯ
ಕಂಗೆಡೆ ಗಂಡು ದೋಟಿಗನು ।
ಹೆಂಗಳ ಸವಿ ನುಡಿ ಮದ್ದೋರಿ ನಿಲಿಸುವ
ನಂಗಜನ ತಾಪವ ನೃಪಗೆ ॥ ೧೧೨

ಪಾಲುಕ್ಕಲುದಕವನೆರೆದೊಲು ಕೇಳ್ಬನ
ಪಾಲಕನಾ ರಾಣಿಯ ಮುದ್ದು ।
ಆಲಾಪದಿಂದಾ ನೃಪಗಾದ ಮದನನ
ಜ್ವಾಲೆಯನವ ತಂಬಿಸುವನು ॥ ೧೧೩

ಕಾಯಜ ಭೂಪನ ಬಾಣದಿಂದೆಚ್ಚ ಬಲು
ಮಾಯವ ಗಂಡು ದೋಟಿಗನು ।
ಆಯತಾಕ್ಷಿಯ ವಾರ್ತೆ ಮರುಜೇವಣೆಯ ನುಡಿ
ಸಾಯಗೊಡದಲಿಟ್ಟ ನೃಪನ ॥ ೧೧೪

ಅದೆ ಬಂದಳಾ ಜ್ಞಾನಲತೆ ಎಂಬ ನುಡಿಗಾಗ
ಹೃದಯಾಬ್ಜವಲರಿ ಗಣ್ಣಿಂದ ।
ಮುದ ಜಲವೊಗುವವು ರಾಯನಂಗಕೆ ಬಣ್ಣ
ಒದಗುವದಿಮ್ಮಡಿಯೆಂದ ॥ ೧೧೫

ನೋಡಲಿಲ್ಲ ಸತಿಯಳ ಕಣ್ಣ ದುಂಬಿ ಮಾ
ತಾಡಲಿಲ್ಲ ಸ್ತ್ರೀ ಮೇಳದೊಡನೆ ।
ಗೂಡಲಿಲ್ಲವದು ವಾರ್ತೆಗೆ ಮುದರಸ
ನಾಡೆರೆಯನಂಗ ದುಂಬಿತೆಂದ ॥ ೧೧೬

ಬರುವಳೋ ಬಾರಳೋ ತಾ ತನ್ನ ಮೊಗದೋರ
ದಿರುವಳೋ ಎಂದು ದೋಟಿಗನ ।
ಅರಸು ಬೆಸಗೊಂಡಡವನೆಂದ ವಾರ್ತೆಯ
ನೆರೆಯಾದ ನದಿ ನಿಂದುದುಂಟೆ ॥ ೧೧೭

ಆಕಾಂತೆ ಗುಣಗೇಳಿ ತವಕದಿ ನೋಡುವ
ವ್ಯಾಕುಳವೆಂಬಂಬು ಮನವ ।
ತಾಕಿ ಬಿಟ್ಟೆರಡು ಗಣ್ಣಿಂದ ನಿಟ್ಟಿಸುತಿರ್ದ
ಭೂಕಾಂತ ಸತಿ ಬಹ ಬರವ ॥ ೧೧೮

ತಾವರೆ ಗಂಧಿನಿ ತನ್ನನಗಲಿ ಪೋದಂತ
ನೋವಿಗೆ ಬಂದಪ್ಪದಿರಲು ।
ಜೀವವಿರದು ಎನ್ನ ಒಡಲೊಳೆಂದಾರಾಯ
ನಾ ವನ ಪಾಲಗಿಂತೆಂದ ॥ ೧೧೯

ಪೊಂಬೊಡಲನು ಮೃಗ ರೂಪಾದ ಶ್ರೀಹರಿ
ಎಂಬನ ಬತ್ತಲಿರಿಸಿದುದು ।
ಜಂಭಾರಿ ಕುಕ್ಕಟನಾದನು ಪೆಣ್ಣಿನ
ಪಂಬಲಿಲ್ಲದ ನರನಾದವ ॥ ೧೨೦

ಭೂಪನ ಒಡಲಲ್ಲಿ ತೀವಿದ ಮನ್ಮಥ
ತಾಪವ ಗಂಡು ದೋಟಿಗನು ।
ಆ ಪತ್ನಿ ಸದ್ಗುಣ ನೀತಿ ಮಾಧುರ್ಯದಾ
ಲಾಪಗಳದೋರಿ ಚಿಂತಿಸುವ ॥ ೧೨೧

ಅನಿತರೊಳಗೆ ಚಿತ್ತವ ನೋಡು ಭೂಪನ
ಮನದ ವಿಕಳವೆಂಬ ಮೃಗವು ।
ವನಜಾಕ್ಷಿ ಬಾಹ ವಾದ್ಯ ದುಗ್ಗಣವ ದೋರಿತು
ತನಯ ಕೇಳವನಾಲಿಸುವನು ॥ ೧೨೨

ಪೊಡವಿಪ ಕೇಳು ನಿನ್ನ ನುಡಿ ರೂಪು ಮೈಗಂಪು
ಒಡನುಂಬಾಲಿಂಗನಾನಂದ ।
ಪಡದುದಾನೇಕ ಗಲಿಸಿದನೊ ಶಿವನೆಂದು
ಮಿಡುಕುವದ್ಯೆದಿಂದ್ರಿಯ ಸತಿ ॥ ೧೨೩

ನಿನ್ನನೆ ನೆನೆವ ಸತಿ ನೀ ಬಂದುದಕೆ ಪೊಂಗಿ
ನಿನ್ನೋಡದಿನ್ನಿರಳಲ್ಲಿ ।
ನಿನ್ನಡಿಗಾಣಲ್ಯೆತಪ್ಪಳು ಪುರಜನ
ದುನ್ನತಿಗೂಡಿ ನಿನ್ನೀಗ ॥ ೧೨೪

ಪಿಡಿವಳೊ ತಾ ಮುನ್ನ ಪಡೆದ ವಿಭೂತಿಯ
ದೊಡೆದ ನೋವನು ಮನದೊಳು ।
ಬಿಡುವಳೊ ಎನ್ನ ಕರ್ಣಗಳಿಗೆ ಸೊಗಸಪ್ಪ
ನುಡಿಗಳನುಣಿಸುವ ಸುಖವ ॥ ೧೨೫

ಎಂದಾಗ ನೃಪ ತನ್ನ ಮನದಲ್ಲಿ ಚಿಂತೆಯ
ಮಂದಿರವನು ಸಾರಿರಲು ।
ಬಂದಳರಸಿ ತನ್ನನುಗೂಡಿ ವಾದ್ಯದ
ಸಂದಣಿಯಿಂದಲಾ ಬನಕೆ ॥ ೧೨೬

ಇಂಗಡಲ ತೆರೆಯಂತೆ ನೆಗೆ ನೆಗೆದು ಲೋಕವು
ಮಂಗಳ ಪೊಳಲ್ವೊರವಂಟು ।
ಸಿಂಗರವೆತ್ತು ರಾಯನ ನೋಡಲಾರಾಣಿಯ
ಸಂಗಡಗಣಿತ ಕೂಡಿಹುದು ॥ ೧೨೭

ಕುಗ್ಗಿತಾ ಭೂಲೋಕ ನೆರವಿಯ ಭರಕಿನ್ನು
ಬಗ್ಗಿಪ ವಹಿಪನ ಪೆಡೆಯ ।
ಸಗ್ಗಿಗರಾಗಸದಲಿ ನೋಡಿ ರಾಣಿಯ
ಬಗ್ಗಿಗವರು ಪೊಗಳಿದರು ॥ ೧೨೮

ಎಂಬವಸರದಲ್ಲಿ ಪೊಳಲೆಡೆ ಮೊಳಗಿದವು
ಚಂಬಟ ಭೇರಿ ದುಂದುಭಿಯು ।
ಕುಂಭಿನಿವರ ಗೇಳು ನಿನ್ನರಸಿ ಐತಂಬ
ಸಂಭ್ರಮದ ಕುರುಹುಮಿದೆಂದ ॥ ೧೨೯

ಇತ್ತಲಾ ವೀರಸೇನನು ಮುನ್ನ ಕುಳಿತಿರುವ
ಚಿತ್ತರದಕುರುವಡದಲ್ಲಿ ।
ಎತ್ತೊಯಿದು ಬನಪಾಲನಿರಿಸಿದ ಪೂವಿನ
ಮೊತ್ತದ ತಲ್ಪದ ಮೇಲೆ ॥ ೧೩೦

ಅತ್ತಲಾ ಸತಿ ತನ್ನ ಪೊಳಲ ಶೃಂಗರಿಸುತ
ಮೊತ್ತದ ಜನಗೂಡಿ ನೃಪನ ।
ಒತ್ತಿಗೆ ಐತಂಬ ಸಂಪದದುನ್ನತಿಯನು
ಬಿತ್ತರ ವಣ್ಣಿಪೆನೇನಾ ॥ ೧೩೧

ಲೋಕದ ಸುದ್ದಿಯ ನಾರದನೊಯಿದು ಪಿ
ನಾಕಿಯೊಡನೆ ಪೇಳುವಂತೆ ।
ಆಕಾಂತೆ ಮೊದಲಾದೆಲ್ಲರ ವಾರ್ತೆಯ
ಭೂಕಾಂತಗವನಾಡುತಿರ್ದ ॥ ೧೩೨

ಪೊಡವಿಪಾಲನ ನೋಳ್ಪ ಸಂತೋಷಕಾ ರಾಣಿ
ಪಿಡಿ ಪೊನ್ನವಾಗಳೆ ಕೊಟ್ಟು ।
ಅಡಿಗಡಿಗುಪ್ಪರದ ಗುಡಿ ತೋರಣಗಳಿಕ್ಕಿ
ನಡೆದಳು ಸತಿ ನೃಪನೆಡೆಗೆ ॥ ೧೩೩

ಪುರಜನ ಪರಿಜನ ಧರೆ ಬೆಸಲಾದಂತೆ
ನೆರೆದುದು ರಾಯ ಬಂದುದಕೆ ।
ಅರಸಿ ಸಹಿತ ಮಂತ್ರಿ ಪೊರವಂಟ ಭೂಪನ
ಚರಣಾಬ್ಜ ನೋಡಲಾ ಬನಕೆ ॥ ೧೩೪

ಪಲ್ಲಕಿಯೊಳು ಭೂಪನೊಲ್ಲಭೆಯ ಕುಳ್ಳಿರಿಸಿ
ಪಲ್ಲವ ಸದ್ಗೊಡೆ ವಿಡಿದು ।
ಬಲ್ಲಿದ ದೊರೆ ಮಂತ್ರಿ ಮಾನ್ಯರು ಮೊದಲಾದ
ರೆಲ್ಲರೊಂದಾಗಿ ಐದಿದರು ॥ ೧೩೫

ಪೋದರಾ ಕೇಳಿಯ ಬನ ಪೊಕ್ಕು ರಾಯನ
ಪಾದ ಪದ್ಮವ ಗಾಣುತೆಲ್ಲ ।
ಮೇದಿನಿಗೆ ಮೈಯಿಕ್ಕಿ ನಮಿಸಿದರ್ದಂಡೇಶ
ನಾದಿಯಾಗಿರ್ದ ಮಾನವರು ॥ ೧೩೬

ದೆಸೆವೆರೆಯ ವೀರಸೇನನ ಪಾದವ
ಬಿಸಜ ಗಂಧ ಕೋಮಳವ ।
ವಾಸಿಸಲೈತಂದ ಭ್ರಮರಗಳೆನೆ ಲೋಕ
ಏಸುತ ಕೇಳು ಮುಸುಕಿಹುದು ॥ ೧೩೭

ರಾಣಿಳಿದು ದಂಡಿಗೆಯ ಗಾಣುತಲೈತಂದು
ಏಣಾಕ್ಷಿ ಭೂಪನಂಘ್ರಿಯಲ್ಲಿ ।
ಮಾಣದೆ ಮಂಡೆಯ ಗಾಣಿಕೆ ಈಯಲು
ಕ್ಷೋಣಿಪನೆದೆಗಪ್ಪಿಕೊಂಡ ॥ ೧೩೮

ಪಸಿದಿರ್ದ ನರನಿಗೆ ಸುಧೆಯು ವಿಮಳಾಂಬು
ತೃಷೆ ವಟ್ಟನಿಗೆ ಬಡತನವು ।
ಮುಸುಕಿದವನಿಗೆ ಹೊನ್ನಿನ ರಾಶಿ ದೊರೆದೊಲು
ಎಸೆದನು ನೃಪ ರಾಣಿ ಕಣ್ಗೆ ॥ ೧೩೯

ಅಕ್ಕರದಿಂದಲಾ ನೃಪ ತನ್ನರಾಣಿಯ
ಅಕ್ಕರದಲಿ ಬಿಗಿದಪ್ಪೆ ।
ಮಿಕ್ಕ ನೋಳ್ಪರಗಣ್ಣಿಗೆಸೆದರು ಭೇರುಂಡ
ಪಕ್ಕಿಯೊಲೆಂದನಾ ಮುನಿಯು ॥ ೧೪೦

ಮಡದಿಯ ಮಗುಳೆ ಮುದ್ದಾಡಿ ನೃಪ ತನ್ನ
ತೊಡೆಯ ಪೀಠವ ನೀಯೆಸತಿಗೆ ।
ಮೃಡನುಮೆಯಂತೆ ಜನ ದಿಟ್ಟಿಗೆ ಇರ್ವರು
ಸಡಗರಿಸಿದುದನೇನೆಂಬೆ ॥ ೧೪೧

ಯತಿಗಳೊ ಬನ ದೇವತೆಗಳೊ ಮಾರ ದಂ
ಪತಿಗಳೊ ಶಿವೆ ಶಿವನಂತೆ ।
ಸಿತಕಂಠನೋಲಗ ಯೆನಲೊಪ್ಪಿತಾ ಸಭೆ
ಸುತ ಕೇಳು ವಣ್ಣಿಪೆನೇನ ॥ ೧೪೨

ಭಾಮೆ ಚಂದ್ರಮತಿ ದೆಸೆಯಿಂದ ಶಿವನಲ್ಲಿ
ಪ್ರೇಮ ವೊಡೆದ ಹರಿಶ್ಚಂದ್ರ
ಭೂಮಿವರಿಯೆ ಬೆಳವಡಿರಾಯ ಸತಿಯಿಂದ
ತಾ ಮುನ್ನ ಪಡೆದ ಕೀರ್ತಿಯನು ॥ ೧೪೩

ಮುನ್ನೋರ್ವ ನಳ ಚಕ್ರವರ್ತಿ ಎಂಬ ಭೂವರ
ಪೆಣ್ಣಿನ ಪತಿ ಭಕ್ತಿಯಿಂದ ।
ಕಣ್ಣು ತ್ರಯನ ಕೃಪೆ ವಡೆದ ಕೇಳು ಮಂತ್ರೀಶ
ವಣ್ಣಿಪೆನೇನ ಸ್ತ್ರೀಯಳನು ॥ ೧೪೪

ಅಭವನ ವರದಿಂದ ಮುನ್ನೀರ ಗೂಡಿದೆ
ವಿಭವವನಿಂದ್ರವಡೆದೊಲಾಗಸ್ತ್ಯ ।
ಪ್ರಭುವಿನ ದಯದಿಂದ ಜನರೊಂದಿಸುವ ಸಿರಿ
ಪ್ರಭು ವೀರಸೇನಗಾಯಿತೆಂದ ॥ ೧೪೫

ಸ್ಥಾಣುವಿನಡಿಗೊಂದು ಕಣ್ಪೂರ ವಿಶ್ವ
ಕ್ಸೇನಗಿತ್ತು ವರವಡೆದಂತೆ ।
ಭೂ ನಾಥ ನಿನ್ನಡಿಗೆ ತನ್ನ ಮುಡಿಯಲರಿತ್ತು
ಈ ನಾರಿ ಪಡೆದಳಾತನ ॥ ೧೪೬

ಶಂಕೆಯಿಲ್ಲದ ದೊರೆಯ ಮಂತ್ರಿ ಮಾನ್ಯರ
ಮಕುಟಾಂಕಿತ ವಣಿಗಳ ಮಂಜು ।
ಸೋಂಕಿಯಾರಾಯನ ಪದ ತಳಮೆಸೆದವು
ತಾ ಕೆಂಪುದಳೆದು ಕೇಳು ಮಗನೆ ॥ ೧೪೭

ಬಾ ಎನ್ನ ಮನ ಪೊಲದಲಿರ್ಪ ಮರಿಪುಲ್ಲೆ
ಬಾ ಎನ್ನ ಗಂಗಳ ಸಿರಿಯೆ ।
ಬಾ ಎನ್ನ ಮೋಹದ ಪಂಜರದ ಗಿಳಿಯೆ
ಬಾ ಎಂದು ಸತಿಯನಪ್ಪುವನು ॥ ೧೪೮

ಲೋಲೆ ಬಾ ಧರ್ಮಾನುಕೂಲೆ ಬಾ ಸುಜನರ ಕೃ
ಪಾಲೆ ಬಾ ಕೀರ್ತಿ ವಿಶಾಲೆ ।
ಬಾಲೆ ಬಾ ಪುಣ್ಯ ಸುಶೀಲೆ ಬಾ ಎಂದು ಭೂ
ಪಾಲನು ಸತಿಯ ಮುದ್ದಿಸಿದ ॥ ೧೪೯

ಪ್ರಾಯದ ಸಿರಿ ಕಣ್ಗೆ ಸುಧೆ ವಾಕು ಕರ್ಣಕ್ಕೆ
ಕಾಯದ ಗಂಪು ನಾಸಿಕಕೆ ।
ಬಾಯಿಗೆ ಮುದ್ದು ತುಟಿಗಳು ಚರ್ಮ ಕೈಗೀಯೆ
ರಾಯನ್ನೈದಿಂದ್ರಿಯ ಹಿಗ್ಗುವವು ॥ ೧೫೦

ಧಾರುಣಿವರಿಯೆ ದಕ್ಷನು ತನ್ನ ಹರಣವ
ಭಾರಿಯಳಿಂದ ಪಡೆದನು ।
ನಾರಿಯರಿಂದ ಪತಿಗೆ ಪುಣ್ಯವಹುದೆಂಬ
ಗಾರಣ ಪುಸಿಯಲ್ಲ ಮಂತ್ರಿ ॥ ೧೫೧

ಚಂಗಳೆ ದೇವಿಯ ದೆಸೆಯಿಂದ ಸಿರಿಯಾಳ
ಗಂಗಾಧರನ ದಯ ಪಡೆದ ।
ಅಂಗದಲ್ಲಿ ವಿದ್ಯಾಲತೆ ಗಾರಣ ಕಂಡೆ
ಮಂಗಳಗಸ್ತ್ಯನಂಪ್ರಿಯನು ॥ ೧೫೨

ಎಂದಾಗಲಾ ವೀರಸೇನನು ತನಗಾದ
ಅಂದಮೆಲ್ಲನ ಮಂತ್ರಿಯೊಡನೆ ।
ಒಂದುಳಿಯದೆ ಪೇಳಲಾ ಸಚಿವರ ಗೇಳಿ
ವಂದಿಸಿ ರಾಯಗಿಂತೆಂದ ॥ ೧೫೩

ನಮ್ಮನೆಲ್ಲರ ನೀವು ಸಲಹ ಗಾರಣ ಮುನಿ
ತಮ್ಮ ದಯವನೊಲಿದಿತ್ತು ।
ನಿಮ್ಮನಿಲ್ಲಿಗೆ ಬೀಳು ಕೊಟ್ಟನೆಂದಾ ಮಂತ್ರಿ
ಗಮ್ಮನೆರಗಿ ಬಿನ್ನವಿಸಿದ ॥ ೧೫೪

ಮುನಿಗಳ ಚಿತ್ತ ಸುಜ್ಞಾನದೊಳಗಿರ್ಪಂತೆ
ವನಿತೆಯ ಚಿತ್ತ ನಿಮ್ಮಲ್ಲಿ ।
ಅನುದಿನವಿರ್ಪುದೆಂದಾ ಮಂತ್ರಿ ಪೇಳಿದ
ಜನಪನಿಗಿನಿ ನುಡಿಯಿಂದ ॥ ೧೫೫

ಎಲೆ ಮಂತ್ರಿಗೇಳಿನ್ನೀ ಜಲಜಾಕ್ಷಿ ಮುನ್ನೋತ
ಫಲದಿ ಉಳಿದುದು ಎನ್ನಸುವು ।
ಫಲಿಸಿತು ಮೇಣೆನಗೀ ಭಾಗ್ಯವೆಂದರಸ
ನಲವಿಂದ ಸತಿಯ ವಣ್ಣಿಸಿದ ॥ ೧೫೬

ಅರಸ ಕೇಳು ಇನ್ನು ಗುರಿಗಿಟ್ಟ ಬಾಣವು
ಪರಿಯಲರಿಯದೆಡ ಬಲನ ।
ಅರಸಿಯ ಮನ ನಿಮ್ಮನಲ್ಲದೆ ಮಗುಳೊಂದ
ಸ್ಮರಿಸ ಬಲ್ಲುದೆ ಎಂದ ಮಂತ್ರಿ ॥ ೧೫೭

ವೀರಸೇನನು ಕುಂಭ ಸಂಭವ ಮುನಿಯಿಂದ
ನಾರಿಗೂಡಿದ ಸಂಪದವ ।
ವಾರುಧಿನಾಥಗೆ ಪೇಳೆ ಪೋಪವೊಲು ರವಿ
ಸಾರಿದ ಪಶ್ಚಿಮಾಬ್ಧಿಯನು ॥ ೧೫೮

ಕಾಮನ ಸ್ತ್ರೀಯಲಂಕರಿಸಿರ್ಪ ಬೆಳ್ಕೋಶವೊ ಸು
ತ್ರಾಮನೋಲಗ ಹರ್ಮ್ಯಗಳೆಸವೊ ।
ಕಾಮುಕರೊಡಲುರಿವ ಉಕ್ಕಿನ ಗುಂಡೆಂಬ
ಕೌಮುದಿ ಬಂದು ಮೂಡಿದನು ॥ ೧೫೯

ತತ್ತಿಗಳೊ ಅಭ್ರದ ಸುಧಾಬ್ಧಿ ಗಡೆವಂದು
ಒತ್ತಿ ಚಿಮ್ಮಿದ ಕಣಾವಳಿಯೋ ।
ಇತ್ತನೊ ಚಂದ್ರ ಚಕೋರಿಗೆ ಕಿರಣದ
ದತ್ತುಗಳೆನಲುಡು ಎಸೆದವು ॥ ೧೬೦

ಉಡುಗಳುದಿಸಿದೊಲು ಪಿಡಿದವು ಕೈ ದೀಪ
ಕೊಡೆಗಳ ನೆಗಪಿ ಚಾಮರವ ।
ಎಡ ಬಲದಲಿ ಢಾಳಿಸುತ ರಾಯನ ಕೊಂಡು
ನಡೆಯಲು ಮಂತ್ರಿ ಪಟ್ಟಣಕೆ ॥ ೧೬೧

ಆ ನರಪನು ಜ್ಞಾನಲತೆ ಈರ್ವರ ಪಟ್ಟ
ದಾನೆಯ ಮೇಲೆ ಕುಳ್ಳಿರಿಸಿ ।
ನಾನಾ ವಾದ್ಯವು ವಿವಿಧಜನ ನೃತ್ಯ ವಿ
ತಾನದೊಳ್ ಮೆರೆವುತಲ್ಲಿಂದ ॥ ೧೬೨

ಆ ತಾಪಸೋತ್ತಮನಗಸ್ತ್ಯನ ವರದಿಂದ
ಭೂತಳ ಪತಿ ವೀರಸೇನ ।
ನೂತನ ವಿವಾಹ ಪಡೆದನೆಂದು ಜನರೆಲ್ಲ
ಖ್ಯಾತಿಸುವರು ತಮತಮಗೆ ॥ ೧೬೩

ಎಲ್ಲ ಜನಂಗಳೋಲಗಗೊಟ್ಟು ರಾಯನ
ಮೆಲ್ಲನೆಬ್ಬಿಸಿ ಬನದಿಂದ ।
ವಲ್ಲಭೆವೊಂದಾಗಿ ಮೆರೆಸುತ ತಂದರು
ಉಲ್ಲಾಸದಿಂದಲಿ ಅರಮನೆಗೆ ॥ ೧೬೪

ಚಮ್ಮಟ ಭೇರಿ ದುಂದುಭಿ ಮೃದಂಗವು
ಕೊಂಬು ಡೌಡೆ ಹೆಗ್ಗಹಳೆ ।
ಬಂಬುಳಿ ನಿಸ್ಸಾಳ ವಾದ್ಯದಿ ಬಂದನು
ಕುಂಭಿನಿಪತಿ ತನ್ನ ನಿಳಯಕೆ ॥ ೧೬೫

ಜನನಿಯಗಾಣದ ಸಿಸುಗಳಂತಿರ್ದೆವು
ದಿನದಿನಕೆ ನಿಮ್ಮ ಚಿಂತೆಯಲಿ ।
ವನಜಾಕ್ಷಿ ವಾಲೆಯ ಭಾಗ್ಯದಿ ಕಂಡೆವು
ಜನಕ ನಿಮ್ಮುವನೆಂದ ಮಂತ್ರಿ ॥ ೧೬೬
ಬಾಳಿನ್ನು ಸಾವಿರಕಾಲ ವೀರಸೇನ ನೀ

ಪಾಲಿಸು ನಮ್ಮನೆಲ್ಲರನು ।
ಆಲಯದೊಳು ಸುಖಮಿರು ಎಂದು ಭೂಪನ
ಲೋಲ ಮಂತ್ರಿ ಕಳುಪಿದನು ॥ ೧೬೭

ಆವನಿಪನಾ ಜ್ಞಾನ ಲತೆಗೂಡಿ ಮುನ್ನಿರ್ದ
ಭವನವ ಪೊಕ್ಕು ಬಿನದದಿಂದ ।
ಶಿವಸೇವೆ ಗೆಯ್ಯಲು ಆಗಸದಲ್ಲಿ ನಕ್ಷತ್ರ
ನಿವಹವೆಲ್ಲವು ಮುಳುಗಿದವು ॥ ೧೬೮

ತೆಗೆದೋಡೆ ತಮ ಹಿಮ ಪರಿಯಲು ವಿಹಗಗ
ಳಗಲ್ದವಿಕ್ಕೆಯ ಘೂಕವಳೆಯ ।
ದೃಗಗೆಡೆ ಕೈರವ ಮುಗಿಯಲು ಪದ್ಮಗ
ಳ್ನಗಿಸುತಲಿನನುದಿಸಿದನು ॥ ೧೬೯

ಬೆಳಗುದೋರಲು ಶಿವಲಿಂಗ ದೀಕ್ಷೆಯ ತನ್ನ
ಲಲನೆಗೆ ಈಯಬೇಕೆಂಬ ।
ನಲವುದುಂಬಿತಾ ರಾಯನೊಡಲೊಳು ಕೇಳು ಭಕ್ತಿ
ಬಲವಿಂಬುಗೊಂಡುದೇನೆಂಬೆ ॥ ೧೭೦

ನೆರದ ಲೋಕವನಿತ್ತ ಪರಹಿದನಾ ಮಂತ್ರಿ
ಮರಳ್ಯೆದಿದ ತನ್ನ ನಿಳಯಕೆ ।
ಇರುತಿರಲಾ ರಾಯ ತನಗಾದುದನೆಲ್ಲ
ಆರುಹಿದ ಸತಿಗತ್ತಗೇಳ ॥ ೧೭೧

ಏ ಸತಿ ಕೇಳು ನಿನ್ನ ನೋಂಪಿನ ಫಲದಿಂದ
ದೋಷವಳಿದುದೆನಗೀಗಾ ।
ಈ ಶಿವ ಭಕ್ತಿಯಳವಟ್ಟು ನಾ ಬಂದ ಸಂ
ತೋಷವ ನಿನಗುಸುರುವೆನು ॥ ೧೭೨

ನಿತ್ತೆ ಕೇಳು ಧರ್ಮಚರಿತ್ರೆ ಕೇಳು ಕೈರವ
ನೇತ್ರೆ ಕೇಳು ಕನಕ ಸದ್ಗಾತ್ರೆ ।
ಮಿತ್ರೆ ಕೇಳು ಪಾವನ ಪುತ್ತೆ ಕೇಳೆನ್ನ ಕ
ಳತ್ರೆ ಕೇಳು ಎನಗಾದ ಚಿತ್ರವನು ॥ ೧೭೩
ಪೆಣ್ಣೆ ಕೇಳು ನಿನ್ನ ಕಾರಣ ನಾನು ಘೋರಾ

ರಣ್ಯದೊಳಿರಲು ವಿಹಗನು ।
ಪುಣ್ಯದಿಂದೊಯಿದು ಎನ್ನದೋರಿತು ಮುನಿಯಗ್ರ
ಗಣ್ಯನಾಗಸ್ತ್ಯನಂಘ್ರಿಯನು ॥ ೧೭೪

ತಾಪಸೋತ್ತಮ ಕುಂಭಸಂಭವ ಮುನಿ ನೋಡಿ
ಪಾಪವ ಪರಿಹರಿಸಿದನು ।
ಸ್ಯೆಪದ ಲಿಂಗವ ಧರಿಸೆನ್ನ ಬೀಳ್ಕೊಟ್ಟ
ಓಪಳೆ ಕೇಳು ನಿನ್ನ ಬಳಿಗೆ ॥ ೧೭೫

ಸಮಶೀಲವಿತ್ತನಾ ವೀರಸೇನನು ತನ್ನ
ಕಮಲಗಂಧಿನಿ ಜ್ಞಾನಲತೆಯೊ ।
ಲುಮೆ ಅರಸನ ಸೇವೆಗೈವುತಲಿರ್ವರು
ವಿಮಲಾಬ್ಧಿಯೊಳು ಮುಳುಗಿಹರು ॥ ೧೭೬

ಅರಸು ಬಂದುದ ಗಂಡು ಪುರಜನವಿತ್ತಲು
ಪರಿಪರಿ ದಾನ ಧರ್ಮಗಳ ।
ಹರುಷದಲಿಗೈದಿತ್ತು ಪರಸುತ ರಾಯಗೆ
ಇರುತಿರ್ದರತಿ ಮುದವೆತ್ತು ॥ ೧೭೭

ಭಾಳದೆಡೆಯಲ್ಲಿ ಭಸಿತವ ಧರಿಸದ
ಖೂಳರ ಮುಖವನೀಕ್ಷಿಸನು ।
ಶೂಲಿಯಭಕ್ತರ ಕಂಡರೆ ಮನ್ನಿಪ
ಲೋಲನಾಗಿಹ ವೀರಸೇನ ॥ ೧೭೮

ಅಂಗಹೀನರ ಮೊಗವನು ಧಾತ್ರೀಪಾಲ ತಾ
ಕಂಗಳದೆರೆದೊಮ್ಮೆ ನೋಡಾ ।
ಲಿಂಗಪ್ರೇಮಿಗಳನೀಕ್ಷಿಸುತಾ ರಾಯನು
ಪೊಂಗುವ ಮರಳಿ ವಂದಿಸುವನು ॥ ೧೭೯

ಭೂಲೋಕಪತಿ ವೀರಸೇನನು ತನ್ನಯ
ಊಳಿಗದವರಾದಿಯಾದ ।
ನಾಳ ನಾಯಕ ಮಾನ್ಯ ದೊರೆ ಮಂತ್ರಿಗಳೆಗೆಲ್ಲ
ಶೂಲಿಲಿಂಗವ ಭಜಿಸೆಂದ ॥ ೧೮೦
ಭಾನುಗುಲದ ವೀರಸೇನ ಭೂಪಾಳನು

ತಾನಾಳುತಿಹ ನಾಡಿಗೆಲ್ಲ ।
ಸೂನುವೆ ಕೇಳು ಶಿವರಾತ್ರಿಯ ವ್ರತವಿತ್ತು
ಆ ನರರಿಗೆ ಮುಕ್ತಿವೀಡಾದ ॥ ೧೮೧

ಭಕ್ತಿಯನರಿಯದ ನರರ ಬೋಧಿಸಿ ಶಿವ
ಭಕ್ತರ ಮಾಳ್ಪನರ್ತಿಯಲಿ ।
ಮುಕ್ತರ ಮಾಡಿದ ತನ್ನ ಲೋಕದ ದಯ
ಯುಕ್ತನನೇ ವಣ್ಣಿಪೆನು ॥ ೧೮೨

ಭೂತಿ ರುದ್ರಾಕ್ಷಿ ಲಿಂಗವ ಧರಿಸದೆ ಇಪ್ಪ
ಪಾತಕರುಗಳ ರಾಜ್ಯದಲಿ
ಓತು ಓರ್ವರರಿಯದ ನೃಪ ಶಿವ ಭಕ್ತಿಯ
ಖ್ಯಾತಿ ಲತೆಯ ಪರ್ಬಿಸಿದೆನು ॥ ೧೮೩

ಆಲರಿಂದ ನೂಲನು ಮುಡಿವಂತೆ ರಾಯನ
ಬಲದಿಂದ ಶಿವಭಕ್ತರಾಗಿ
ಕುಲಹೀನರೆಲ್ಲ ಜಾತಧಿಕರಾದರು ಭಕ್ತಿ
ಬಲವನಿನ್ನೇನ ವಣ್ಣಿಪೆನು ॥ ೧೮೪

ಸುಜನರ ಸಂಗದಿಂದಾವ ನರನಿಗೆ ಲೋಕದಿ
ಸುಜನ್ಮಂಗಳಳವಡದಿಹುದೆ ।
ಯಜನ ಪ್ರಮಾಣದಿಂದಾ ದೇಹದ ತಾಪವು
ತ್ಯಜಿಸುವೊಲು ಕಂದ ಕೇಳು ॥ ೧೮೫

ಅರಸಿನ ಕಾರಣ ದೇಶದ ಜನಕೆಲ್ಲ
ದೊರೆತುದು ಶಿವಭಕ್ತಿ ಶೀಲಾ ।
ಪರಿದವು ಭವಪಾಶ ಶಿವಲೋಕಕೆಯಿದುವ
ಸಿರಿಯಾದುದು ಕೇಳು ಮಗನೆ ॥ ೧೮೬

ಕೆಡೆದಿರ್ದ ಲಿಂಗದ ಗುಡಿಗಳ ರಚಿಸುವ
ಕೊಡುವನು ಭೂಮಿ ಗ್ರಾಮಗಳ ।
ಒಡೆದಿರ್ದ ಕೆರೆಗಳ ನಿಲಿಸುವ ಪುಷ್ಪದ
ಗಿಡದೋಪುಗಳನಿಕ್ಕಿಸುವನು ॥ ೧೮೭
ಪ್ರೇಮಿಯಾಗಿಹ ಶಿವಭಕ್ತರೆಡೆಗೆ ನಿಃ

ಕಾಮಿಯಾಗಿರ್ದ ಪರಸತಿಗೆ ।
ಸಮರ್ಥ ಪರಸಮಯಕೆ ವೀರಸೇನನ
ನೇಮವನಾರು ವಣ್ಣಿಸುವರು ॥ ೧೮೮

ಶಿವಧರ್ಮದಿ ಈ ರೀತಿ ರಾಜ್ಯವಾಳುತ
ಲವನಿಪನಾ ವೀರಸೇನ ।
ಯುವತಿ ಸಹಿತ ನೇಮವಿಡಿದಿಹ ತಿಂಗಳ
ಶಿವರಾತ್ರಿಗೈವುತಲಿಹನು ॥ ೧೮೯

ನಲ್ಲನಾ ವೀರಸೇನನು ಶಿವರಾತ್ರಿಗೆ
ಎಲ್ಲಿರ್ದ ಶಿವಯೋಗಿಗಳನು ।
ಪಲ್ಲಕ್ಕಿ ಬೆಳ್ಗೊಡೆಯಿಂದಲ್ಲಿ ತರಿಸುವ
ಮಲ್ಲಶರಾರಿಯರ್ಚನೆಗೆ ॥ ೧೯೦

ಶಿವಗಣಂಗಳಿಗೆಲ್ಲ ಶಿವಸುಖ ವೇದಿಸಿ
ಶಿವರಾತ್ರಿ ಜಾಗರಣೆ ಗೈಯುತ ।
ಶಿವಭಕ್ತರೇನ ಬೇಡಿದುದನಿತ್ತು ಮನ್ನಿಪ
ನವನಿಪನಾ ವೀರಸೇನ ॥ ೧೯೧

ಗೋದಾನ ಭೂದಾನ ಹೇಮದಾನವು ರತ್ನ
ವಾದಿಯಾದಖಿಳ ದಾನವನು ।
ಮೇದಿನಿಪತಿ ಶಿವರಾತ್ರಿಯಗೈದೀವ
ಮೋದದಿ ಸತ್ಪಾತ್ರ ಜನಕೆ ॥ ೧೯೨

ಮನ ಭಾವ ಕರಣಂಗಳೆಲ್ಲವ ಲಿಂಗದ
ನೆನಹಿನೊಳೆ ಇರಿಸಿಹನು ।
ತನು ಮನ ಧನ ಇಷ್ಟ ಪ್ರಾಣ ಭಾವಕೆ ಕೊಟ್ಟು
ಜನಕನೊಪ್ಪಿಹ ವೀರಸೇನ ॥ ೧೯೩

ತಿಂಗಳ ಶಿವರಾತ್ರಿಗೈವುತಲಾ ರಾಯ
ಲಿಂಗಧ್ಯಾನದಲಿರುತಿರಲು ।
ತಿಂಗಳ ಶೇಖರ ಭವ ಪಾಶವಿರಹಿತ
ನಂಗಜರಿಪು ದಯವಾದ ॥ ೧೯೪
ಸಸಿಯಿಂದ ಚಂದ್ರಿಕೆ ರವಿಯಿಂದ ಕಿರಣವು

ವಸುವಿಂದಲುರಿದೋರುವಂತೆ ।
ಅಸಮಾಕ್ಷ ನುಡಿಸಿದ ವೀರಸೇನ ಲಿಂಗ
ರಸುಮೆ ರೂಪಾದುದೆಂಬಂತೆ ॥ ೧೯೫

ಕೆಂಜೆಡೆ ವಿಧುಜೂಟ ನಿಟಿಲಲೋಚನದಿಂದ
ನಂಜುಗೊರಳ ಸರ್ಪಾಭರಣ ।
ಕುಂಜರಚರ್ಮವ ಧರಿಸಿದ ಶಿವನಡಿ
ಕಂಜ ಪಾದಕೆರಗಿದ ನೃಪನು ॥ ೧೯೬

ಇಷ್ಟಲಿಂಗದ ಪ್ರೇಮಿ ವೀರಸೇನನ ಭಕ್ತಿ
ನಿಷ್ಠೆಗೊಲಿದ ಪರಶಿವನು ।
ದೃಷ್ಟವಾದನು ತನ್ನ ರೂಪ ರಾಯಗೆದೋರಿ
ದಿಷ್ಟಾರ್ಥ ನಿನಗಹುದೆಂದ ॥ ೧೯೭

ಕರ್ತನೆ ಚಿತ್ತೈಸು ನಿಮ್ಮ ಗಣಂಗಳ ಪಾದವ
ಕೀರ್ತಿಗೈವುತ ನಿಮ್ಮ ಪಾದ ।
ವರ್ತಿಲಿ ಭಜಿಸುವ ಜಾಗರಣೆ ಸಿರಿಯಿತ್ತು
ಮರ್ತ್ಯವನೆನಗೆ ಬಿಡಿಸೆಂದ ॥ ೧೯೮

ತಪ್ಪದೆ ಶಿವರಾತ್ರಿ ಜಾಗರಣೆಗೈದಂದು
ಸತ್ಪುರುಷ ಗಣ ಸಹಿತೆಲ್ಲ ।
ಪುಷ್ಪಕದಿಂದಲಾ ನೃಪ ಸತಿವೊಂದಾಗಿ
ಮುಪ್ಪುರಹರನೊಯಿದ ತನ್ನಿಳೆಗೆ ॥ ೧೯೯

ಆ ವೀರಸೇನನೋರ್ವನ ಎಡಬಲದಲ್ಲಿ
ಸಾವಿರ ಶಿವಗಣಂಗಳನು ।
ಪೂವಿನ ಪುಷ್ಪಕದಿಂದ ಕೊಂಡೊಯಿದನು
ದೇವಲೋಕಕ್ಕೆ ಶಿವನೊಲಿದು ॥ ೨೦೦

ಅದೆ ಗೀತ ವಾದ್ಯವದೆ ನೃತ್ಯ ತತಿಯಿಂದ
ವದೆ ಶಿವಭಕ್ತ ಸಂದಣಿಯು ।
ವದೆ ಶಿವ ರಾತ್ರಿ ಸಂಭ್ರಮದಿಂದ ರಾಯನು
ಅದೆ ಪೋದ ಕೈಲಾಸಕೆಂದ ॥ ೨೦೧
ಪೊಳಗಿದವು ದೇವದುಂದುಭಿ ಭೇರಿ ಪೂವಿನ

ಮಳೆಗರೆದರು ಸುರ ನಿಕರ ।
ಬೆಳಗಿದರು ದಿವಿಜರ ವಧುಗಳಾರತಿ ತಂದು
ಇಳೆವರರಂಗತಿ ಮುದದಿಂದ ॥ ೨೦೨

ಭೂಮಿಪನಾ ವೀರಸೇನನು ಮಾಡಿದ
ನಾ ಮಾಸ ಶಿವರಾತ್ರಿ ವ್ರತವ ।
ಪ್ರೇಮದಿ ಪ್ರಮಥರಿಗರುಪಿ ಸುಖದೊಳಿಟ್ಟ
ಸೋಮಶೇಖರ ಸುತಗೇಳು ॥ ೨೦೩

ಶಂಬರಸೇನಾತ್ಮಜ ಮದವೇದಂಡ ಮತ್ತಾ
ಶಂಬರ ರಾಜನೊಪ್ಪಿದನು ।
ಶಂಬರ ಮಹಿಧರ ಜಾಮಾತನೊಪ್ಪಿದ
ಶಂಬರ ಕರಧರನೊಪ್ಪಿದನು* ॥ ೨೦೪

ಕರ್ಣರಹಿತ ಪತಿ ಕಟಕಪಾಣೊಪ್ಪಿದ ಸು
ಪರ್ಣಕೇತನಪ್ರಿಯನೊಪ್ಪಿದ ।
ಸ್ವರ್ಣದಿ ಜಡೆ ಮುಡಿಯಲಿ ತಾಳ್ದನೊಪ್ಪಿದ
ಪರ್ಣೇ ಪ್ರಾಣೇಶನೊಪ್ಪಿದ ॥ ೨೦೫

ಈಶನೊಪ್ಪಿದ ಗಿರಿಜೇಶನೊಪ್ಪಿದನು ಮಾ
ಹೇಶನೊಪ್ಪಿದ ಕೈಲಾಸಾ ।
ವಾಸನೊಪ್ಪಿದ ಸರ್ವೇಶನೊಪ್ಪಿದನು ಶಾಂ
ತೇಶನೊಪ್ಪಿದ ದಯದಿಂದ ॥ ೨೦೬

ದಾರಿದ್ರವಪಮೃತ್ಯು ವೈರಿಗಳಪಜಯ
ದೂರವೀ ಕೃತಿಯಗೇಳಿದಡೆ ।
ಆರೊಬ್ಬರಿಗೆ ಪುಣ್ಯ ಸೇರಿಸಿ ಸುಖವೀವ
ಚಾರಿತ್ರ ಸಂಧಿ ಸಮಾಪ್ತ ॥ ೨೦೭

---

* ಶಂಬರ: ಒಬ್ಬ ರಾಕ್ಷಸ, ಪರ್ವತ, ಜಿಂಕೆ, ಮೀನು, ಯುದ್ಧ ಮುಂತಾದ ಅರ್ಥಗಳಿವೆ. ಮದೋನ್ಮತ್ತ ಆನೆಯಂತಿರವ ಶೇಖರಸೇನನ ಮಗನು – ಶರಬರ ರಾಜನಾದವು, ಪರ್ವತ ರಾಜನ ಅಳಿಯನಾವನು, ಜಿಂಕೆಯನ್ನು ತನ್ನ ಕರದಲ್ಲಿ ಹೊಂದಿದವನು ಆದ ಶಿವನು ಒಪ್ಪಿದನು. (ಮೃಗ ಪಾಣಿಯೇ ನಮಃ ಶಿವ ಸಹಸ್ರ ನಾಮದಲ್ಲಿದೆ)

ಸಿರಿಯಿಲ್ಲದವರಿಗೆ ಸಿರಿಯನೀವುದು ಮೇಣು
ಸಿರಿಯುಳ್ಳವರಿಗೆ ಯಾವ ಕಾಲ ।
ಸಿರಿದೆಗೆಯದೆ ಶಿವ ಸುಖವಿತ್ತು ಪೊರೆವುದು
ತರುಣ ಕೇಳೀ ಕೃತಿಯಿದ ॥ ೨೦೮

ಗೋವಿಂದ ನಯನಾರ್ಚಿತ ಪಾದ ಸರಸಿಜ
ಸೇವಕನಾಮೋದದಿಂದ ।
ಭಾವಿಸು ಯುಗ ರವಿ ತ್ರಿಬಾಣ ಕರಿ ದಶ
ಯಾರ್ವನ ದಿಳಿ ನಾವು ಗೋಪ್ಯ ॥ ೨೦೯

ಅಂತು ಸಂಧಿ ೭೯ಕ್ಕಂ ಪದನು
೮೩೭೯ಕ್ಕಂ ಮಂಗಳ ಮಹಾಶ್ರೀ

♦

ಅನುಬಂಧಗಳು

೧. ಸಂದರ್ಭ ಕಥೆಗಳು

೨. ಪದ್ಯಗಳ ಆಕಾರಾದಿ

೩. ಕಠಿಣ ಪದಗಳು

೧. ಸಂದರ್ಭ ಕಥೆಗಳು

ಮಾಂಡವ್ಯ (ಅಣಿ) ೪–೪೮

ಒಬ್ಬ ಮಹರ್ಷಿ ಈತ ಬಾಲ್ಯದಲ್ಲಿ ನೊಣಗಳನ್ನು ಕೊಲ್ಲುತ್ತಿದ್ದನು. ಬಳಿಕ ಪ್ರಾಪ್ತ ವಯಸ್ಕನಾದ ಮೇಲೆ ತಪೋನಿರತನಾಗಿದ್ದ. ಆಗ ಕೆಲವು ಮಂದಿ ಕಳ್ಳರು ಈತನ ಆಶ್ರಮದಲ್ಲಿ ಅವಿತುಕೊಂಡರು. ರಾಜಭಟರು ಹಿಂದಟ್ಟಿ ಬಂದು ಕಳ್ಳರ ಜಾಡನ್ನು ಕೇಳಲಾಗಿ ಈತನು ಮೌನದಿಂದಿದ್ದ. ರಾಜಭಟರು ಕಳ್ಳರೊಂದಿಗೆ ಈತನನ್ನು ಎಳೆದೊಯ್ದು ಅರಸನ ಅಪ್ಪಣೆಯಂತೆ ಶೂಲಕ್ಕೆ ಏರಿಸಿದರು. ಕಳ್ಳರು ಸತ್ತರು ಈತ ಸಾಯಲಿಲ್ಲ, ಕೊನೆಗೆ ದೇಹತ್ಯಾಗ ಮಾಡಿದನು.

ರೇಣುಕಾದೇವಿ ೫– ೫೯

ಜಮದಗ್ನಿ ಮುನಿಗಳ ಪತ್ನಿ ರೇಣುಕಾ ಮಹಾಪತಿವ್ರತೆ, ಅವಳು ಅವಳ ಪತಿವ್ರತಾ ಪ್ರಭಾವದಿಂದ ನಿತ್ಯವೂ ನದಿಯಿಂದ ಮುನಿಗಳ ಪೂಜಾದಿಗಳಿಗೆ ನೀರು ತರುವಾಗ ಯಾವುದೇ ಕೊಡವನ್ನು ಬಳಸುತ್ತಿರಲಿಲ್ಲ. ನೇರವಾಗಿ ಹೊಳೆಗೆ ಹೋಗಿ ಅಲ್ಲಿ ಎರಡೂ ಕೈಗಳಿಂದ ನೀರನ್ನು ಒಟ್ಟುಗೂಡಿಸಿದಾಗ ಆ ನೀರು ತಾನಾಗಿಯೇ ಕೊಡವಾಗಿ, ಆ ನೀರ ಕೊಡವನ್ನು ಎತ್ತಿಕೊಂಡು ಆಶ್ರಮಕ್ಕೆ ಬರುತ್ತಿದ್ದಳು. (ಇನ್ನೊಂದು ಕತೆಯ ಪ್ರಕಾರ, ಅವಳು ಮರಳಿನ ಕೊಡ ಮಾಡಿ ಅದರಲ್ಲಿ ನೀರು ತುಂಬಿಸಿ, ಹಾವಿನ ಸಿಂಬಿಯನ್ನು ಮಾಡಿ ತಲೆಯ ಮೇಲಿಟ್ಟುಕೊಂಡು ತರುತ್ತಿದ್ದಳು ಎಂದಿದೆ) ಒಮ್ಮೆ ಅವಳು ಎಂದಿನಂತೆ ಹೊಳೆಗೆ ಹೋದಾಗ ಅಲ್ಲಿ ಚಿತ್ರರಥನೆಂಬ ಗಂಧರ್ವನು ತನ್ನ ಮಡದಿಯರ ಜೊತೆ ಜಲಕ್ರೀಡೆ ಆಡುತ್ತಿದ್ದನು. ಆ ಗಂಧರ್ವನನ್ನು ರೇಣುಕ ನೋಡಿ ಮನಸ್ಸು ಚಂಚಲವಾಯಿತು. ಮರುಕ್ಷಣವೇ ತನ್ನ ಚಂಚಲ ಭಾವನೆಯಿಂದ ಅವಳು ಎಚ್ಚತ್ತಳು ಮತ್ತು ಎಂದಿನಂತೆ ನೀರನ್ನು ಒಟ್ಟುಗೂಡಿಸಿದಾಗ (ಅಥವಾ ಮರಳಿನ ಕೊಡ ಮಾಡಲು ಹೋದಾಗ) ಕೊಡವಾಗಲಿಲ್ಲ. ಹೀಗಾಗಿ ಆಕೆ ಬರಿಗೈಯಿಂದ ಆಶ್ರಮಕ್ಕೆ ಹಿಂತಿರುಗಿದಳು. ಇದನ್ನು ಅರಿತ ಜಮದಗ್ನಿ ಋಷಿ

ಅವಳಿಗೆ ಕುಷ್ಠ ರೋಗ ಬರಲಿ ಎಂದು ಶಾಪವೀಯುತ್ತಾರೆ. (ಇನ್ನೊಂದು ಕತೆಯ ಪ್ರಕಾರ, ಆಕೆಯ ಶೀಲವನ್ನು ಶಂಕಿಸಿ ತನ್ನ ಮಕ್ಕಳಿಗೆ ಆಕೆಯ ಕೊರಳನ್ನು ಕಡಿಯಲು ಅಪ್ಪಣೆ ಕೊಡುತ್ತಾನೆ. ಉಳಿದವರಾರು ಇದಕ್ಕೆ ಒಪ್ಪದಿರಲು, ಪರಶುರಾಮ ಒಡನೆಯೇ

ಬೆಳವಡಿ ಮಲ್ಲವ್ವ ೭–೧೪೩

ಶಿವಾಜಿಯ ವಿರುದ್ಧ ಹೋರಾಡಿ ಖ್ಯಾತಳಾದ ಕರ್ನಾಟಕದ ಓರ್ವ ದೇಸಾಯಿತಿ. ಈಗ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿ ಇರುವ ಬೆಳವಡಿ ಹಿಂದೆ ೩೬೦ ಗ್ರಾಮಗಳ ಒಂದು ಸಂಸ್ಥಾನವಾಗಿತ್ತು. ಇಲ್ಲಿನ ದೇಸಾಯಿ ಈಶಪ್ರಭು, ಶಿರಸಿ ತಾಲ್ಲೂಕಿನ ಸೋಂದೆಯ ರಾಜಕುಮಾರಿ ಮಲ್ಲವ್ವಳನ್ನು ಮದುವೆಯಾಗಿದ್ದ. ಶಿವಾಜಿ ಬಿಜಾಪುರದ ವಿರುದ್ಧ ಹೂಡಿದ ಬಂಡಾಯದ ಸಂಧಿ ಸಾಧಿಸಿ ತಾನೂ ವಿಜಾಪುರದ ವಿರುದ್ಧ ಸಿಡಿದೆದ್ದಿದ್ದ. ಶಿವಾಜಿಯ ಜೊತೆ ಒಪ್ಪಂದ ಮಾಡಿಕೊಳ್ಳಬೇಕೆಂದು ಉತ್ಸುಕನಾಗಿದ್ದ. ೧೬೭೮ರ ಏಪ್ರಿಲ್ ತಿಂಗಳಲ್ಲಿ ದಕ್ಷಿಣದ ದಂಡಯಾತ್ರೆಯಿಂದ ಮರುಳುತ್ತಿದ್ದ ಶಿವಾಜಿಯ ಸೈನಿಕರು, ಬೆಳವಡಿ ದೇಸಗತಿಗೆ ಸೇರಿದ ಯಾದವಾಡದಲ್ಲಿ ಬೆಳವಡಿಯವರ ಹಸುಕರುಗಳನ್ನು ಅಪಹರಿಸಿ ಯುದ್ಧಕ್ಕೆ ಕಾರಣವಾದರು. ಈ ಯುದ್ಧದಲ್ಲಿ ಈಶಪ್ರಭು ಸತ್ತ. ರಾಣಿ ಮಲ್ಲವ್ವ ಹೆದರದೆ ಸೇನೆಯ ನಾಯಕತ್ವ ವಹಿಸಿ, ಕೋಟೆಯಿಂದ ಮರಾಠರನ್ನು ಹೊರದೂಡಿದಳು. ಅವಮಾನಿತರಾದ ಮರಾಠರು ಪುನಃ ಕೋಟೆಯನ್ನು ಮುತ್ತಿದರು. ಆಹಾರದ ಕೊರತೆ ತಲೆದೋರಿದುದರಿಂದ ಮಲ್ಲವ್ವ ಶಿವಾಜಿ ಸೈನಿಕರಿಗೆ ಶರಣಾದಳು. ಶಿವಾಜಿ ವೀರರಾಣಿ ಮಲ್ಲವ್ವಳನ್ನು ಮನ್ನಿಸಿ ಗೌರವಿಸಿದನು. ಈ ಯುದ್ಧದ ನೆನಪಾಗಿ ಮಲ್ಲವ್ವ ತನ್ನ ರಾಜ್ಯದ ಅನೇಕ ಕಡೆ ವೀರಗಲ್ಲುಗಳನ್ನು ಸ್ಥಾಪಿಸಿದ್ದಾಳೆ.

೨. ಪದ್ಯಗಳ ಅಕಾರಾದಿ

ಅಕಾರಾದಿಯ ಮುಂದಿರುವ ಅಂಕಿಗಳಲ್ಲಿ ಮೊದಲನೆಯದು ಸಂಧಿ,
ಎರಡನೆಯದು ಪದ ಸಂಖ್ಯೆ

3. ಕಠಿಣ ಪದ ಕೋಶ

ಪದಗಳ ಮುಂದಿರುವ ಅಂಕಿಗಳಲ್ಲಿ ಮೊದಲನೆಯದು ಸಂಧಿ, ಎರಡನೆಯದು ಪದ ಸಂಖ್ಯೆ

ಅಕ್ಕಜ = ಆಶ್ಚರ್ಯ	5–34
ಅಗ್ಗಳ = ಶ್ರೇಷ್ಠ	2–23
ಅಘ = ಪಾಪ	7–27
ಅಂತರಿಸು = ಬಿಟ್ಟುಕೊಡು – ಕೈ ಬದಲಿಸು	6–60
ಅನುದಿನ = ಪ್ರತಿದಿನ	7–11
ಅಂಬರಮಣಿ = ಸೂರ್ಯ	6–105
ಅಂಬು = ಬಾಣ	7–118
ಅಂಬುಜ = ತಾವರೆ; ಅಂಬು – ನೀರು ಜ ಹುಟ್ಟಿದುದು	1–06
ಅಭಿರಾಮ = ಹೆಚ್ಚು ಶೋಭಾಯಮಾನ	2–121
ಅಮ್ಮದಿರು = ದುಃಖಿಸದಿರು	6–103
ಅಭ್ರದ = ಆಕಾಶದ	7–160
ಅಭಿರಾಮ = ಸುಂದರ	2–121
ಅರಿಕೆ =ತಿಳುವಳಿಕೆ	7–101
ಅಷ್ಟಭೂತಿ = ಅಷ್ಟೈಶ್ವರ್ಯ	1–18
ಆಗತರು = ಬಂದವರು	6–15
ಆಗಸದೇವ = ಸೂರ್ಯ	2–79
ಅಂಬ್ರ = ಮಾವಿನಮರ	2–63
ಆಮಳಕ = ನೆಲ್ಲಿಕಾಯಿ	1–49
ಆಯವಲ್ಲ = ಉಚಿತವಲ್ಲ	3–82
ಇಕ್ಕೆ = ಪಕ್ಕೆ – ಹಕ್ಕೆ – ಮನ	2–45 4–29
ಇಂಗಳ = ಬೆಂಕಿ	4–11
ಇಟ್ಟಣಿ = ಗುಂಪು	1–10

ಇಟ್ಟೊರಸು = ಅಳಿಸಿಹಾಕು	2–115 3–64
ಇಡುಕುರ = ಬಾಸೆ, ಕುಚಗಳ ಕೆಳಭಾಗ	1–94
ಇರುಳೆರೆಯ = ಚಂದ್ರ	2–31
ಉಕ್ಷಕೇತನ = ಉಕ್ಷ – ವೃಷಭ, ಕೇತನ ಧ್ವಜ – ಶಿವ	1–19
ಉಗ್ಗಣ = ಉಗ್ಘಡಣೆ – ಶಬ್ದ	7–122
ಉಡು = ನಕ್ಷತ್ರ	7–161
ಉಮ್ಮೃತ್ತು = ಅತಿಶಯ	2–96
ಊಣೇವು = ಕುಂದು, ಕೊರತೆ, ಅಂಗಹೀನತೆ	3–48
ಉಲುಪ = ಶಬ್ದ	3–07
ಎಗ್ಗ = ಗಾಂಪ, ದಡ್ಡ	6–29
ಎಡೆ = ಪಕ್ಕ, ಸ್ಥಳ	5–18
ಎರೆ = ಹನಿಸು	4–18
ಎಲೆವೆರೆ =ಬಾಲಚಂದ್ರ ಬಿದಿಗೆ ಚಂದ್ರ	3–27
ಏಳಿಲ = ಅಪಹಾಸ್ಯ, ತಿರಸ್ಕಾರ	4–10, 4–70
ಐತಂಬ = ಬರುವ, ಐತರು	7–131
ಐಮೊಗ = ಸಿಂಹ	1–96
ಒಸು = ಒಸರ್, ಜಿನುಗು, ಸೋರುವಿಕೆ	7–59
ಓಳಿ = ಸಾಲು	2–37
ಕಂಕ = ಗರಿಗಳು, ಪುಕ್ಕ	2–34
ಕುಕ್ಕಲಿತನ = ವ್ಯಾಮೋಹ	3–81
ಕಂತೆ = ಜೋಳಿಗೆ	5–47
ಕಂದುಕ = ಚೆಂಡು	2–10
ಕಪೋತ = ಪಾರಿವಾಳ	2–75
ಕರಿಯಸುರ = ಗಜಾಸುರ	3–35
ಕರಿಯಾಂತಕ = ಸಿಂಹ, ಮೃಗರಾಜ	1–99
ಕಲ್ಪಣೆ = ಕಟ್ಟಳೆ, ನಿಯತಿ, ನಿಯಮ	6–106
ಕಾಂತಾರಾ = ಅರಣ್ಯ, ಕಾಡು	6–60
ಕಾದಲೆ = ನಲ್ಲೆ, ಪ್ರಿಯೆ, ಪತ್ನಿ	1–58, 2–76
ಕಾರ್ಮುಕ = ಬಿಲ್ಲು, ಧನಸ್ಸು	2–29
ಕಾಳುಜಿ = ಪನ್ನೀರಿನ ಪಾತ್ರೆ	2–34
ಕಾಳು = ಕಾಡು, ಅರಣ್ಯ	4–28
ಕ್ಷಾರ = ಲವಣ, ಉಪ್ಪು	3–54
ಕುಣಪ = ಶವ, ಹೆಣ, ದುರ್ಗಂಧ	5–45
ಕುಂಭಿನಿ = ಭೂಮಿ ಪೃಥ್ವಿ	1–106

ಕುರುಡು = ಕುಚ್ಚು, ಗೊಂಚಲು, ಗೊಂಡೆಯ	4–47
ಕುರುವಿಲ್ಲದ = ಆಕಾರವಿಲ್ಲದ	1–98
ಕೊಪ್ಪು = ಕಿರಿ ಆಭರಣ	21
ಕೊಂಡೆಯ = ಚಾಡಿ ಮಾತು, ಕೊಂಡೆಯ ಮಂಚಣ್ಣ	1–79
ಖಂಡಿಟ್ಟು = ಆಸೆ, ಅಪೇಕ್ಷೆ, ಬಯಸಿ	1–112
ಗಗ್ಗಾಳು = ಕಗ್ಗಾಡು, ದಟ್ಟ ಅರಣ್ಯ	4–33
ಗದಗಂಪಿಸು = ಬಲವಾದ ನಡುಕ ಕಂಪನ	6–53
ಗಂಧಸಾಳಿ = ಸುವಾಸನೆಯ ಭತ್ತ	1–66
ಗಂಧ = ತಿಲಕ, ಚಂದನ, ಸುವಾಸನೆ	5–36
ಗಂಪಳಿದ = ಕಂಪಳಿದ, ವಾಸನೆಯಿಲ್ಲದ, ಪ್ಲಾಸ್ಟಿಕ್ ಹೂ	4–16
ಗಂಪಿಸು = ಸ್ಪಂದಿಸು, ಓಗೊಡು	7–79
ಗಾಢ = ಅಪಾರ, ಚುರುಕು	4–55
ಗಾಢಿಕೆ = ಸಂಪತ್ತು	1–56
ಗಾವಿಲ = ದಡ್ಡ, ಹೆಡ್ಡ	3–79
ಗಿಂಡಿ = ಚಿಕ್ಕ ತಂಬಿಗೆ (ಪುಟ್ಟ ಬಾಯಿಯುಳ್ಳ)	2–15
ಗುಡುಗಾಯಿ = ಮಿಡಿ, ಮಿಡಿ ಮಾವಿನ ಕಾಯಿ	2–63
ಗೆಳದೇರು = ಗೆಳತಿಯರು	2–09
ಗೊಬ್ಬ = ಗೊಬ್ಬು, ಕೊಬ್ಬು, ಅಹಂಕಾರ, ನೆಣಗೊಬ್ಬು	6–93
ತೊರಬು = ರಕ್ಷಾ ಕವಚ	1–74
ಗೋಮಯದುರುಳಿ = ದುರುದುಂಬಿ	6–10
ಗೋಮಿನಿ = ಲಕ್ಷ್ಮಿ	7–18
ಗೋಹಳೆ = ತಿಪ್ಪೆ	5–35, 39
ಘೂಕ = ಗೂಗೆ, ಗೂಬೆ	3–59
ಘೊಳ್ಳನೆ = ಪಕ್ಕನೆ	6–63
ಚಂಬಟ = ತಂಬಟ	7–129
ಚಳೆಯ = ನೀರು ಸಿಂಪಡಿಸು	7–94
ಚೆಂಬುಯಿಲು = ಇಂಪಾದ ಧ್ವನಿ, ಸ್ತ್ರೀಯರ ಕಲರವ	2–58
ಚಿಟ್ಟಿಗರು = ಶಿಷ್ಯರು	5–50
ಛಾತ್ರ = ಶಿಷ್ಯರು, ವಿದ್ಯಾರ್ಥಿ	6–01
ಜಂಗ = ಪಾದ, ಕಿರುದೊಡೆ	6–34
ಜಂಗಳಿ = ಸಮೂಹ	2–91
ಜಂಘೆ = ಕಿರುದೊಡೆ	2–32
ಜಣುಗು = ಜಾರು	4–48
ಜಿಣುಗಿಸು = ನಾಶಪಡಿಸು	7–06

ಜಂಭಾರಿ = ಇಂದ್ರ, ಜಂಭನೆಂಬ ರಾಕ್ಷಸನ ಶತ್ರು	6–47
ಜವ = ಯಮ	6–76
ಝಡಿಪು = ಎರಗು	1–116
ಝಡಿಸಿದ = ಕೆತ್ತಲ್ಪಟ್ಟ	2–14
ಝಲ್ಲಿಸಿ = ಪ್ರಕಾಶ	6–56
ಟೊಣೆ = ಹಾನಿ	5–08
ಠಕ್ಕೆ = ಬಾವುಟ, ಧ್ವಜ	2–84
ಡಾಳಿಸು = ಬೀಸು, ಗಾಳಿ ಬೀಸು	4–46,776
ತಣ್ಣಯ್ಯ = ಚಂದ್ರ	1–02
ತಂಬಿಸು = ತಂಪು ಮಾಡು	7–113
ತತಿ = ಸಮೂಹ	1–105
ತರಿ = ಕತ್ತರಿಸು	1–78
ತಲ = ಅಂಗೈ, ಸ್ಥಲ, ಪದತಲ	7–39
ತಲೆನುತ = ಸ್ತುತಿಸು	1–04
ತವದ = ಧರಿಸಿದ	2–102
ತಳರು = ತೆರಳು	2–06
ತಿಲರಸ = ತಿಲ, ಎಳ್ಳು, ಎಣ್ಣೆ	3–25
ತಾಮಸ = ಅಜ್ಞಾನ	5–03
ತುಡುಗೆ = ತೊಡುಗೆ, ಆಭರಣ	1–17
ತುಡುಕಿ = ಎದುರಿಸಿ, ಅಡ್ಡಗಟ್ಟಿ, ತರುಬಿ	6–64
ತೋಮರ = ಈಟಿ	2–91
ದಕ್ಕರ = ಕಿವಿ	3–05
ದಜ್ಜಿಪುದು = ದಹಿಸುವುದು, ಹಿಡಿಯುವುದು	4–14, 6–87
ದಲೆ = ತಲೆ	7–51
ದಾಡೆ = ದಂತ, ದಂಷ್ಟ	4–15
ದಾನವ ವೈರಿ = ವಿಷ್ಣು	6–51
ದಿಮ್ಮಲಿ = ಚಲಿಸದ	5–44
ದೀಕ್ಷಿತ = ವ್ರತಿ, ವಟು, ಮುನಿ	1–46, 3–60
ದುತ್ತಿನ = ಹೆಚ್ಚಿನ	6–50
ದೃಗ–ದೃಗು – ದೃಕ್ಕು = ದೃಷ್ಟಿ	7–169
ದೊಕ್ಕನೆ = ತಕ್ಷಣ	3–10
ದ್ರೋಹ = ಪಾಪ	5–39
ನಿಕುರುಂಬವ = ಸಮೂಹ	1–106

ನಿಕ್ಷೇತ್ರ = ನಾಶ	1–19
ಕ್ಷೇತ್ರ = ನಿಕ್ಷೇತ್ರ	–
ನಿಚಯ = ಸಮೂಹ	2–74
ನಿತ್ಯೆ = ಸತ್ಯೆ, ಸತ್ಯವಂತೆ, ಧರ್ಮಿಷ್ಠೆ	7–173
ನಿಹಿತ = ಸದಾ	3–08
ನೀರ್ಮಣಿ = ಇಬ್ಬನಿ	2–50
ನೆರೆ = ಪ್ರವಾಹ	7–117
ಪಕ್ಕೆ = ಹಕ್ಕಿ, ಮನೆ	2–45
ಪಗಲರಸು = ಸೂರ್ಯ	3–08
ಪೊಂಗು = ಹಿಗ್ಗು, ಆನಂದ	7–179
ಪತಂಗೇಶ = ಸೂರ್ಯ	6–90
ಪಂಬಲ = ಹಂಬಲ, ಆಸೆ	1–48
ಪರಳು = ಹರಳು (ಗಟ್ಟಿ)	4–43
ಪರಿವಿಡಿ = ಕ್ರಮ, ರೀತಿ	6–161
ಪ್ರಹುಡಿಕೆ = ಪ್ರಬುದ್ಧ, ಪಕ್ವ	3–63
ಪಾಪವಾಸ = ಪಾಪಿಷ್ಠ, ಪಾಪಿ	4–25
ಪಾರದೆ = ಬೇಟೆ	1–117
ಪಾವಿಗಿ = ಒಂದು ಬಗೆಯ ಆಟ	2–35
ಪಾವಿನ ಪಗೆ = ಗರುಡ	6–43
ಪ್ರಾಜ್ಞ = ಜ್ಞಾನಿ	1–39
ಪಿರಿದಕ್ಕೆ = ಅಪಾರವಾದ ದುಃಖ	4–29
ಪಿಸಿತ = ಮಾಂಸ	4–51
ಪುರಾಣ = ಆಶ್ರಮ	6–103
ಪೂಷ =ಸೂರ್ಯ	1–109
ಪೆರ್ಬಡಿಕೆ = ಗಬ್ಬು ವಾಸನೆ	5–40
ಪೌಜು = ದಂಡು ಸೇನೆ	1–116
ಪೊಂಗಿ = ಸಂತೋಷ, ಆನಂದ	7–124
ಪೊಳಸು = ಪೊಲಸು, ಹೊಲಸು	5–16
ಬುಕ್ಕುಳೆದ್ದಾಡು = ಬೆರಗಾಗು	6–80
ಬಗ್ಗಿಲಿ = ಭಾಗ್ಯ ಓಲೆ ಭಾಗ್ಯ	1–23, 6–29, 7–165
ಬಂಬೊಲು = ಗೊಂಚಲು	5–38

ಬಲ+ಪೊಲ>ಬನ್ಪೊಲ>ಬನ್ಪೊಲ>ಬಂಬೊಲು; ಇದು ವನಕ್ಷೇತ್ರ ಎಂಬ ಶಬ್ದದ ಕನ್ನಡೀ'ರಣವಿರಬೇಕು, ವನ–ಬನ–ಪೊಲ	–
ಬತ್ತೀಸ = ಮೂವತ್ತೆರಡು	2–27
ಬನ್ನ = ಭಂಗ	1–08
ಬವಣೆ = ಕಷ್ಟ	4–41
ಬಾಡು = ಮಾಂಸ	4–51
ಬೆಟ್ಟಾಡು = ಹನಿ ದುಂಬು	6–13
ಬೀಳಲ = ಆಹುತಿ	6–63
ಬೊಕ್ಕಸ = ಖಜಾನೆ (ಆಭರಣ ಪೆಟ್ಟಿಗೆ)	2–34
ಬೊಬ್ಬುಳಿ = ಗುಳ್ಳೆ	2–73
ಬೋಸರಿಸು = ಗುಡಿಸು	6–127
ಭಗಮ್ಮೈಯ = ಇಂದ್ರ	1–98
ಭರ್ಮ = ಬಂಗಾರ	2–29
ಭೃತ = ಕೂಲಿ, ಸಂಬಳ	6–92
ಭ್ರಷ್ಠಿತ = ಆಚಾರ ರಹಿತ	442
ಭಾರಿಯ = ಪತ್ನಿ	7151
ಮಚ್ಚ = ಮತ್ಸ್ಯ	7–71
ಮಂಜಿಪ್ಪ = ಕೆಂಪುಬಣ್ಣ	275
ಮಂದವಿಸದ = ನಿಧಾನವಾಗದ, ಕುಂದದ	6–83
ಮರು ಜೀವಣೆ = ಸಂಜೀವಿನಿ	7114
ಮೃತ್ತಿಕೆ = ಕೀಳು, ಕಳಪೆ	532
ಮಾಕಂದ = ಮಾವಿನ ಚಿಗುರು	277
ಮಾದೊಲು = ಕಂದಿದಂತೆ	3–65
ಮಾರನಾ ಮಾತೆ = ಲಕ್ಷ್ಮಿ	4–17
ಮಿತ್ತು = ಮೃತ್ಯು	6–51, 78
ಮೀನಾಂಕ = ಮನ್ಮಥ,ಕಾಮ	326
ಮೀನ್ಬುಲಿಗ = ಕೊಕ್ಕರೆ	455
ಯಜನ = ಯಜ್ಞ, ಯಾಗ	7185
ರಜನಿ = ರಾತ್ರಿ	505
ರಳಿ = ಅವಸರ	774
ರಾಮಿಸು = ಪ್ರಕಾಶಿಸು	2–13
ರೊಚ್ಚಿಗ = ಕಿರಣ, ರಶ್ಮಿ	4–39
ಲೋಕ ಪಾವನೆ = ಗಂಗೆ	5–13

ಲೋಚ = ಮುಕ್ಕತರಿ 6–91
ವಸು = ಅಗ್ನಿ 7–195
ವಾಗೀಶ್ವರ = ಬ್ರಹ್ಮ 1–84
ವಾಯಿದೆರೆ = ಬಾಯಿತೆರೆ 1–88
ವ್ಯಾಳು = ಸರ್ಪ 5–23
ವಿಧು = ಚಂದ್ರ 1–08, 5–22
ವಿಪಳ = ವಿಮಲ, ಶುದ್ಧ 7–08
ವಿಯಸ್ಥಳ = ಆಕಾಶ 2–90
ವಿಶ್ವ ಕ್ಸೇನ = ಬ್ರಹ್ಮ 7–146
ವಿಸರುಹಾಸನ = ಬ್ರಹ್ಮ 3–67
ವೇದಿಸು = ತಿಳಿಸು 7–191
ವೈಹಾಳಿ = ಕುದುರೆ ವಿಹಾರ 3–7, 3–14
ಶಂಬರ = ರಾಕ್ಷಸ 7–204
ಶತಮುಖ = ಇಂದ್ರ 4–31
ಸುರಿಯ = ಶೌರ್ಯ, ಪರಾಕ್ರಮ 6–19
ಸಂಕ = ಸಮೂಹ 3–17
ಸಬ್ಬಗೆಡಿಸು = ವಿಕಾರ ಮಾಡು 5–65
ಸಬ್ಬ = ಸರ್ವ 7–102
ಸರಿ = ನೀರು 4–30
ಸ್ವರ್ನದಿ = ದೇವಗಂಗೆ 7205
ಸವುಜ್ಞೆ = ಸಂದೇಶ 7–86
ಸಾಯಸ = ತೊಂದರೆ ೬–೧೧೮
ಸಾಳುವ= ಗರುಡ, ಗಿಡುಗ, ರಣಹದ್ದು ೭೦, ೬–೫೩, ೬೩, ೬೬, ೭೦, ೭೬
ಸಿಂಗಿ = ಸಿಂಹಿಣಿ ೧–೧೧೩
ಸಿತಕಂಠ = ಈಶ್ವರ ೭–೧೪೨
ಸಿಂಧುರ = ಒಬ್ಬರ ರಕ್ಕಸ ೨–೦೮
ಸಿಸೆ = ಅತಿಶಯ ೪–೨೦
ಸಿಲೀ ಮುಖ = ದುಂಬಿ ೨–೯೩
ಸೀಯ್ = ಸೀರ್ದ ಹೆಚ್ಚಾಗಿ ಸುಡು ೪–೧೪
ಸೂಟಿದಡೆ = ಅಳಿಸಿದರೆ ೩–೬೮
ಸೂರ್ಪ = ಕೇರುವ ಸಾಧನ, ಮೊರ ೧–೧೩
ಸೂರಿಜ = ಸೂರ್ಯ ೪–೩೭
ಸೂಸದೆ = ಮಿಸುಕದ ೫–೪೪

ಕಳೆದ ಮೂರು ದಶಕಗಳಿಂದ ಗುಲಬರ್ಗಾ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆಯ ಜೊತೆಗೆ ಪ್ರಕಟಣೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು.

ಈ ಯೋಜನೆಗಳಲ್ಲಿ ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಹಾಗೂ ಪ್ರಕಟನಾ ಯೋಜನೆ ಭಾಗ-1 ರ ಪ್ರಧಾನ ಸಂಶೋಧಕರು ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ನಾಗಾಬಾಯಿ ಬಿ. ಬುಳ್ಳಾ ಅವರು ಈ ಯೋಜನೆಯಲ್ಲಿ ಹಲವಾರು ಅಪ್ರಕಟಿತ ಹಸ್ತಪ್ರತಿಗಳನ್ನು ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಹಸ್ತಪ್ರತಿಗಳನ್ನು ಪ್ರಕಟಿಸಿ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದಾರೆ. ಈ ಯೋಜನೆಯ ಸಂಪುಟಗಳು ಅಪೂರ್ವ ದಾಖಲೆಗಳೆನಿಸಿವೆ. ಹಸ್ತಪ್ರತಿಗಳನ್ನು ಸಂಪಾದನೆ ಮಾಡಿಕೊಟ್ಟಿರುವ ಸಂಪಾದಕರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಹಾಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು

₹.150/-

ISBN978-81-920449-5-8